ಕರ್ನಾಟಕ ವಿಧಾನ ಸಭೆ

ಬುಧವಾರ 1ನೇ ಏಪ್ರಿಲ್ 1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 10.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ :– ಗ್ರಾಮಾಂತರ ಪ್ರದೇಶಗಳಲ್ಲಿ ಆಂಗ್ಲ ಮಾಧ್ಯಮಿಕ ಶಾಲೆಗಳನ್ನು ತೆರಯಲು ಅವಕಾಶ

ವಾಟಾಳ್ ನಾಗರಾಜ್ (ಚಾಮರಾಜನಗರ):– ಸನ್ಮಾನ್ಯ ಅಧ್ಯಕ್ಷರೇ ಬಹಳ ಪ್ರಮುಖವಾದ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಮಾಡಿದ್ದೇನೆ.

ಅಧ್ಯಕ್ಷರು :– ನನಗೆ ಒಂದು ಅನುಮಾನ ನೀವು ಯಾವತ್ತು ಮುಖ್ಯವಾಗಿಲ್ಲದಿರುವ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ :– ಬಹಳ ಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕನ್ನಡ ಮಾಧ್ಯಮಶಾಲೆಗಳಲ್ಲಿ ಮುಚ್ಚುವ ರೀತಿಯಲ್ಲಿ ನಮ್ಮ ಕರ್ನಾಟಕ ಸರ್ಕಾರ ವಿದ್ಯಾ ಇಲಾಖೆ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿನ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ತೆರೆಯಲು ಅವಕಾಶ ಮಾಡಿಕೊಟ್ಟಿದ್ದಾರೆ. ಮತ್ತು 150 ಜನ ಶಾಸಕರು ಸಹಿ ಮಾಡಿಕೊಟ್ಟಿರತಕ್ಕಂಥದ್ದಕ್ಕೆ ಮಾನ್ಯತೆ ಕೊಟ್ಟಿದ್ದಾರೆ. ಅಕ್ರಮವಾಗಿ ನಡೆಯುತ್ತಿರತಕ್ಕಂಥ ಇಂಗ್ಲೀಷ್ ಶಾಲೆಗಳನ್ನು ಸಕ್ರಮ ಮಾಡುವಂಥ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೋಗಿದ್ದಾರೆ. ಇದು ಸರ್ಕಾರ ನಿಜವಾಗಿ ಮಾಡಿರತಕ್ಕಂಥ ಅಪರಾಧ ಮತ್ತು ಅಗೌರವ. ಕನ್ನಡ ಭಾಷೆಗೆ ನಿಜವಾಗಿಯೂ ಅಗೌರವ ಮಾಡತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ. ದಯವಿಟ್ಟು ಅವರು ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಇವತ್ತು ನೀವು ಹೇಳತಕ್ಕಂಥ ಭಾಷಾ ನೀತಿ ಏನು? ಸರ್ಕಾರದ ನೀತಿ ಏನು? ನಿಮ್ಮ ನಿಲುವು ಏನು? ಒಂದುಕಡೆ ನೀವು ಈ ರೀತಿ ಹೇಳುವುದು, ಮತ್ತೊಂದು ಕಡೆ ಸರ್ಕಾರ ಆದೇಶ ಹೊರಡಿಸತಕ್ಕಂಥದ್ದು ಯಾವರೀತಿ? ನಿಮ್ಮ ನಿಲುವು ಏನೆನ್ನತಕ್ಕಂಥದ್ದನ್ನು ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು :– ಮಾನ್ಯ ಸದಸ್ಯರು ಒಂದು ಹೊಸ ಸಂಪ್ರದಾಯವನ್ನು ಪ್ರಾರಂಭ ಮಾಡುತ್ತಿದ್ದಾರೆ. ತಾವು ಅದಕ್ಕೆ ಅವಕಾಶವನ್ನು ಕೊಡುವುದು ಅಷ್ಟು ಸೂಕ್ತವಲ್ಲ.

ಅಧ್ಯಕ್ಷರು:– ಈಗ ಅರ್ಜಿಗಳನ್ನು ಒಪ್ಪಿಸುವುದು.

ಶ್ರೀ ವಾಟಾಳ್‌ನಾಗರಾಜ್ :–ಸ್ವಾಮಿ ದಯವಿಟ್ಟು ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು.

ಅಧ್ಯಕ್ಷರು :– ಅಲ್ಲ, ಅಲ್ಲ, ಲಘುವಾಗಿ ತೆಗೆದುಕೊಳ್ಳುವ ಪ್ರಶ್ನೆಯಿಲ್ಲ. ಎಲ್ಲ ರೂಲ್ ಪ್ರಕಾರವೇ ತೆಗೆದುಕೊಳ್ಳುತ್ತಿರುವುದು.

ಶ್ರೀ ವಾಟಾಳ್‌ನಾಗರಾಜ್ :– ಈಗ ಸರ್ಕಾರಿ ಆಜ್ಞೆಗಳನ್ನು ತಮಗೆ ಕಳುಹಿಸುತ್ತಿದ್ದೇನೆ. ಒಂದು ನಿಮಿಷ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :– ನಿಮ್ಮ ಹುಡುಗರು ಎಲ್ಲಿ ಓದುತ್ತಿದ್ದಾರೆ, ಯಾವ ಯಾವ ಕ್ಲಾಸ್‌ಗಳಲ್ಲಿ ಓದುತ್ತಿದ್ದಾರೆಂಬುದನ್ನು ಹೇಳಬೇಕು.

ಶ್ರೀ ವಾಟಾಳ್‌ನಾಗರಾಜ್ :– ನಮ್ಮ ಹುಡುಗರು.

ಅಧ್ಯಕ್ಷರು :– ನಿಮ್ಮ ಹುಡುಕರು ಎಲ್ಲಿ ಓದುತ್ತಿದ್ದಾರೆನ್ನುವುದನ್ನು ಲಾಬಿಯಲ್ಲಿ ಒಳ್ಳೆಯ ಸುಖಾಸನಗಳು ಹಾಕಿವೆ. ನಿಮ್ಮ ಹುಡುಗರು, ನಿಮ್ಮಹುಡುಗರು ಎಲ್ಲಿ ಓದುತ್ತಿದ್ದಾರೆಂಬುದನ್ನು ಉ.ಹ. ಸಾಂಪ್ರತ ಕೇಳಿಕೊಂಡು ಇಲ್ಲಿಗೆ ಬರಬೇಕು. . . . . . .

ಶ್ರೀ ಕೆ.ಹೆಚ್. ಹನುಮೇಗೌಡ :— ಕನ್ನಡದ ಬಗ್ಗೆ ಅಷ್ಟು ಅಭಿಮಾನದಿಂದ ಮಾತನಾಡುವವರು.

(ಗೊಂದಲ)

ಶ್ರೀ ಪಿ.ಜಿ.ಆರ್ . ಸಿಂಧ್ಯ:— ಮಾನ್ಯ ಅಧ್ಯಕ್ಷರೇ ಈಗ ಪ್ರತಿಯೊಂದು ತಾಲ್ಲೂಕಿನಲ್ಲಿ 4--4 ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ತೆಗೆಯಬೇಕು. ಈಗ ಏನಾಗುತ್ತಿದೆ ಎಂದರೆ ಕಳದಸಾರಿ ಸೆಷನ್ ನಡೆದಾಗ ಹಲವಾರು ಶಾಸಕರು ಅದಕ್ಕೆ ಸಹಿ ಮಾಡಿ ಸರ್ಕಾರಕ್ಕೆ ಕೊಟ್ಟಿದ್ದಾರೆಂದು ಹೇಳಿದ ತಕ್ಷಣವೇ ತಮ್ಮ ಪರವಾನಿಗೆ ಇಲ್ಲದೆ, ಇಂಗ್ಲೀಷ್ ಶಾಲೆಗಳನ್ನು ಪ್ರಾರಂಭಮಾಡುವುದಕ್ಕೆ ಶುರುಮಾಡಿದರು ಈಗ ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಕನ್ನಡ ಶಾಲೆಗಳನ್ನು ತೆರೆಯಲಿಕ್ಕೆ ಅನುಮತಿಯೇ ಬೇಕಾಗಿಲ್ಲವೆನ್ನುವ ವಿಚಾರವನ್ನು ಹೇಳಿದ್ದಾರೆ. ಅದನ್ನು ಸ್ವಾಗತಮಾಡುತ್ತೇನೆ. ಆದರೆ ಅದೇ ಪ್ರಮಾಣದಲ್ಲಿ ತಾವು ಇಂಗ್ಲೀಷ್ ಶಾಲೆಗಳಿಗೂ ಸಹಿತ ಅನುಮತಿ ಕೊಡುತ್ತೇವೆಂದು ಹೇಳಿ ತಮ್ಮ ಧ್ವನಿಯಲ್ಲಿ ಬದಲಾವಣೆಯಾಗಿರತಕ್ಕಂಥದ್ದನ್ನು ನೋಡಿದರೆ ಇದು ಭಾಷಾ ನೀತಿ ಏನಿದೆ ಅದಕ್ಕೆ ವಿರುದ್ಧವಾಗುತ್ತದೆ. ಅದಕ್ಕೆ ದಯವಿಟ್ಟು ತಮಗೆ ಕೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನಿದೆ ಎಂದು. ಏತಕ್ಕೆಂದರೆ ತಮಗೆ ಗೊತ್ತಿರುವಹಾಗೆ ಮೇನಲ್ಲಿ ಶಾಲೆಗಳು ಪ್ರಾರಂಭವಾಗುತ್ತದೆ. ಈಗಾಗಲೇ ಒಂದು ಕಡೆ ವಿಧಾನ ಸಭೆಯಲ್ಲಿ ಅಥವಾ ಹೊರಗಡೆ ನಮ್ಮ ಒಂದು ಧೋರಣೆ ಈ ಪ್ರಕಾರವಾಗಿದೆ ಎಂದು ಸೂಕ್ಷ್ಮವಾಗಿ ಹೇಳಿದರೆ ಸಾಕು ಪ್ರಾರಂಭವಾಗುತ್ತದೆ. ಅದಕ್ಕೆ ದಯವಿಟ್ಟು ಸರ್ಕಾರದ ಧೋರಣೆಯನ್ನು ಸ್ಪಷ್ಟೀಕರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕರಯಣ್ಣ :— ಮಾನ್ಯ ಅಧ್ಯಕ್ಷರೇ ಇವರು ಗ್ರಾಮಾಂತರ ಪ್ರದೇಶಗಳಲ್ಲಿ ಇಂಗ್ರೀಷ್ ಮೀಡಿಯಮ್ ಶಾಲೆಗಳನ್ನು ತೆರೆಯಲೇಬಾರದು ಎನ್ನುವ ರೀತಿಯಲ್ಲಿ ನಮ್ಮ ವಾಟಾಳ್‌ನಾಗರಾಜ್‌ರವರು ಮಾತನಾಡುತ್ತಿದ್ದಾರೆ. ಎಲ್ಲ ಬೆಂಗಳೂರಿನಲ್ಲಿಯೇ ಇರಬೇಕು? ಈ ಇಂಗ್ಲೀಷ್ ಶಾಲೆಗಳನ್ನೇ ಕ್ಯಾನ್ಸಲ್ ಮಾಡಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಗ್ರಾಮೀಣ ಮಕ್ಕಳು ಶಾಲೆಗಳಲ್ಲಿ ಇಂಗ್ಲೀಷನ್ನು ಓದಬಾರದೆನ್ನುವುದು ಅವರ ನಿಲುವಾಗಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :— ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸದನದ ಎಲ್ಲ ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಂಡು ನಾನು ಒಂದು ಹಕ್ಕುಚ್ಯುತಿ ಪ್ರಶ್ನೆಯನ್ನು ಎತ್ತಿದ್ದೆ. ಈ ಸದನದ ಪ್ರಾರಂಭವಾಗುವ ಕಾಲಕ್ಕೆ ಇದರ ಬಗ್ಗೆ ಏನಾಗಿದೆ ಎನ್ನುವುದನ್ನು ತಿಳಿದುಕೊಳ್ಳುವುದಕೋಸ್ಕರ. ಮತ್ತೆ ಈ ಭಾಷೆಯ ಬಗ್ಗೆ ಒಂದು ಮಾತನ್ನು ಹೇಳುವುದೇನೆಂದರೆ ಈ ಪ್ರಶ್ನೆ ಎತ್ತಿದ್ದು ಏತಕ್ಕೆಂದರೆ ಹಲವಾರು ಜನ ಶಾಸನಸಭಾ ಸದಸ್ಯರು ಇಂಗ್ಲೀಷ್ ಮಾಧ್ಯಮ ಶಾಲೆಗಳ ಬಗ್ಗೆ ಒತ್ತಾಯವನ್ನು ಮಾಡಿದ್ದಾರೆ. ಈ ಕಾರಣ ನಾನು ತಮಗೆ ವಿನಂತಿಮಾಡಿಕೊಳ್ಳುವುದೇನೆಂದರೆ ಈ ಭಾಷಾ ಮತ್ತು ಶಿಕ್ಷಣ ಮಾಧ್ಯಮ ಇದರ ಬಗ್ಗೆ ವಿವರವಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಏತಕ್ಕೆಂದರೆ ಇದು ಬಹಳ ಮುಖ್ಯವಾದ ವಿಚಾರ. ನಮ್ಮಲ್ಲಿ ಇಂಗ್ಲೀಷ್ ವ್ಯಾಮೋಹ ಏನೋ ಕಾರಣದಿಂದ ಬೆಳೆಯುತ್ತಿದೆ. ಇಂಗ್ಲೀಷ್ ಮಾಧ್ಯಮ ಶಾಲೆಗೆ ನಮ್ಮ ಮಕ್ಕಳುಗಳಿಗೆ ಶಿಕ್ಷಣ ಕೊಡುವ ಮೂಲ ವೃತ್ತಿ ಬೆಳೆಯುತ್ತಿದೆ. ನಮ್ಮ ಮಕ್ಕಳನ್ನು ನಾವು ಹತ ಮಾಡುವಂತ ಕೆಲಸ ನಡೆಯುತ್ತಿದೆ. ಆ ಕಾರಣ ನಮ್ಮ ಶಾಸಕರು ಶಿಕ್ಷಣದ ಮಾಧ್ಯಮದ ಬಗ್ಗೆ ಹೆಚ್ಚಿನ ಒಂದು ಚರ್ಚೆಮಾಡುವ ಮೂಲಕ ಒಳ್ಳೆಯದಾಗಬಹುದು ಎನ್ನುವ ನಂಬಿಕೆಯ ಕಾರಣ ಇದಕ್ಕೆ ಒಂದು ವಿವರವಾದ ಚರ್ಚೆನಂತರ ತಾವು ಏನಾದರು ನಮ್ಮ ರಾಜ್ಯದಲ್ಲಿ ಶಿಕ್ಷಣ ಮಾಧ್ಯಮ ನೀತಿ ತಾವು ರೂಪಿಸಿಕೊಳ್ಳಬೇಕು. ನಾನು ಮಾತೃಭಾಷೆ ಎಂದು ಮಾತನಾಡುತ್ತಿಲ್ಲ, ಪ್ರಾದೇಶಿಕ ಭಾಷೆ ಎಂದು ಮಾತನಾಡುತ್ತಿಲ್ಲ. ನಾನು ಒಬ್ಬ ಶಿಕ್ಷಕನಾಗಿ ಆ ಹೆಸರನ್ನು ಬದಲಾವಣೆ ಮಾಡಿಕೊಂಡಿದ್ದೇನೆ. 'ಮಗುವಿನ ಭಾಷೆ' ಎಂದು. Education should be through the child's language not even the mather-tongue. ಮಗುವಿನ ಭಾಷೆ ಮೂಲಕ ಶಿಕ್ಷಣ ಆಗಬೇಕು. ಇದರ ಬಗ್ಗೆ ತಿಳುವಳಿಕೆ ನಮ್ಮ ಜನಗಳಿಗೆ ಬರಬೇಕು. ಮಗು ಎಲ್ಲಾ ಚಟುವಟಿಕೆಯನ್ನು ಯಾವ ಭಾಷೆಯಲ್ಲಿ ಮಾಡುತ್ತದೆ ಅದೇ ಭಾಷೆಯಲ್ಲಿ ಶಿಕ್ಷಣವಾದರೆ ಅದು ಅತ್ಯುತ್ತಮ ವೈಜ್ಞಾನಿಕ ಶಿಕ್ಷಣ ಎಂಬುದನ್ನು ಎಲ್ಲಾ ಶಿಕ್ಷಣ ತಜ್ಞರು ಒಪ್ಪಿರುವ ವಿಚಾರ ಇಡೀ ಪ್ರಪಂಚದಲ್ಲಿ. ಆದುದರಿಂದ ಇದರ ಬಗ್ಗೆ ವಿವರವಾಗಿ ಚರ್ಚೆ ಆಗಲಿ.

ನನ್ನ ಹಕ್ಕುಚ್ಯುತಿ ಪ್ರಶ್ನೆಗೆ ಬೇರೆ ಎಲ್ಲಾ ವಿಚಾರಗಳಿಗಿಂತ ಪ್ರಾಮುಖ್ಯತೆ ಇದೆ ಎಂದು ಈ ಸದನದ ನಿಯಮಗಳ ಪ್ರಕಾರ ತಿಳಿದುಕೊಂಡಿದ್ದೇನೆ. ಪ್ರಾರಂಭದಲ್ಲಿ ವಾಟಾಳ್‌ನಾಗರಾಜ್ ಅವರು ವಿನಂತಿ ಮಾಡಿದರು ಎಂದು ಕುಳಿತುಕೊಂಡೆ. ಇದು ಸದನದ ಗೌರವದ ಪ್ರಶ್ನೆ. ಇದಕ್ಕೆ ಅವಕಾಶ ಮಾಡಿಕೊಡಲಿಲ್ಲವೆಂದು ನನಗೆ ಬೇಜಾರಾಗಿದೆ. ಇದು ನನ್ನ ವ್ಯಯಕ್ತಿತ ಪ್ರಶ್ನೆ ಅಲ್ಲ. ಸದನದ ಗೌರವದ ಪ್ರಶ್ನೆ, ನಿಮ್ಮೆಲ್ಲರ ಗೌರವದ ಪ್ರಶ್ನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನನ್ನ ಮೇಲೆ ಆಧಾರರಹಿತ ಆರೋಪ ಮಾಡಿದ್ದಾರೆ. ಅದರ ಮೇಲೆ ಹಕ್ಕುಚ್ಯುತಿ ಪ್ರಶ್ನೆ ಎತ್ತಿದ್ದೆ. ಸದನ ಮುಗಿಯುವ ಕಾಲಕ್ಕೆ ಅದು ಏನಾಯಿತು ಎನ್ನುವುದು ಗೊತ್ತಿಲ್ಲ. ಈ ಹಕ್ಕುಚ್ಯುತಿ ಪ್ರಶ್ನೆಯನ್ನು ಆದಷ್ಟು ಬೇಗ ಬಗೆಹರಿಸಬೇಕು. ಅವರು ನನ್ನ ಹತ್ತಿರ ತಮ್ಮ ರಾಯಭಾರಿಗಳನ್ನು ಕಳುಹಿಸುತ್ತಿದ್ದರು.

ಶ್ರೀ ವಾಟಾಳ್‌ನಾಗರಾಜ್:– ಅವರು ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುವುದಿಲ್ಲ.

ಪ್ರೊ. ಎಂ.ಡಿ. ನಂಜುಂಡ ಸ್ವಾಮಿ :– ಅವರು ನನಗಿಂತ ಹಿರಿಯ ಸದಸ್ಯರು. He should know that a question of privilege takes.

ಶ್ರೀವಾಟಾಳ್ ನಾಗರಾಜ್ :– ನಂಜುಂಡಸ್ವಾಮಿಯವರಿಂದ ನಾನು ಪಾಠ ಕಲಿಯಬೇಕಾಗಿಲ್ಲ. ಅವರ ಬಗ್ಗೆ ನನಗೆ ಗೌರವ ಇದೆ. ಈಗ ಅವರು ಕಲಿಯಬೇಕು ಬಿಡಬೇಕು ಎಂದು ಪಾಠ ಹೇಳುವುದಕ್ಕೆ ಹೋದರೆ ಅದು ಸರಿಯಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ಹಾಗಲ್ಲ, I choose my disciples also. I am not trying to teach Mr. Vatal Nagaraj. ಮಧ್ಯೆ ಹೆಗಡೆಯವರು ರಾಯಭಾರಿಗಳನ್ನು ಕಳುಹಿಸುತ್ತಿದ್ದರು, ನನ್ನದು ತಪ್ಪಾಗಿದೆ, ನಾನು ಸದನಕ್ಕೆ ಬಂದಾಗ ವಿಷಯ ಎತ್ತಲಿ, ಕ್ಷಮಾಪಣೆ ಕೇಳುತ್ತೇನೆ. ಎಂದು. ಆದರೆ ಅವರು ಮೊಗಸಾಲೆಗೆ ಬಂದವರು ಸದನದ ಒಳಗೆ ಬರಲಿಲ್ಲ. ಇಲ್ಲಿಯೂ ಅವರು ಜಾಣತನ ಮಾಡುತ್ತಿದ್ದಾರೆಂದು ಗುಮಾನಿ ಬಂದಿರುವುದರಿಂದ ಇದನ್ನು ತಾವು ಬಗೆಹರಿಸಬೇಕು. ನನ್ನ ಹಕ್ಕನ್ನು ರಕ್ಷಣೆ ಮಾಡಿಕೊಡಬೇಕು. ಕ್ರಿಮಿನಲ್ ಕೋರ್ಟಿಗೆ ಏನು ಅಧಿಕಾರ ಇದೆ ಆ ಅಧಿಕಾರ ತಮಗೆ ಇರುವುದರಿಂದ ವಾರಂಟ್ ಹೊರಡಿಸಿ ಸದನಕ್ಕೆ ಕರೆಸಿ ಅವರ ಕ್ಷಮಾಪಣೆ ತೆಗೆದುಕೊಳ್ಳಬೇಕು. ತಾವು ಪತ್ರ ಬರೆದಿದ್ದೀರಾ, ಕ್ರಮ ತೆಗೆದುಕೊಂಡಿದ್ದೀರಾ ಏನಾಗಿದೆ ಎಂದು ತಿಳಿಸಬೇಕು.

ಶ್ರೀ ಶಿವರಾಮೇಗೌಡರು ಮಧ್ಯೆ ಮಾತನಾಡಲು ನಿಂತರು.

ಅಧ್ಯಕ್ಷರು :– ನಾನು ಹಕ್ಕುಚ್ಯುತಿಯನ್ನು ಮೊದಲು ಬಗೆಹರಿಸಲೇ ಅಥವಾ ಏನು ಮಾಡಲಿ? ನೀವು ಹೇಳಿದ ಹಾಗೆ ಕೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :– ಇಲ್ಲ, ತಾವು ಹೇಳಿದ ಹಾಗೆ ಕೇಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ :– ಕನ್ನಡ ಶಾಲೆಗಳು ಬೆಳೆಯಬೇಕು, ಈ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಅಭಿಪ್ರಾಯ ಕೊಡಬೇಕು. ಕೆಲವರು ರಾಜ್ಯದ ಮಾತೃಭಾಷೆಯಲ್ಲಿ ಶಾಲೆ ಕಲಿಸುತ್ತಿದ್ದಾರೆ. ನಮ್ಮಲ್ಲಿ ಇನ್ನೂ ಇಂಗ್ಲೀಷ್ ವ್ಯಾಮೋಹ ಹೋಗಿಲ್ಲ. ಎಲ್ಲರೂ ಕನ್ನಡದಲ್ಲಿ ಕಲಿಯಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಅಭಿಪ್ರಾಯವನ್ನು ಸರ್ಕಾರದ ಪರವಾಗಿ ನೀಡಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ :– 72 ಮಂದಿ ಶಾಸಕರು ಗ್ರಾಮಾಂತರ ಪ್ರದೇಶಗಳಲ್ಲಿ ಇಂಗ್ಲೀಷ್ ಮಾಧ್ಯಮ ಬೇಕು, ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಇಂಗ್ಲೀಷ್‌ನಲ್ಲಿ ವಿದ್ಯಾಭ್ಯಾಸ ಆಗಬೇಕೆಂದು ಸರ್ಕಾರಕ್ಕೆ ಮನವಿ ಕೊಟ್ಟಿದ್ದಾರೆ. ಈಗ ಅಧಿವೇಶನ ಕೊನೆಯಾಗುತ್ತಿದೆ. ಬೇಡಿಕೆ ಮೇಲೂ ಕೂಡ ಈ ಬಗ್ಗೆ ಹೇಳಿದ್ದೇನೆ. ದಯವಿಟ್ಟು ಅದನ್ನು ಸ್ಪಲ್‌ಔಟ್ ಮಾಡಬೇಕು. ನಮ್ಮ ಪರವಾಗಿ, ರಾಜ್ಯದ ಪರವಾಗಿ ಇದನ್ನು ಹೇಳತಕ್ಕವರು ಕನ್ನಡ ದ್ರೋಹಿಗಳಲ್ಲ. ಇದೊಂದರ ಮೇಲೆ ಕನ್ನಡದ ದ್ರೋಹಿಗಳು, ಪರ, ವಿರೋಧ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್‌ನಾಗರಾಜ್ :— ಒಂದು ಸಾರಿ ಹೇಳಿ ನಾಗಮಂಗಲದ ನಾಟಕದಲ್ಲಿ ಎಲ್ಲಾ ಜನರು ಹಿಡಿದುಕೊಂಡರು. ಈ ರೀತಿ ಹೇಳುತ್ತಿದ್ದರೆ ಊರೊಳಗೆ ಬಿಡುವುದಿಲ್ಲ. ಇಲ್ಲೇನೋ ಉತ್ಸಾಹದಿಂದ ಮಾತನಾಡುತ್ತಾರೆ. ಅಲ್ಲಿ ತಲೆಗೆ ಶಾಲು ಹೊದ್ದುಕೊಂಡು ಹೋಗುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ :— ಮಾನ್ಯ ಅಧ್ಯಕ್ಷರಿಗೆ ನೀವು ಹೇಳಿದ್ದಕ್ಕಿಂತ ವಿಚಾರ ಚೆನ್ನಾಗಿ ಗೊತ್ತಿದೆ.

ಶ್ರೀ ಎಲ್.ಆರ್ ಶಿವರಾಮೇಗೌಡ :— ಅಧ್ಯಕ್ಷರಿಗೂ ಗೊತ್ತಿದೆ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಸರ್ಕಾರವೇ ಅಥವಾ ನಾವು ಇಲ್ಲಿ ಏನು ಮಾತನಾಡುತ್ತೇವೆ, ಏನು ತೊಂದರೆ ಕೊಡುತ್ತಿದ್ದೇವೆ, ಏನು ಏರಡು ಮಾಡುತ್ತಿದ್ದೇವೆ ಎಂಬುದು. . .

ಶ್ರೀ ಎನ್.ಜಿ. ನಾಯಕ್:— ಅಧ್ಯಕ್ಷರೇ . . . .

ಶ್ರೀ ಎ. ವೀರಪ್ಪ ಮೊಯಿಲಿ :— ಸನ್ಮಾನ್ಯ . . . .

ಅಧ್ಯಕ್ಷರು :— ಶ್ರೀ ನಾಯಕ್ . . . .

ಶ್ರೀ ಎನ್.ಜಿ. ನಾಯಕ್ :— ಸನ್ಮಾನ್ಯ ಅಧ್ಯಕ್ಷರೆ. . . .

ಅಧ್ಯಕ್ಷರು :— ಇದು ಮೊಳಕಾಲ್ಮೂರಿಗೆ ಸಂಬಂಧಪಟ್ಟಿದ್ದಲ್ಲ. ರಾಜ್ಯಕ್ಕೆ ಸಂಬಂಧಿಸಿದ್ದುದು.

ಶ್ರೀ ಎನ್.ಜಿ ನಾಯಕ್ :— ಇದು ಈ ಸದನಕ್ಕೆ ಸಂಬಂಧಪಟ್ಟಿದ್ದು ಎಂದು ನಾನು ಹೇಳುತ್ತಿದ್ದೇನೆ. ಈಗ ನಮ್ಮ ಸ್ನೇಹಿತರಾಗಿರತಕ್ಕ ವಾಟಾಳ್ ನಾಗರಾಜ್ ಇದ್ದಾರಲ್ಲ ಅವರು ಯಾವುದಕ್ಕೆ ನೋಡಿದರೂ ಸುಮ್ಮನೆ ಮಾವಿನಕಾಯಿ ಓಟೆ ಅಲ್ಲಾಡುತ್ತದಲ್ಲ ಹಾಗೆ ಅಲ್ಲಾಡುತ್ತಾರೆ. ಅದಕ್ಕೆ ಅವರಿಗೆ ಹೇಳುತ್ತಿದ್ದೇನೆ. ನಿನ್ನೆ ಕೂಡ ನನಗೇನೂ ಗೊತ್ತಿಲ್ಲ ಎಂದು ಹೇಳಿದರು. ನಾನು ಕ್ಲಾಸ್ (1) ಆಫೀಸರ್ ಆಗಿದ್ದೆ. ಅವರು ಯಾತರದ್ದೂ ಇಲ್ಲ. ಅದಕ್ಕೆ ಹೇಳುತ್ತಿದ್ದೇನೆ ಸದನದಲ್ಲಿ ಅವರಿಗೆ ಸರಿಯಾಗಿ ಹೇಳಬೇಕು. ಯಾರಾದರೂ ಮಾತನಾಡಲಿ. ಅವರು ಮಾತನಾಡುವುದು ಒಳ್ಳೆಯ ವಿಷಯ. ರೈತರ ಪ್ರೆಷರ್ ಇದೆ. ಅದು ಆತನಿಗೆ ಗೊತ್ತಾಗುವುದಿಲ್ಲ. ಬರೀ ಕನ್ನಡ ಕನ್ನಡ. ಬರೀ ಕನ್ನಡ ಇಟ್ಟುಕೊಂಡು ಪರದೇಶಕ್ಕೆ ಹೋಗುತ್ತಾರಾ ಕೇಳಿ. ಹೋಗಿ ಕನ್ನಡ ಮಾತನಾಡಿಕೊಂಡು ಬರುತ್ತಾರೇನೋ? ಇಂಗ್ಲೀಷ್ ಇರಲೇಬೇಕು. ಇಂಟರ್‌ನ್ಯಾಷನಲ್ ಸಬ್ಜೆಕ್ಟ್ ಇರಲೇಬೇಕು. ಇದ್ದರೆ ಮುಖ್ಯ. ನಾನಾಗಲೀ ಯಾರೇ ಆಗಲೀ ಬರೀ ಕನ್ನಡ ಓದಿ ಅಮೆರಿಕಾಕ್ಕೆ ಹೋಗಿ ಬರುವುದಕ್ಕಾಗುವುದದಿಲ್ಲ. ಇಂಗ್ಲೀಷ್ ಇದ್ದರೆ ಎಲ್ಲಿ ಬೇಕಾದರೂ ಮಾತನಾಡಿಕೊಂಡು ಬರಬಹುದು. ಆದ್ದರಿಂದ ಒಂದು ಸಬ್ಜೆಕ್ಟ್ ಇರಲೇಬೇಕು ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ.ಎಂ. ಇದಿನಬ್ಬ :— ಸನ್ಮಾನ್ಯ ಅಧ್ಯಕ್ಷರೆ, ಈಗ ಮಂತ್ರಿಗಳು ಉತ್ತರ ಕೊಡುತ್ತಾರೆ.

ಅಧ್ಯಕ್ಷರು :— ಇನ್ನೂ ಉತ್ತರ ಕೊಟ್ಟಿಲ್ಲ ಮಂತ್ರಿಗಳು.

ಶ್ರೀ ಬಿ.ಎ. ಇದಿನಬ್ಬ :— ಗ್ರಾಮಾಂತರ ಪ್ರದೇಶದಲ್ಲಿ ಇಂಗ್ಲೀಷ್ ಮಾಧ್ಯಮವಾಗಬೇಕು. ಅಥವಾ ಕನ್ನಡ ಮಾಧ್ಯಮವಾಗಬೇಕು ಎಂಬ ವಿಷಯಕ್ಕೆ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಶಾಸಕರು ಒಂದು ಸಹಿ ಸಂಗ್ರಹಣೆ ಮಾಡಿದರು. ನನ್ನ ಹತ್ತಿರ ಬಂದರು. ನಾನು ಸಂಪೂರ್ಣವಾಗಿ ಆಗುವುದಿಲ್ಲ ಎಂದು ಹೇಳಿಬಿಟ್ಟ ಮೊನ್ನೆ ಕೂಡ ಕಲಿಕ್ಷನ್ ಬಂದರು. ಆಗುವುದಿಲ್ಲ ಎಂದು ಹೇಳಿದೆ.

ಅಧ್ಯಕ್ಷರು :— ಏನು ಕಲೆಕ್ಷನ್‌ಗೆ ಬಂದರು .

ಶ್ರೀ ಬಿ.ಎಂ. ಇದಿನಬ್ಬ :— ದಸ್ಕತ್‌ಗೆ.

ಅಧ್ಯಕ್ಷರು :— ಏಕೆಂದರೆ ಸ್ಪಷ್ಟವಾಗಿ ಹೇಳಿ. ಕಲೆಕ್ಷನ್ ವಿಷಯದಲ್ಲಿ ಬಹಳ ಹೆಚ್ಚುಕಡಿಮೆ ಆಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ :— ಇಂಗ್ಲೀಷ್ ಮಾಧ್ಯಮವಾಗಬೇಕು ಎಂದು ಸಹಿ ಹಾಕುವುದಕ್ಕೆ ಕೇಳಿದರು. ನಾನು ಹಾಕಲಿಲ್ಲ. ನನ್ನ ಮನಸ್ಸಿನ ಅಭಿಪ್ರಾಯವನ್ನು ತೋರಿಸಿದ್ದೇನೆ. ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡುತ್ತಾರೆ.

ಶ್ರೀ ಕೆ. ಸೋಮಪ್ಪ ಸುವರ್ಣ :— ಈಗಾಗಲೇ ಹಲವಾರು ಇಂಗ್ಲೀಷ್ ಶಾಲೆಗಳು ತೆರೆಯಲ್ಪಟ್ಟು ಅದಕ್ಕೆ ಕೆಲವು ವರ್ಷಗಳಿಂದ ಅನುಮತಿ ಸಿಕ್ಕದೆ ಈ ಮಕ್ಕಳ ಪರಿಸ್ಥಿತಿ ಬಹಳ ದ್ವಂದ್ವ ಸಮಸ್ಯೆಯನ್ನು

ಎದುರಿಸುತ್ತಿದ್ದಾರೆ. ಒಂದು ದೃಢ ನಿರ್ಧಾರವನ್ನು ಇದರ ಬಗ್ಗೆ ತಾಳಬೇಕಾಗಿದೆ. ಏಕೆಂದರೆ ಇಡೀ ಕರ್ನಾಟಕಕ್ಕೆ ಒಂದು ಸೂತ್ರ ಮಾತ್ರ ಆಗಬೇಕು. ಹಳ್ಳಿ ಮಕ್ಕಳಿಗೆ ಒಂದು ಸೂತ್ರ ಪೇಟೆ ಮಕ್ಕಳಿಗೆ ಒಂದು ಸೂತ್ರ, ಈ ರೀತಿಯ ಸೂತ್ರ ಆದರೆ ಬಹಳ ಕಷ್ಟ. ಇದರಲ್ಲಿ ಮಾತೃಭಾಷೆ ಎಂಬುದನ್ನು ನಾನು ಒಪ್ಪುವುದಿಲ್ಲ. ರಾಜ್ಯಭಾಷೆ ಎಂದು ಹೇಳಬೇಕು. ಏಕೆಂದರೆ ನಮ್ಮಲ್ಲಿ ತುಳು, ಕೊಂಕಣಿ ಮಾತನಾಡುವ ಜನರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವಂಥದ್ದು. ನಮ್ಮ ಜನಗಳು ಪರದೇಶಕ್ಕೆ ಹೋಗುತ್ತಿದ್ದಾರೆ. ದುಬಾಯಿ ಅಮೆರಿಕಾ ಇಂಗ್ಲೇಂಡ್‌ನಲ್ಲಿ ಪಾಸ್‌ಪೋರ್ಟ್ ಆಫೀಸ್‌ನಲ್ಲಿ ಲೆಕ್ಕಾಚಾರ ನೋಡುವಾಗ ಕರ್ನಾಟಕದ ಅರ್ಧಾಂಶ ಜನ ಯಾರು ಹೊರದೇಶಕ್ಕೆ ಹೋಗುತ್ತಾರೆ ಅವರು ದಕ್ಷಿಣ ಕನ್ನಡ ಜಿಲ್ಲೆಯವರು. ನಿಜವಾಗಿ ನಮ್ಮಲ್ಲಿ ಅಂಗ್ಲಭಾಷೆಗೆ ಸ್ವಾಭಾವಿಕವಾಗಿ ಆಕರ್ಷಣೆ ಉಂಟು. ಏಕೆಂದರೆ ಹೆತ್ತವರು ಹೊರದೇಶದಲ್ಲಿ ತಮ್ಮ ಜೀವನೋಪಾಯಕ್ಕೆ ಹೋಗುತ್ತಿವಾದರೆ. ಈ ದೇಶಕ್ಕೆ ಸಂಪತ್ತನ್ನು ತರುತ್ತಿದ್ದಾರೆ. ಆದ್ದರಿಂದ ಈ ಒಂದು ಸಮಸ್ಯೆ ತೀರ್ಮಾನವಾಗಬೇಕು. ನನ್ನ ಜಿಲ್ಲೆಯಲ್ಲಿ ನಾಲ್ಕೈದು ಕ್ಲಾಸ್‌ವರೆಗೆ ಅನ್‌ಆಥರೈಸ್ಡ್ ಸ್ಕೂಲ್‌ಗಳು ನಡೆಯುತ್ತಿದೆ. ಇದರಿಂದ ಹೆತ್ತವರಿಗೂ ತೊಂದರೆ ಮಕ್ಕಳಿಗೂ ತೊಂದರೆ. ಆದ್ದರಿಂದ ಇನ್ನು ಮುಂದೆ ಏನಾದರೂ ಮಾಡುವುದರಿಂದ ಸಹ ಈಗಿರುವ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ಕೊಡದೇ ಇದ್ದರೆ ಮಕ್ಕಳ ವಿದ್ಯಾ ಕ್ಷೇತ್ರದಲ್ಲಿ ಒಂದು ತರಹದ ಸಮಸ್ಯೆ ಉದ್ಭವಿಸಿ ಆ ಮಕ್ಕಳ ಜೀವನವೇ ಬಹಳ ತೊಂದರೆಗೆ ಒಳಗಾಗುವ ಪರಿಸ್ಥಿತಿ ಇದೆ. ಆದ್ದರಿಂದ ಮಂತ್ರಿಗಳು ಇವುಗಳನ್ನು ಪರಿಶೀಲಿಸಬೇಕು. ಏಕೆಂದರೆ ಹಣ ಮಾಡುವಂಥ ವಿದ್ಯಾ ಸಂಸ್ಥೆಗಳಿದ್ದರೆ ಅವುಗಳಿಗೆ ಅನುಮತಿ ಕೊಡಬೇಡಿ. ಸೇವಾ ಮನೋಭಾವದಿಂದ ಆಗುವಂಥ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆ ನನ್ನ ಜಿಲ್ಲೆ ತುಳು ಭಾಷೆಯನ್ನು ಮಾತನಾಡುವ ಜಿಲ್ಲೆ. ತುಳು ಕೊಂಕಣಿ ಮಾತನಾಡುವ ಜಿಲ್ಲೆ. ಹೆಚ್ಚಾಗಿ ಮಾತೃಭಾಷೆ ನಮ್ಮದು ತುಳು ಆದಕಾರಣ ಕನ್ನಡವನ್ನು ನಿಮ್ಮಷ್ಟೇ ಅಭಿಮಾನದಿಂದ ನಾವು ನೋಡುತ್ತೇವೆ. ಕನ್ನಡ ಬೇಕು ಕನ್ನಡದಲ್ಲಿ ನಮ್ಮ ಜಿಲ್ಲೆಯಲ್ಲಿ ಮಾತನಾಡಿದಷ್ಟು ಚೆನ್ನ ಬೇರೆಯವರು ಮಾತನಾಡುವುದಿಲ್ಲ. ಏಕೆಂದರೆ ಅವರ ಭಾಷೆ ಗ್ರಾಮ್ಯವಾದುದು. ಹೀಗಿರುವಾಗ ಕನ್ನಡದ ಮೇಲೆ ನಮಗೆ ಅಭಿಮಾನ ಉಂಟು. ಆದರೆ ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ಉಂಟು. ಮಾನ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಸಮಸ್ಯೆಯನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಈಗಾಗಲೇ ನಾಲ್ಕೈದು ತರಗತಿವರೆಗೆ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಮಾಧ್ಯಮ ನಿಲ್ಲಿಸಿದರೆ ಮಕ್ಕಳು ದುರಂತ ಎದುರಿಸುವ ಪರಿಸ್ಥಿತಿ ಬರುತ್ತದೆ. ಈ ವಿಶಿಷ್ಟ ಸಮಸ್ಯೆಯನ್ನು ಯೋಚನೆ ಮಾಡಿ ಈಗಿರುವ ಒಳ್ಳೆಯ ಶಾಲೆಗಳಿಗೆ ತಾವು ಅನುಮತಿ ಕೊಡಿ. ಹಣ ಮಾಡುವಂಥ ಕೇಂದ್ರಗಳಿಗೆ ಅನುಮತಿ ಕೊಡಬೇಡಿ. ದಕ್ಷಿಣ ಕನ್ನಡ ಜಿಲ್ಲೆಗೆ ಬಾಕಿ ಕರ್ನಾಟಕದ ವಿಭಾಗಕ್ಕಿಂತ ಒಂದು ವಿಶಿಷ್ಟ ತರಹದ ಸಂದರ್ಭ ಇರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಸ್ವಲ್ಪ ರಿಯಾಯಿತಿಯನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕರಿಯಣ್ಣ :— ಮಾನ್ಯ ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರಿಗೆ ಅಷ್ಟೇ ಅಲ್ಲ ನಮ್ಮೆಲ್ಲರಿಗೂ ಸಹಾ ಕನ್ನಡದ ಬಗ್ಗೆ ಅಭಿಮಾನ ಇದೆ. ಕನ್ನಡವನ್ನು ಇನ್ನೂ ಕಲಿಯತಕ್ಕ ಆಸೆ ಇದೆ. ಆದರೆ ಇಂಗ್ಲೀಷ್ ಶಾಲೆಗಳಲ್ಲಿ ಬರೀ ನಗರದ ಮಕ್ಕಳೇ ಓದಬೇಕು, ಗ್ರಾಮಾಂತರ ಮಟ್ಟದಲ್ಲಿ ಓದುವವರು ಇಲ್ಲವೇನೋ ಎನ್ನುವ ಭಾವನೆ ಬಂದಿದೆ. ಇವತ್ತು ಭಾಷೆಗೂ ಮತ್ತು ವಿದ್ಯೆಗೂ ವ್ಯತ್ಯಾಸ ಇದೆ. ಭಾಷೆ ಕೇವಲ ರಾಜ್ಯದ ಪರಿಮಿತಿಗೆ ಒಳಪಟ್ಟಿದ್ದು ವಿದ್ಯೆ ಎಂಬುದು ಪ್ರತಿಯೊಬ್ಬನ ಜೀವನ ಸೃಷ್ಟಿ ಮಾಡಬೇಕಾಗಿದೆ. ನಗರ ಮಟ್ಟದಲ್ಲಿ ಇರುವವರು ಮತ್ತು ಬೆಂಗಳೂರು ಸಿಟಿಯಲ್ಲಿ ಇರುವವರು ಹೆಚ್ಚಿಗೆ ಎಂಜಿನಿಯರ್, ಡಾಕ್ಟರ್, ಐಎಎಸ್ ಐಪಿಎಸ್ ಅಧಿಕಾರಿಗಳಾಗುತ್ತಿದ್ದಾರೆ ಇಂಗ್ಲೀಷ್ ಭಾಷೆ ಓದಿ. ಆದರೆ ಗ್ರಾಮಾಂತರ ಮಕ್ಕಳಿಗೆ ಈ ಸ್ಥಿತಿ ಇಲ್ಲ. ಆದುದರಿಂದ ಗ್ರಾಮಾಂತರ ಮಟ್ಟದಲ್ಲೂ ಕೂಡ ಇಂಗ್ಲೀಷನ್ನು ಕಲಿಸಬೇಕು. ಅವರಿಗೂ ಇಂಗ್ಲೀಷ್ ಕಲಿಯುವುದಕ್ಕೆ ಅನುಮತಿ ಕೊಡಬೇಕೆಂದು ನಾವು ಆಯವ್ಯಯದಲ್ಲಿ ಇಲಾಖೆ ಬೇಡಿಕೆ ಬಂದ ಸಮಯದಲ್ಲಿ ವಿವರವಾಗಿ ಚರ್ಚೆ ಮಾಡಿದ್ದು, ಆ ಸಮಯದಲ್ಲಿ ವಿರೋಧ ಪಕ್ಷದವರು ಸಭೆಯಲ್ಲಿ ಇರಲಿಲ್ಲ. ಆಗ ಮಾನ್ಯ ಮಂತ್ರಿಗಳು ಉತ್ತರವನ್ನು

ಕೊಡುತ್ತಾ ಈ ಬಗ್ಗೆ ಸಮಗ್ರ ನೀತಿ ರಚನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ದಯಮಾಡಿ ಗ್ರಾಮಾಂತರ ಮಕ್ಕಳಿಗೂ ಕೂಡ ಇಂಗ್ಲೀಷ್ ಓದುವುದಕ್ಕೆ ಶಾಲೆಗಳನ್ನು ತೆರೆಯಲು ಅನುಮತಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :– ಮಾನ್ಯ ಅಧ್ಯಕ್ಷರೇ, ಅನೇಕ ಜನ ಪೋಷಕ ವರ್ಗದವರು ನಮ್ಮನ್ನು ಕೇಳುತ್ತಾರೆ. ನಾವು ಮಕ್ಕಳನ್ನು ಹೆತ್ತೋರು, ಸಾಕಿದವರು ಮಕ್ಕಳ ಭವಿಷ್ಯವನ್ನು ಮುಂದೆ ಯೋಚನೆ ಮಾಡುವವರು ನಾವು. ಆದರೆ ನಮ್ಮ ಮಕ್ಕಳಿಗೆ ಯಾವುದು ಒಳ್ಳೆಯದು, ಯಾವುದು ಒಳ್ಳೆಯದಲ್ಲ ಎನ್ನುವ ಹಿತಚಿಂತನೆ ಮಾಡುವುದು ನಮ್ಮ ಧರ್ಮ. ಆ ರೀತಿ ಮಾಡುತ್ತಿದ್ದೇವೆ. ಆದರೆ ಪ್ರತಿಯೊಂದಕ್ಕೂ ಶಾಸಕರೇ ಹೀಗೆ ಇರಬೇಕೆಂದು ಪ್ರತಿ ಸಾರಿ ಒತ್ತಾಯ ಮಾಡುವುದು ಸೂಕ್ತವಲ್ಲವೇನೋ ಎನ್ನುವ ಮಟ್ಟಕ್ಕೆ ಕೆಲವರು. ವಾದ ಮಾಡಿದ್ದಾರೆ. ಸರ್ಕಾರದ ಇಚ್ಛೆ ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಬಹುದು. ಇನ್ನೊಂದು ಅಭಿಪ್ರಾಯ ಬಡವರಿಗೆ, ಗ್ರಾಮೀಣ ಜನರಿಗೆ ಏನಿದೆ ಎಂದರೆ, ಏನು ಪಟ್ಟಣದಲ್ಲಿ ಇರತಕ್ಕ ಉಚ್ಛವರ್ಗದ ಜನ, ಅಧಿಕಾರೀವರ್ಗದವರು, ರಾಜಕೀಯದಲ್ಲಿ ಇರತಕ್ಕ ಗಣ್ಯರು – ಇಂತಹವರ ಮಕ್ಕಳು ಏನೋ ಒಂದು ರೀತಿಯ ವಿದ್ಯಾಭ್ಯಾಸ ಮಾಡಿತ್ತಿರುವಾಗ, ಬಡವರ ಮಕ್ಕಳು ನಮಗೂ ಅವಕಾಶ ಇದ್ದರೆ ಸ್ವಲ್ಪ ವಿದ್ಯಾಭ್ಯಾಸ ಮಾಡಿಕೊಂಡು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತಿತ್ತೇನೋ ಎನ್ನುವ ಅಭಿಪ್ರಾಯ ಹೇಳುತ್ತಿದ್ದಾರೆ. ಈಗ ಮಾನ್ಯ ಸಚಿವರು ಇದರ ಬಗ್ಗೆ ಆಲೋಚನೆ ಮಾಡಬೇಕು. ಕನ್ನಡದ ಬಗ್ಗೆ ಯಾರದ್ದೂ ವಿರೋಧ ಇಲ್ಲ. ಕನ್ನಡ ಕಲಿಯಬೇಕು. ಅದು ಮಾತೃಭಾಷೆ. ಅದರ ಜೊತೆ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಯಾವುದು ಉತ್ತಮ ಎನ್ನುವುದನ್ನು ಆಲೋಚನೆ ಮಾಡಿ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು. ಏನು ಪಾಲಿಸಿ ಮಾಡಿದರೂ ಕೂಡಾ ಪಟ್ಟಣದಲ್ಲಿ ಏನು ಅಪ್ಲೈ ಆಗುತ್ತದೋ ಅದು ಇಡೀ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲೂ ಅಪ್ಲೈ ಆಗುವಹಾಗೆ ಇನ್ನಾದರೂ ನಿರ್ಧಾರ ತೆಗೆದುಕೊಳ್ಳಬೇಕೇ ವಿನ: ಇಲ್ಲದಿದ್ದರೆ ಏನಾಗುತ್ತದೆಂದರೆ ಟೌನ್‌ನಲ್ಲಿ ಇರುವವರು ಕೆಲವು ಉತ್ತಮವರ್ಗದ ಮಕ್ಕಳಿಗೆ ಒಂದು ರೀತಿಯ ವಿದ್ಯಾಭ್ಯಾಸ ಸಿಕ್ಕಿ ಗ್ರಾಮಾಂತರ ಪ್ರದೇಶದಲ್ಲಿ ನೂರಕ್ಕೆ 80 ಭಾಗ ಇರುವ ಬಡವರ ಮಕ್ಕಳಿಗೆ ಒಂದು ರೀತಿಯ ವಿದ್ಯಾಭ್ಯಾಸ ಸಿಕ್ಕುವುದಾದರೆ ಅದು ಬಹುಶ: ಈ ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಒಳ್ಳೆಯ ನಿರ್ಧಾರ ತೆಗೆದುಕೊಂಡರೆ ಇಡೀ ರಾಜ್ಯಕ್ಕೆ ಅನ್ವಯವಾಗುವ ಹಾಗೆ ಎಲ್ಲಾ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಉತ್ತಮವಾದ ಸರ್ವರಿಗೂ ಒಪ್ಪಿಗೆಯಾಗತಕ್ಕ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ :– ಮಾನ್ಯ ಅಧ್ಯಕ್ಷರೇ, ಎಲ್ಲಿಯತನಕ ಖಾಸಾಗಿ ಶಿಕ್ಷಣ ಸಂಸ್ಥೆಗಳು ಕಾನ್ವೆಂಟ್‌ಗಳನ್ನು ನಡೆಸುತ್ತವೆಯೋ ಅಲ್ಲಿಯವರೆಗೆ ನಾವು ಇಂಗ್ಲೀಷ್ ಶಾಲೆಗಳನ್ನು ಗ್ರಾಮಾಂತರ ಪ್ರದೇಶಕ್ಕೆ ಕೊಡತಕ್ಕದ್ದು ಸರಿಯೆಂದು ಹೇಳುತ್ತೇನೆ. ವಿದ್ಯಾದಾನ ಮಾಡುವಾಗ ಗ್ರಾಮಾಂತರ ಪ್ರದೇಶಕ್ಕೆ ಒಂದು, ಸಿಟಿಗೆ ಮತ್ತೊಂದು ಮಾಡುವುದು ಸರಿಯಲ್ಲ. ದಯವಿಟ್ಟು ಹಾಗೆ ಪಕ್ಷಪಾತ ಮಾಡಬಾರದು. ಎಲ್ಲಿಯವರೆಗೆ ಖಾಸಾಗಿಯವರು ಶಿಕ್ಷಣ ಸಂಸ್ಥೆ ನಡೆಸುತ್ತಾರೆ ಅಲ್ಲಿಯವರೆಗೆ ಇಂಗ್ಲೀಷ್ ಇದ್ದೇ ಇರುತ್ತದೆ. ನಗರ ಪ್ರದೇಶದವರಿಗೆ ಇರತಕ್ಕ ಸೌಕರ್ಯ ಗ್ರಾಮಾಂತರ ಪ್ರದೇಶದವರಿಗೂ ಸಿಗಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕೆ. ಮಾನ್ಯ ಅಧ್ಯಕ್ಷರೇ, ಮಾತೃಭಾಷೆ ಕನ್ನಡದಲ್ಲಿಯೇ ಶಾಲಾಮಕ್ಕಳು ವಿದ್ಯಾಭ್ಯಾಸ ಮಾಡಬೇಕು. ಮಾತೃಭಾಷೆ ಬಗ್ಗೆ ನಮಗೆ ಅಭಿಮಾನ ಇರಬೇಕೆನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಇಂಗ್ಲೀಷ್‌ಮಾಧ್ಯಮ ಏಕೆ ಬೇಕೆಂದರೆ ಇಂಗ್ಲೀಷ್ ಭಾಷಾ ಮಾಧ್ಯಮದಲ್ಲಿ ಇರತಕ್ಕ ಸರ್ವ ಜ್ಞಾನ ಏನಿದೆ, ಪ್ರಪಂಚದಲ್ಲಿರತಕ್ಕ ಎಲ್ಲ ಜ್ಞಾನ ಅದರಲ್ಲೂ ಸೈನ್ಸ್ ಅಂಡ್ ಟೆಕ್ನಾಲಜಿ ಏನಿದೆ ಅದೆಲ್ಲವೂ, ಹಾಗೂ ಲಿಟ್ರೇಚರ್‌ನ್ನೂ ಕನ್ನಡದಲ್ಲಿಯೇ ಒದಗಿಸುವುದಾದರೆ ಬಹುಶ: ಆಗ ನಾವು ಕನ್ನಡವನ್ನೆ ಒಪ್ಪಬಹುದು ಬೇರೆ ಪ್ರಪಂಚದಲ್ಲಿ ಇರತಕ್ಕ ಎಲ್ಲಾ ಜ್ಞಾನವನ್ನು ಕನ್ನಡಕ್ಕೆ ತುರ್ಜುಮೆ ಮಾಡಿ ಮಕ್ಕಳಿಗೆ ಒದಗಿಸಿದ್ದೇ ಆದರೆ ನಮ್ಮ ಅಭ್ಯಂತರ ಇಲ್ಲ. ಬಹುಶ: ಅದು ಅಷ್ಟು ಸುಲಭವಾಗಿ ಆಗತಕ್ಕ ಕೆಲಸ ಅಲ್ಲ. ನಮಗೆ ಜ್ಞಾನವನ್ನು ಗಳಿಸಿಕೊಡತಕ್ಕ ವಿಚಾರದಲ್ಲಿ ಪ್ರೊಜೆಸೀಸ್

ಇರಬಾರದು. ಜ್ಞಾನಾರ್ಜನೆ ಮಾಡುವುದಕ್ಕೆ ಇಂಗ್ಲೀಷ್ ಮಾಧ್ಯಮದಿಂದ ಅನುಕೂಲವಾದರೆ ಕನ್ನಡವನ್ನು ಏಕೆ ಮರೆಯಬಾರದು? ಕನ್ನಡದಲ್ಲಿಯೇ ವಿದ್ಯಾಭ್ಯಾಸ ಮಾಡಬೇಕೆನ್ನುವುದು ಏನಿದೆ? ಕನ್ನಡದಲ್ಲಿ ಯಾವಾಗ ಬೇಕಾದರೂ ಮಾಡಬಹುದು, ಹಾಗೆ ಮಾಡಬೇಕೆಂದು ಒತ್ತಾಯ ಮಾಡಿದರೆ ಇಂಗ್ಲೀಷ್‌ನಲ್ಲಿರತಕ್ಕ ನಾಲೆಡ್ಜ್ ಪರ್ಟಿಕ್ಯುಲರ್ಲಿ ಸೈನ್ಸ್ ಅಂಡ್ ಟೆಕ್ನಾಲಜಿ ಅದರಲ್ಲಿರತಕ್ಕ ನಾಲೆಡ್ಜನ್ನು ಕನ್ನಡಕ್ಕೆ ನೀವು ಒದಗಿಸಿ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ. ಒಂದು ವೇಳೆ ಇದನ್ನು ಟೋಟಲ್ ಆಗಿ ಅಭಿಮಾನದ ದಿಸೆಯಿಂದ ಕನ್ನಡದಲ್ಲಿಯೇ ಆಗಬೇಕೆಂದು ಹೇಳಿ, ನಾವು ಕಲಿಸುವುದಕ್ಕೆ ಕನ್ನಡದಲ್ಲಿ ಜ್ಞಾನ ಎಲ್ಲಿದೆ? ಅಂಥ ಲಿಟರೇಚರ್ ಎಲ್ಲಿದೆ? ಡಾಕ್ಟರೇಟ್ ಆಗಲಿ, ಇಂಜಿನಿಯರಿಂದ ಆಗಲಿ, ಟೆಕ್ನಾಲಜಿಯಲ್ಲಿರತಕ್ಕ ಅನೇಕ ವಿಚಾರಗಳನ್ನು ನಾವು ತಿಳಿದುಕೊಳ್ಳಬೇಕಾದರೆ ಪ್ರಪಂಚದ ಪ್ರತಿಯೊಂದು ಭಾಷೆಯಲ್ಲಿರತಕ್ಕ ಆ ನಾಲೆಡ್ಜ್ ಆದಷ್ಟು ಬೇಗ ಕನ್ನಡದಲ್ಲಿಯೇ ಟ್ರಾನ್ಸ್‌ಲೇಟ್ ಆದರೆ ಆಗ ನಾವು ಕನ್ನಡವೇ ಬೇಕೆಂದು ಹೇಳಬಹುದು. ಅದು ಇಲ್ಲದಿರುವ ಸನ್ನಿವೇಶದಲ್ಲಿ ನಾವಿರುವಾಗ ಇಂಗ್ಲೀಷ್ ಬೇಕೆಂದು ಹೇಳಿದ ಮಾತ್ರಕ್ಕೆ ಕನ್ನಡದ ಮೇಲಿನ ಅಭಿಮಾನ ಕಡಿಮೆಯಾಯಿತು ಎಂದು ನಾವು ಹೇಳುವುದಕ್ಕಾಗುವುದಿಲ್ಲ ಏಕೆಂದರೆ ಇಂಗ್ಲೀಷ್ ಮಾಧ್ಯಮದಲ್ಲಿ ಮಕ್ಕಳು ಸ್ಟಡಿ ಮಾಡತಕ್ಕ ಅವಕಾಶ ಸಿಕ್ಕದೆ ಅದು ಕನ್ನಡಕ್ಕೆ ದುರಭಿಮಾನವೆಂದು ಅರ್ಥವೆ? ಕನ್ನಡ ಭಾಷೆಯಲ್ಲಿ ಮಕ್ಕಳು ಕಲಿಯುತ್ತಿದ್ದರೆ, ಮನೆಯಲ್ಲಿರತಕ್ಕ ತಂದೆತಾಯಿಗಳು ಇಂಗ್ಲೀಷ್‌ನಲ್ಲಿಯೇ ಮಾತನಾಡುತ್ತಾರೇನೋ? ಅಥವಾ ಇಂಗ್ಲೀಷ್ ಮೀಡಿಯಂನಲ್ಲಿ ಓದುತ್ತಿದ್ದರೆ ಮನೆಯಲ್ಲಿ ಕನ್ನಡ ಮಾತನಾಡುವುದನ್ನು ಬಿಟ್ಟು ಬಿಡುತ್ತಾರೇನು? ಆದ್ದರಿಂದ ಕಂಪ್ಲೀಟ್‌ಆಗಿ ನಾವು ಆಂಗ್ಲ ಮಾಧ್ಯಮದಲ್ಲಿ ಸ್ಟಡಿ ಮಾಡಿದರೆ ಕನ್ನಡವನ್ನು ಬಿಡುವ ಅವಕಾಶವೇ ಇಲ್ಲ. ಕನ್ನಡವನ್ನು ಒಂದನೆಯ ಭಾಗ ಅಥವಾ ಎರಡನೆಯ ಭಾಗವಾಗಿ ನಾವು ವಿದ್ಯಾಭ್ಯಾಸ ಮಾಡತಕ್ಕ ಅನುಕೂಲ ನಮಗೆ ಇದೆ. ಹಿಂದೆ ಮಾತನಾಡಿದ ಸದಸ್ಯರು ಅವರು ಹೇಳಿದ ರೀತಿ ಇಂಗ್ಲೀಷ್ ಮಿಡಿಯಂ ಬೇಡ ಕನ್ನಡವೇ ಆಗಬೇಕೆಂದು ಹೇಳಿದರು. ಅಂತಹವರು ಅನೇಕ ಜನ ತಮ್ಮ ಮಕ್ಕಳನ್ನು ಇಂಗ್ಲೀಷ್ ಮಿಡಿಯಂ ಸ್ಕೂಲ್‌ಗಳಿಗೆ ಕಳುಹಿಸುತ್ತಾರೆ. ಯಾರೋ ಒಬ್ಬರು ಕನ್ನಡವೇ ಆಗಬೇಕು, ಕನ್ನಡ ಭಾಷೆ ರಾಜ್ಯದಲ್ಲಿ ಬೆಳೆಯಬೇಕು ಕನ್ನಡ ರಾಜ್ಯಭಾಷೆಯಾಗಬೇಕೆಂದು ಹೇಳುವವರು ಅವರು ಮಾತ್ರ ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಸೇರಿಸಬಹುದೇ? ಇದು ಸರ್ಕಾರದವರ ಗಮನಕ್ಕೆ ಬಂದಿದೆ. ಇದು ನಮ್ಮ ರಾಜ್ಯದ ಜನಗಳಿಗೂ ಗೊತ್ತಾಗಿದೆ. ಆದ್ದರಿಂದ ಬಾಯಿಯಲ್ಲಿ ಹೇಳುವುದು ಒಂದು ಮಾಡುವುದು ಒಂದು. ತಮ್ಮ ಮಕ್ಕಳನ್ನು ತಮಗೆ ಅನುಕೂಲವಾಗತಕ್ಕ ರೀತಿಯಲ್ಲಿ ಇಂಗ್ಲೀಷ್ ಮಿಡಿಯಂ ಸ್ಕೂಲ್‌ಗಳಿಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸತಕ್ಕದ್ದು ಇದು ಪ್ರಾಮಾಣಿಕವಾದ ಕೆಲಸವಲ್ಲ, ಹಾಗೆ ಮಾಡುವುದು ಸರಿಯಲ್ಲ. ಇವತ್ತಿನ ದಿವಸ ಇಂಗ್ಲೀಷ್‌ಮಿಡಿಯಂನಲ್ಲಿರತಕ್ಕ ನಾಲೆಡ್ಜನ್ನು ನಾವು ಟ್ರಾನ್ಸ್‌ಲೇಟ್ ಮಾಡಿದ ಕಾಲಕ್ಕೆ ನಾವು ಕನ್ನಡವನ್ನು ತೆಗೆದುಕೊಳ್ಳುತ್ತೇವೆ. ಇಷ್ಟು ಮಾತ್ರ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ :— ಮಾನ್ಯ ಅಧ್ಯಕ್ಷರೆ, ಸದನ ಪ್ರಾರಂಭವಾಗಿ 40 ನಿಮಿಷಗಳಾಯಿತು. ಇವತ್ತಿನ ಅಜೆಂಡಾ ಪ್ರಕಾರ ಸದನ ನಡೆಯುತ್ತಿಲ್ಲ. ಇದರ ಬಗ್ಗೆ ಬಹಳ ಸದಸ್ಯರು ಮಾತನಾಡುತ್ತಿದ್ದಾರೆ. ಆದ್ದರಿಂದ ಇದನ್ನು ಬೇರೆ ರೂಪದಲ್ಲಿ ತಂದು ಚರ್ಚೆ ಮಾಡಬಹುದು. ಆದಷ್ಟು ಅಜೆಂಡಾ ಪ್ರಕಾರ ಸದನ ನಡೆಸುವುದು ಒಳಿತು ಎಂದು ತಮ್ಮಲ್ಲಿ ಕೋರುತ್ತೇನೆ.

ಅಧ್ಯಕ್ಷರು : ಅಜೆಂಡಾಕ್ಕೆ ಬರುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಇದರ ಬಗ್ಗೆ ಒಂದು ವಿಚಾರ ಹೇಳುತ್ತೇನೆ.

Mr. Speaker :– Thank you for your valuable suggestion.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):— ಮಾನ್ಯ ರಾಯರೆಡ್ಡಿಯವರು ರಾತ್ರಿಯೆಲ್ಲ ರಾಮಾಯಣ ಕೇಳಿ ಬೆಳಿಗ್ಗೆ ಎದ್ದು ರಾಮನಿಗೆ ಸೀತೆ ಏನಾಗಬೇಕೆಂದು ಕೇಳುತ್ತಿದ್ದಾರೆ. ಇಂಗ್ಲೀಷ್ ಮೀಡಿಯಂ ಸ್ಕೂಲ್ ಬಗ್ಗೆ ಈ ಸಮಸ್ಯೆಯ ಬಗ್ಗೆ ಕಳೆದ ಮೂರ್ನಾಲ್ಕು ವರ್ಷಗಳಿಂದ ಚರ್ಚೆಯಾಗುತ್ತಾ ಬಂದಿದೆ. ಒಂದು ಕಡೆ ಇಂಗ್ಲೀಷ್ ಸ್ಕೂಲ್ ಕೊಡಬೇಕೆಂದು ಒತ್ತಾಯವಿದೆ. ಮತ್ತೊಂದು ಕಡೆ ಇಂಗ್ಲೀಷ್ ಮಿಡಿಯಂ ಸ್ಕೂಲ್‌ಗಳು ಆಗಬಾರದೆಂದು ಇದೆ. ನಾನು ಪ್ರಾಮಾಣಿಕವಾಗಿ ಒಂದು ಮಾತು

ಹೇಳುತ್ತಿದ್ದೇನೆ ನನ್ನ ಮಕ್ಕಳನ್ನು ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳಿಗೆ ಕಳುಹಿಸುತ್ತಿದ್ದೇನೆ. ನಾನು ತಿಳಿದುಕೊಂಡಿದ್ದೇನೆ ಬೆಂಗಳೂರಿನಲ್ಲಿರತಕ್ಕವರು ಅವರ ಮಕ್ಕಳನ್ನೂ ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಇವತ್ತು ಕೇವಲ ರಾಜಕೀಯ ಮತ್ತೊಂದು ಕಾರಣ ಇಟ್ಟುಕೊಂಡು ಇದನ್ನು ವಿರೋಧ ಮಾಡುವುದು ಸರಿಯೋ ಅಥವಾ ತಪ್ಪೋ ಎನ್ನುವುದನ್ನು ವಿಚಾರ ಮಾಡಬೇಕು. ಕನ್ನಡ ಭಾಷೆ ಬೆಳೆಯಬೇಕು. ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕು. ಅದರ ಬಗ್ಗೆ ಸಂದೇಶ ಮತ್ತು ಸಂಶಯ ಇರಬಾರದು. ಆದರೆ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳು ಬೆಂಗಳೂರು ಸಿಟಿಯಲ್ಲಿ ಮೈಸೂರು ಸಿಟಿಯಲ್ಲಿ ಬೆಳಗಾಂ ಸಿಟಿಗಳಲ್ಲಿ ಬೆಳೆಯುತ್ತಾ ಇವೆ. ಅದರ ಲಾಭ ಎಷ್ಟೋ ಜನರಿಗೆ ಸಿಗುತ್ತಿದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳು ಇಲ್ಲ . ಈಗ ಕಾರವಾರದಲ್ಲಿ "ಸೀ ಬರ್ಡ್ ಪ್ರಾಜೆಕ್ಟ್'' ಬಂದಿದೆ, ಕಾಳಿ ಪ್ರಾಜೆಕ್ಟ್ ಇದೆ, ಹಾಗೆಯೇ ಬೇರೆ ಬೇರೆ ದೇಶದ ಜನ ಅಲ್ಲಿಗೆ ಬಂದಿದ್ದಾರೆ. ಅವರುಗಳಿಗೆ ಇಂಗ್ಲೀಷ್ ಮೀಡಿಯಂ ಶಾಲೆಗಳು ಬೇಕು. ಇಂಗ್ಲೀಷ್ ಮೀಡಿಯಂ ಶಾಲೆಗಳು ಇಲ್ಲದಿದ್ದರೆ ಅವರೇನು ಮಾಡಬೇಕು? ಅವರು ಕನ್ನಡವನ್ನು ಕಲಿಯಬೇಕು. ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲಿ ಕನ್ನಡ ಕಡ್ಡಾಯವಾಗಿರುತ್ತದೆ. ಇದರ ಬಗ್ಗೆ ಬಹಳ ವಿಚಾರ ಮಾಡಿ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಎಷ್ಟೋ ಜನ ಮೆಡಿಕಲ್ ಕಾಲೇಜುಗಳು ಇಂಜಿನಿಯರಿಂಗ್ ಕಾಲೇಜುಗಳನ್ನು ಮಾಡಿಕೊಂಡು ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಮಾಡಿಕೊಂಡು ಹಣ ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತು ಒಂದೊಂದು ಇಂಗ್ಲೀಷ್ ಮೀಡಿಯಂ ಸ್ಕೂಲ್‌ನಲ್ಲಿ ಅಡ್ಮಿಶನ್ ತೆಗೆದುಕೊಳ್ಳಬೇಕಾದರೆ 10–20–30 ಸಾವಿರ ತನಕ ಡೊನೇಶನ್ ಕೇಳುತ್ತಿದ್ದಾರೆ. ಇದು ನರ್ಸರಿ ಸ್ಕೂಲ್‌ಗಳಲ್ಲಿ ಕೂಡ ಇದೆ. ಇವತ್ತು ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಏಕೆ ಹೀಗೆ ಆಗುತ್ತದೆ? ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದರು ಏನೆಂದರೆ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಇವತ್ತು ಏನು ಇಲ್ಲೀಗಲ್ ಆಗಿ ಕ್ಯಾಪಿಟೇಶನ್ ಫೀಸ್ ತೆಗೆದುಕೊಳ್ಳುತ್ತಿದ್ದಾರೆ ಅದನ್ನು ನಿಲ್ಲಿಸಲ್ಲಿಕ್ಕೆ ಆಗುವುದಿಲ್ಲ ಎಂದು. ಅದರ ಬಗ್ಗೆ ತರಬೇಕೆಂದಿರುವ ಬಿಲ್ ಇನ್ನೂ ಬಂದಿಲ್ಲ. ಅದು ಯಾವಾಗ ಬರುತ್ತದೋ ಗೊತ್ತಿಲ್ಲ. ಇವತ್ತು ಪ್ರತಿಯೊಂದು ಸ್ಕೂಲ್ ಸಹ ಈ ಪ್ರಕಾರ ನಡೆಯುತ್ತಿದೆ. ಹೀಗಾಗಿ ಇಂಗ್ಲೀಷ್ ಮೀಡಿಯಂ ಸ್ಕೂಲ್ ಕೊಟ್ಟರೆ ನಮ್ಮ ವಿರೋಧ ಇದೆ. ಈಗ ಇರುವುದನ್ನು ತಾವು ಸ್ಟಡಿ ಮಾಡಿ. ಆದರೆ ಟೋಟಲ್ ಬ್ಯಾನ್ ಮಾಡುವುದು ಸರಿಯಲ್ಲ. ಅಥವಾ ಇಂಡಸ್ಕ್ರಿಮಿನೇಟ್ ಆಗಿ ಕೊಡುವುದೂ ಸರಿಯಲ್ಲ. ಪ್ರತಿಯೊಂದು ತಾಲ್ಲೂಕನ್ನೂ ಅಭ್ಯಾಸಮಾಡಿ ಎಷ್ಟು ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳು ಇವೆಯೆಂದು ನೋಡಿ. ಅಲ್ಲಿ ಒಂದಕ್ಕಿಂತ ಹೆಚ್ಚು ಇದ್ದರೆ ಕೊಡುವ ಅವಶ್ಯಕತೆ ಇಲ್ಲ. ತಾವು ಮಂಜೂರು ಮಾಡಿದ್ದು ಅವರು ಮೂರು ವರ್ಷ ಹಿಂದೆ ಶುರು ಮಾಡಿರಬಹುದು. ಏಕೆಂದರೆ ಅವರು ಇದನ್ನು ದಂಧೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ವಾಲಂಟರಿ ಆರ್ಗನೈಸೇಷನ್‌ಗಳಾದ ಲಯನ್ಸ್, ರೋಟರಿ ಇಂತಹ ಸಂಸ್ಥೆಗಳು ಮುಂದೆ ಬಂದರೆ ನೀವು ಪ್ರೋತ್ಸಾಹ ಕೊಡಬೇಕು. ಏಕೆಂದರೆ ಇವರಿಗೆ ಲಾಭದ ಉದ್ದೇಶ ಇಲ್ಲದೆ ಒಂದು ಸೇವಾಮನೋಭಾವನೆ ಇರುತ್ತದೆ. ಆದರೆ ಖಾಸಗಿ ಮ್ಯಾನೇಜ್‌ಮೆಂಟಿನವರು ಕೇವಲ ಹಣ ಮಾಡುವುದಕ್ಕಾಗಿ ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿ ತಾವು ಲಕ್ಷ್ಯ ಕೊಡಬೇಕು. ಇದರ ಬಗ್ಗೆ ಬಹಳ ವಿಚಾರ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕು ಮತ್ತು ಹಾಗೆ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಮುಂಚೆ ವಿರೋಧ ಪಕ್ಷದ ನಾಯಕರೊಡನೆ ಚರ್ಚೆ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ) :– ಸದನದ ಮುಂದೆ ಇರತಕ್ಕಂಥ ಈ ಭಾಷೆ ವಿಚಾರದಲ್ಲಿ ಹೇಳಬೇಕಾಗಿದ್ದರೆ ಈ ಸದನದಲ್ಲಿ ಇರತಕ್ಕಂಥ 225 ಮಂದಿ ಸದಸ್ಯರಲ್ಲಿ ಯಾರೂ ಕೂಡ ಕನ್ನಡಕ್ಕೆ ವಿರೋಧ ಇಲ್ಲ. ಆದರೆ ಇವತ್ತು ಬೆಂಗಳೂರಿನಲ್ಲಿ ಅನೇಕ ಕಂದ್ರಸರ್ಕಾರದ ಕಚೇರಿಗಳು ಇವೆ. ಬೇರೇ ಬೇರೇ ಭಾಷೆಗಳನ್ನು ಮಾತನಾಡತಕ್ಕಂಥ ಜನರು ಇಲ್ಲಿ ಇದ್ದಾರೆ. ಅವರ ಕಷ್ಟವನ್ನೂ ಕೂಡ ನಾವು ನೋಡಬೇಕಾದ ಸಂದರ್ಭ ಇದೆ. ಕನ್ನಡಕ್ಕಾಗಿ ನಾವೆಲ್ಲರೂ ನಮ್ಮ ಪ್ರಾಣವನ್ನು ಕೊಡತಕ್ಕಂಥ ಶಕ್ತಿಯನ್ನು ಹೊಂದಿದ್ದೇವೆ. ಆದರೆ ಈ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಪರ್ಮಿಶನ್ ಕೊಡಬೇಕು.

ಹಿರಿಯ ಸದಸ್ಯರಾದ ಶ್ರೀ ದೇಶಪಾಂಡೆಯವರು ಹೇಳಿದ ಹಾಗೆ ಇವತ್ತು ಒಂದೊಂದು ನರ್ಸರಿ ತರಗತಿಗೆ ಅಡ್ಮಿಶನ್ ಬೇಕಾಗಿದ್ದರೆ 20–30 ಸಾವಿರ ರೂಪಾಯಿ ಕೊಡಬೇಕು. ಆದರೆ ಸುಮಾರು ಶಾಲೆಗಳು ಇದ್ದರೆ ಈ ಕಷ್ಟ ಹೋಗಿ ಎಲ್ಲ ಮಕ್ಕಳಿಗೂ ವಿದ್ಯಾಭ್ಯಾಸ ಸಿಗುವ ಸೌಲಭ್ಯ ಇರುತ್ತದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಕನ್ನಡ ಭಾಷಾ ಶಾಲೆಗಳಿಗೆ ಕಡ್ಡಾಯವಾಗಿ ಅವರಿಗೆ ಇದನ್ನು ಮಾಡಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದೆ. ಅದೇ ಸಂದರ್ಭದಲ್ಲಿ ಈ ಶಾಲೆಗಳ ಮೇಲೆ ಕಡಿವಾಣ ಬೇಕು. ಏನು ಡೊನೇಷನ್ ತೆಗೆದುಕೊಳ್ಳುತ್ತಾರೆ, ಅದನ್ನು ತಡೆಹಿಡಿಯುವುದಕ್ಕೆ ಕಡ್ಡಾಯವಾಗಿ ಒಂದು ತಿದ್ದುಪಡಿಯನ್ನು ತರಬೇಕೆಂದು ಕೇಳಿಕೊಂಡು ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಕೂಡಲೇ ಪರ್ಮಿಶನ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) :– ಮಾನ್ಯ ಸಭಾಧ್ಯಕ್ಷರೇ, ಈ ಇಂಗ್ಲೀಷ್ ಭಾಷಾ ಶಾಲೆಗಳ ಬಗ್ಗೆ ನಾನು ಗ್ರಾಮಾಂತರ ಪ್ರದೇಶದ ಒಬ್ಬ ಶಾಸಕನಾಗಿ ನನ್ನ ಅಭಿಪ್ರಾಯವನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಏನು ಬಡ ವಿದ್ಯಾರ್ಥಿಗಳು ಇದ್ದಾರೆ. ಅವರಿಗೆ ಇಂಗ್ಲೀಷ್ ಭಾಷೆಯ ಬಗ್ಗೆ ಪರಿಜ್ಞಾನ ಬಹಳ ಕಡಿಮೆ ಇರುತ್ತದೆ ಎನ್ನುವುದನ್ನು ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಬಹುಶಃ ಸದನದ ಅನೇಕ ಸದಸ್ಯರು ಈಗಾಗಲೇ ಹೇಳಿದ್ದಾರೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಸುಮಾರು ಐದಾರು ಶಾಲೆಗಳಲ್ಲಿ ಇವತ್ತು ಇಂಗ್ಲೀಷ್ ಮೀಡಿಯಂ ಅನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿ ಈಗಾಗಲೇ 5–6 ತರಗತಿಗಳವರೆಗೆ ಮಕ್ಕಳು ಓದಿಕೊಂಡು ಬಂದಿದ್ದಾರೆ. ಉತ್ತಮ ಪ್ರಾಗ್ಮಿಗಳಾಗಿ ಬರುವ ಭರವಸೆಯನ್ನು ಇಟ್ಟುಕೊಂಡಿದ್ದಾರೆ. ಅಂತಹ ಶಾಲೆಗಳಲ್ಲಿ ಇಂಗ್ಲೀಷ್ ಮೀಡಿಯಂನಲ್ಲಿ ಓದಿರುವಂಥ ವಿದ್ಯಾರ್ಥಿಗಳಿಗೆ ತೊಂದರೆ ಆಗದಿದ್ದ ರೀತಿಯಲ್ಲಿ ಅವರನ್ನು ಬಹುಶಃ ಇಂಗ್ಲೀಷ್ ಮೀಡಿಯಂಅನ್ನು ಪ್ರಥಮ ವರ್ಷದಿಂದಲೇ ತಾವು ಪ್ರಾರಂಭ ಮಾಡಬೇಕು. ಏಕೆಂದರೆ ನಾನೊಬ್ಬ ಗ್ರಾಮಾಂತರ ಪ್ರದೇಶದಿಂದ ಬಂದವನು. ನನಗೊತ್ತಿದೆ, ನನ್ನ ಇಂಗ್ಲೀಷ್‌ನ್ನು ಈ ಪಟ್ಟಣದ ಪ್ರದೇಶಗಳ ಜನರಿಗೆ ಹೋಲಿಸಿಕೊಂಡಾಗ ನನ್ನ ವೋಕ್ಯಾಬಲರಿ, ಸ್ಟೈಲ್ ಆಫ್ ವರ್ಡಿಂಗ್ಸ್ ನೋಡಿದಾಗ ನಾನು ಸ್ವಲ್ಪ ಕೆಳಮಟ್ಟದಲ್ಲಿ ಇದ್ದೇನೆ ಎನ್ನುವ ನನ್ನ ಅನಿಸಿಕೆಯನ್ನು ಇಲ್ಲಿ ಹೇಳಿಕೊಂಡರೆ ತಪ್ಪೇನಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಮತ್ತು ಪಟ್ಟಣವಾಸಿ ಜನರಿಗೆ ಅಂತರವನ್ನು ಮಾಡಬಾರದು. ಇದು ಆಗದಿದ್ದ ಹಾಗೆ ತಾವು ನೋಡಬೇಕು. ಪಟ್ಟಣಗಳಲ್ಲಿ ಎಲ್ಲ ವ್ಯವಸ್ಥೆ ಹೊಂದಿರುವ ವಿದ್ಯಾಭ್ಯಾಸ ಇಲ್ಲಿ ಇರುವುದರಿಂದ, ಗ್ರಾಮಾಂತರ ಪ್ರದೇಶಗಳ ಜನರಿಗೂ ಸಹ ಅದನ್ನು ಕೊಡಬೇಕು. ಆದರೆ ಕನ್ನಡ ಮರೆಯಬೇಕೆಂಬ ಪ್ರಶ್ನೆ ಇಲ್ಲ. ನನ್ನ ಕ್ಷೇತ್ರದಲ್ಲಿ ಹುಟ್ಟಿದ ಶ್ರೀ ಕುವೆಂಪು ಅವರು ಇವತ್ತು.......

ಶ್ರೀ ವಾಟಾಳ್ ನಾಗರಾಜ್ : ರಾಷ್ಟ್ರಕವಿ ಕುವೆಂಪು ಅವರ ಹೆಸರು ಹೇಳಿ, ಮತ್ತೊಂದು ಕಡೆ ಇಂಗ್ಲೀಷ್ ಮೀಡಿಯ ಶಾಲೆಗಳು ಬೇಕು ಎಂದು ಹೇಳಿದರೆ ಹೇಗೆ? ಈ ಮಮ್ಮಿ–ಡ್ಯಾಡಿ ಸಂಸ್ಕೃತಿ ಬೇಕು ಎಂದು ಹೇಳುವ ಹೊಲಸು ನೀತಿ ಯಾರಿಗೂ ಬೇಡ.

ಶ್ರೀ ಯು.ಕೆ. ಶಾಮಣ್ಣ : ಕುವೆಂಪುರವರು ಕನ್ನಡ ಪ್ರೇಮ, ಭಾಷಾ ಜ್ಞಾನಿಗಳು, ಅವರ ಮುಂದೆ ನಮ್ಮದು ಯಾವುದೇ ಮಾತಿಲ್ಲ. ಆದರೆ, ಇಂಗ್ಲೀಷ್‌ನ್ನು ದೂರ ಮಾಡಿ ಎಂದು ಯಾವ ಸಂದರ್ಭದಲ್ಲೂ ಅವರು ಹೇಳಿಲ್ಲ ಎನ್ನುವ ಮಾತನ್ನು ಆ ಹಿರೇಕೋಡಿಗೆ ಎಂಬ ಊರಿನಲ್ಲಿ ಹುಟ್ಟಿದವನಾಗಿ, ಈ ಸದನದಲ್ಲಿ ಧೈರ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಈ ರಾಜ್ಯದ ಕುವೆಂಪುರವರು ಹೇಳಿದ್ದಾರೆ.

"ರಾಜ್ಯ ನುಡಿಯನ್ನೊಂದು, ರಾಷ್ಟ್ರ ನುಡಿಯನ್ನೊಂದು
ದೇವ ನುಡಿಯನ್ನೊಂದು, ಹತ್ತಿ ಜಗ್ಗಿ,
ಕನ್ನಡಮ್ಮನ ನಿರಿ ನಿಟಿಲು, ನಿಟಿಲೆಂದು ಮುದಿಮೂಳೆ ಮುರಿಯುತಿದೆ,
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ, ಮಕ್ಕಳೇ ಬಾಯ್ಮುಚ್ಚಿ
ಹಿಡಿದಿಹರು ಕೆಲರು ನುಗ್ಗಿ'' ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ರಾಷ್ಟ್ರಕವಿ ಕುವೆಂಪುರವರು ಇಂಗ್ಲೀಷನ್ನು ವಿಷದ ಊಟ ಎಂದು ಹೇಳಿದ್ದಾರೆ. ಇಂಗ್ಲೀಷ್ ಮಾಧ್ಯಮ, ಇಂಗ್ಲೀಷ್ ಭಾಷೆ, ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಕೆ ವಿಷದ ಊಟ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. "ಬಾರಿಸು ಕನ್ನಡ ಡಿಂಡಿಮವ, ಓ ಕರ್ನಾಟಕ ಹೃದಯ ಶಿವಾ'' ಎನ್ನತಕ್ಕಂಥ ಮಾತನ್ನೂ ಕುವೆಂಪುರವರು ಹೇಳಿದ್ದಾರೆ. ಇಲ್ಲಿ ರಾಷ್ಟ್ರಕವಿ ಹೆಸರನ್ನು ಹೇಳಿ, ಮತ್ತೊಂದು ಕಡೆ ಇಂಗ್ಲೀಷಿನಲ್ಲಿ ಮಮ್ಮಿ, ಡ್ಯಾಡಿ ಕಲಿಯಬೇಕೆಂದು ಈ ಸದನದ ಬಹುತೇಕ ಸದಸ್ಯರು ಹೇಳುತ್ತಿದ್ದಾರೆ. ಇದಕ್ಕಿಂತ ಕುತ್ತಿಗೆಗೆ ಹಗ್ಗ ಹಾಕತಕ್ಕ ಪರಿಸ್ಥಿತಿ ಯಾರಿಗೂ ಬರುವುದು ಬೇಡ.

ಶ್ರೀ ಬಾಬುರಾವ್ ಚವಾಣ್ : ಸನ್ಮಾನ್ಯ ಸಭಾಧ್ಯಕ್ಷರೇ, ಇಂಗ್ಲೀಷ್ ಶಾಲೆಯ ವಿಷಯದಲ್ಲಿ ನನ್ನ ಮಿತ್ರರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು 4–5ನೇ ತರಗತಿಯಲ್ಲಿ ಓದುವ ಸಂದರ್ಭದಲ್ಲಿ ನಮ್ಮ ಅಜ್ಜಂದಿರು ಹೇಳಿತ್ತಿದ್ದರು. ನಾನು ತಾಂಡದಲ್ಲಿ ಹುಟ್ಟಿ ಬೆಳೆದಾಗ, ಒಬ್ಬರು ಆಫೀಸರು ಜೀಪು ತೆಗೆದುಕೊಂಡು ಬಂದಿದ್ದರು. ತಾಂಡಾದಲ್ಲಿ ವಿಚಾರಣೆ ಮಾಡಿ, ಪಂಚನಾಮ ಮಾಡುವ ವಿಷಯದಲ್ಲಿ, ಕೇಳುವ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಅಧಿಕಾರಿಗಳು ಇಂಗ್ಲೀಷಿನಲ್ಲಿಯೇ ಮಾತನಾಡುತ್ತಿದ್ದರು. ಆಗ ನಮ್ಮ ಅಜ್ಜ ನನಗೆ ಕೇಳಿದ್ದರು, ನೀನು ಯಾವಾಗ ಇಂಗ್ಲೀಷ್ ಭಾಷೆ ಓದಿ, ಯಾವಾಗ ದೊಡ್ಡವನಾಗುತ್ತೀಯೋ, ಈಗ ಅವರು ಏನು ಮಾತನಾಡುತ್ತಿದ್ದಾರೆ ಎಂಬುದು ನಮಗೆ ಅರ್ಥವೇ ಆಗುತ್ತಿಲ್ಲ. ಎಂದು ನೀನು ಇಂಗ್ಲೀಷ್ ಭಾಷೆ ಓದು ಎಂದು ಪ್ರಚೋದನೆ ಮಾಡುತಿದ್ದರು. ನನ್ನ ಅಭಿಪ್ರಾಯ ಎಲ್ಲರೂ ಇಂಗ್ಲೀಷ್ ಓದಬೇಕು, ಎಲ್ಲರೂ ಮನೆಗಳಲ್ಲಿ ಇಂಗ್ಲೀಷ್ ಓದಿಸಬೇಕೆಂಬ ಭಾವನೆ ಇದೆ. ಇದು ಬಿಟ್ಟು ಇಂಗ್ಲೀಷ್ ಬೇಡ, ಸರಿಯಿಲ್ಲ ಎನ್ನುವ ವಿಚಾರ ಬೇಡ. ಕನ್ನಡ ಮೊದಲ ಪ್ರಾತಿನಿಧ್ಯ ಇಲ್ಲವೆಂದಲ್ಲ, ಕನ್ನಡಕ್ಕೆ ಪ್ರಾತಿನಿಧ್ಯ ಕೊಡೋಣ, ಅದರ ಜೊತೆಗೆ, ಇಂಗ್ಲೀಷ್‌ಗೂ ಕೂಡ ಕೊಡಬೇಕು. ಏಕೆಂದರೆ, ಗ್ರಂಥಗಳು, ದೊಡ್ಡ ಸಾಹಿತಿಗಳು, ದೊಡ್ಡ ದೊಡ್ಡ ವಿಷಯಗಳ ಬಗ್ಗೆ ನಾವು ಬೇರೆ ದೇಶವನ್ನು ಹೋಲಿಸಿ ನೋಡಿದಾಗ, ಇಂಗ್ಲೀಷ್ ಕಲಿಯುವುದು ಬಹಳ ಒಳ್ಳೆಯದು. ಇನ್ನೊಂದು ವಿಷಯವನ್ನು ನಮ್ಮ ಮಿತ್ರರಾದ ದೇಶಪಾಂಡೆಯವರು ಇಂಗ್ಲೀಷ್ ಶಾಲೆಯವರು ಡೊನೇಶನ್ ತೆಗೆದುಕೊಳ್ಳುತ್ತಾರೆ, ಸುಲಿಗೆ ಮಾಡುತ್ತಿದ್ದಾರೆ ಎಂದು ಹೇಳಿದರು. ಈ ಶಾಲೆಗಳನ್ನು ಒಳ್ಳೆಯದಾಗಿ ನಡೆಸಿಕೊಂಡು ಹೋಗುವಂಥ 3–4–5 ಶಾಲೆಗಳನ್ನು ಕೊಟ್ಟರೆ, ಅಲ್ಲಿ ಡೊನೇಷನ್ ಕಾಂಪಿಟೇಷನ್ ಇರುವುದಿಲ್ಲ. ಒಂದೇ ಶಾಲೆ ಇದ್ದರೆ ಡೊನೇಷನ್ ಕಾಂಪಿಟೇಷನ್ ಇರುತ್ತದೆ. ಇವತ್ತು ಇಂಗ್ಲೀಷ್ ಶಾಲೆಗಳಲ್ಲಿ ಸೀಟು ಕೊಡಿ ಎಂದು 20–25 ಸಾವಿರ ರೂಪಾಯಿಗಳನ್ನು ಕೊಟ್ಟು ಹೋಗತಕ್ಕ ವಹಿವಾಟು ಇದೆ, ಇಲ್ಲವೆಂದಲ್ಲ. ಆದರೆ, ಶಾಲೆಗಳು ಜಾಸ್ತಿ ಇದ್ದರೆ, ಅಲ್ಲಿ ಕಾಂಪಿಟೇಷನ್ ಇರುವುದಿಲ್ಲ. ಅದಕ್ಕೆ ಮಾನ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ಇಂಗ್ಲೀಷ್ ಶಾಲೆಗಳನ್ನು ಬಹಳಷ್ಟು ಮಾಡಿ, ಇಂಗ್ಲೀಷ್ ಕಲಿಯುವವರು ಇಂಗ್ಲೀಷ್ ಕಲಿಯುತ್ತಾರೆ. ಆದರೆ, ಮೊದಲನೇ ಪ್ರಾತಿನಿಧ್ಯ ಕನ್ನಡಕ್ಕ ಕೊಡಬೇಕು, ಎರಡನೇ ಪ್ರಾತನಿಧ್ಯವನ್ನು ಇಂಗ್ಲೀಷಿಗೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಳ್ಳುತ್ತೇನೆ.

ಪ್ರೊ। ಎಂ.ಡಿ. ನಂಜುಂಡಸ್ವಾಮಿ : ಸಭಾಧ್ಯಕ್ಷರೇ ಇಲ್ಲಿ ರಾಷ್ಟ್ರಕವಿ ಕುವೆಂಪುರವರ ಹೆಸರು ಬಂತು. ಸನ್ಮಾನ್ಯ ಶಾಮಣ್ಣನವರು ಹೇಳಿದರು. ಸನ್ಮಾನ್ಯ ಶಾಮಣ್ಣನವರಿಗೆ ಗೊತ್ತಿದೆ, ನನಗೂ ಮತ್ತು ಕುವೆಂಪುರವರಿಗೂ ಈಗಲೂ ನಿಕಟ ಸಂಪರ್ಕ ಇದೆಯೆಂದು ಕುವೆಂಪುರವರ ಭಾಷಾ ನಿಲುವು, ಅವರು ಸ್ಪಷ್ಟವಾಗಿ ಹೇಳಿರುವುದು, ಅವರದೇ ಆದ ಮಲನಾಡು ಭಾಷೆಯಲ್ಲಿ ಹೇಳಿರುವುದನ್ನು ಈ ಸದನಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಕನ್ನಡದ ಸ್ಥಾನ ಏನಿರಬೇಕು, ಇಂಗ್ಲೀಷ್‌ನ ಸ್ಥಾನ ಎಲ್ಲಿರಬೇಕೆಂದು, ಅವರದೇ ಭಾಷೆಯಲ್ಲಿ ನನಗೆ ಕುವೆಂಪುರವರು ಹೇಳಿದ್ದು. ಇಂಗ್ಲೀಷಿನ ಸೊಂಟ ಮುರಿಯಬೇಕು, ಹಿಂದಿ ಮುಂಡಿ ಮುರಿಯಬೇಕು, ಕನ್ನಡಕ್ಕೆ ಅಗ್ರಸ್ಥಾನ ಕೊಡಬೇಕು! ಎಂದು ಕುವೆಂಪುರವರು ಹೇಳಿದ್ದ ಮಾತನ್ನು ಈ ಸದನದ ಮುಂದೆ ಇಟ್ಟು, ಮಾನ್ಯ ಶಾಮಣ್ಣನವರಿಗೆ, ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಯು.ಕೆ. ಶಾಮಣ್ಣ : ಕುವೆಂಪುರವರು ಇಂಗ್ಲೀಷನ್ನು ವಿರೋಧ ಮಾಡಿ ಮಾತನಾಡುವುದು ಇಲ್ಲವೆಂದು ಹೇಳಿದೆ.

ಅಧ್ಯಕ್ಷರು : ಅವರು ಹೇಳಿದರು, "ಸೊಂಟ ಮುರಿಯಬೇಕು'' ಎಂದು ಅಷ್ಟೆ. ಅವರು ವಿರೋಧ ಮಾಡಲಿಲ್ಲ, ಸೊಂಟ ಮುರಿಯಿರಿ ಎಂದು ಹೇಳಿದರು.

ಶ್ರೀ ಎ. ರುಕ್ಕಯ್ಯ ಪೂಜಾರಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುವಾಗ, ನಮ್ಮ ಮನಸ್ಸಿಗೆ ಅನಿಸಿದ್ದು, ಬಹುಶಃ ಇಂಗ್ಲೀಷ್ ಕಲಿತರೆ ಮಾತ್ರ ಬುದ್ಧಿವಂತರು, ವಿದ್ಯಾವಂತರು, ಉಳಿದವರು ಅಷ್ಟು ವಿದ್ಯಾವಂತರಲ್ಲ, ಬುದ್ಧಿವಂತರಲ್ಲ, ಎನ್ನುವ ಭಾವನೆ ಇಲ್ಲಿ ವ್ಯಕ್ತವಾಗುತ್ತದೆ. ಆದರೆ ಇಂಗ್ಲೀಷ್‌ಗೆ ನಮ್ಮದೇನೂ ವಿರೋಧ ಇಲ್ಲ, ಆದರೂ ಕೂಡಾ ಕನ್ನಡಕ್ಕೆ ಸರಿಯಾದ ಪ್ರೋತ್ಸಾಹ ಕೊಡುವಂತಹದು, ಅದನ್ನು ಬೆಳೆಸುವಂತಹದು ತುಂಬಾ ಅಗತ್ಯವಾಗಿದೆ. ಇವತ್ತು ಅಧಿಕಾರಿಗಳು ಬಂದಾಗ ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ, ಆಗ ನಮ್ಮ ಮನಸ್ಸಿಗೆ ಸ್ವಲ್ಪ ಸಂಕೋಚವಾಗುತ್ತದೆ. ಇವತ್ತು ಅದನ್ನು ಪರಿಹಾರ ಮಾಡಬೇಕಾದರೆ ಅಧಿಕಾರಿಗಳು ಕನ್ನಡದಲ್ಲಿ ಮಾತನಾಡುವ ರೀತಿ ವ್ಯವಸ್ಥೆ ಮಾಡಬೇಕು ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ ಆಗ ನಮಗೆ ಸಂಕೋಚದ ಭಾವನೆ ಮೂಡಿಬರುತ್ತದ. ಈ ರೀತಿ ನಾವು ಕನ್ನಡ ನಾಡಿನಲ್ಲಿ ಹುಟ್ಟಿ ಕನ್ನಡ ಬಗ್ಗೆ ಸಂಕೋಚ ಭಾವನೆ ಬರುವುದಾದರೆ ಖಂಡಿತಾ ಅದು ಸರಿ ಹೋಗುವುದಿಲ್ಲ. ಇಂಗ್ಲೀಷ್ ಮಾತನಾಡುವವರು ಮಾತನಾಡಲಿ, ಕಲಿಯುವವರು ಕಲಿಯಲಿ, ಆದರೆ ಕನ್ನಡಕ್ಕ ಸರಿಯಾದ ಪ್ರೋತ್ಸಾಹ ಮಾಡುವುದು ತುಂಬಾ ಅಗತ್ಯವಾಗಿದೆ ಎಂದು ನಾನು ಇಲ್ಲಿ ನನ್ನ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ : (ಬೇತಮಂಗಲ) ಮಾನ್ಯ ಸಭಾಧ್ಯಕ್ಷರೇ, ಭಾಷಾವಾರು ನಿಲುವಿನ ಬಗ್ಗೆ ನನ್ನ ಸ್ಪಷ್ಟ ನಿಲುವನ್ನು ತಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಅನೇಕ ನಾವು ಇಂದಿಗೂ ಕೂಡಾ ಕನ್ನಡದಲ್ಲಿಯೇ ಮಾತನಾಡಬೇಕು, ಕನ್ನಡಕ್ಕೆ ನಾವು ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದೇವೆ. ಆದರೆ ಅನೇಕ ಜನ ಬರೀ ಬೂಟಾಟಿಕೆ ಮಾಡಿಕೊಂಡು ಕಾಲ ಕಳೆದುಕೊಂಡು ಬಂದಿದ್ದೇವೆ. ಕನ್ನಡದ ವಿಚಾರವಾಗಲೀ, ಕನ್ನಡ ಭಾಷ ವಿಚಾರವಾಗಲೀ, ನಾವೆಲ್ಲರೂ ಕೂಡಾ, ನನ್ನನ್ನು ಕೂಡಾ ಸೇರಿಕೊಂಡು ಹೇಳುತ್ತಿದ್ದೇನೆ, ನಾವು ಅನೇಕ ಸಾರಿ ಬೂಟಾಟಿಕೆ ಮಾಡಿಕೊಂಡು ಇರತಕ್ಕಂಥ ನಗ್ನಸತ್ಯವನ್ನೇ ನಾವು ನೋಡಿದ್ದೇವೆ. ಕಾರಣ ಏನೆಂದರೆ ಅನೇಕ ಸಲ ಇಲ್ಲಿ ಭಾಷಣ ಮಾಡುತ್ತೇವೆ, ವೇದಿಕೆಯ ಮೇಲೆ ಭಾಷಣ ಮಾಡುತ್ತೇವೆ. ಆದರೆ ನಾವೆಲ್ಲರೂ ಕೂಡಾ ಇಂಗ್ಲೀಷ್ ಶಾಲೆಗೆ ಮಕ್ಕಳನ್ನು ಕಳುಹಿಸಿಕೊಡುತ್ತೇವೆ. ಅದರ ಅರ್ಥ ಏನೆಂದರೆ ಮೂಲಭೂತವಾಗಿ ಇವತ್ತು ತಮಿಳುನಾಡು ಆಂಧ್ರಪ್ರದೇಶ ಇವುಗಳನ್ನು ತೆಗೆದುಕೊಂಡಾಗ ಮೊದಲಿನಿಂದ ರಕ್ತಗತವಾಗಿ ಅವರ ಭಾಷೆ ಕೆಳಗಿನಿಂದ ಮೇಲ್ಮಟ್ಟಕ್ಕೆ ಬಂದಿದೆ. ನಾವು ಭಾಷೆಯನ್ನು ಬೆಳಸುವುದಕ್ಕೆ ಬದಲಾಗಿ, ಭಾಷೆಯ ಹೆಸರು ಹೇಳಿಕೊಂಡು ನಾವು ಬೆಳೆಯತಕ್ಕಂಥ ಪ್ರಶ್ನೆ ಇದೆ. ಅನೇಕ ಸ್ನೇಹಿತರು, ಸಹೋದ್ಯೋಗಿ ಮಿತ್ರರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೂ ಕೂಡಾ ಜ್ಞಾನಾರ್ಜನ ದೃಷ್ಟಿಯಿಂದ ಇಂಗ್ಲೀಷ್ ಕಲಿತರ ತಪ್ಪೇನಾಗುವುದಿಲ್ಲ. ಒಬ್ಬ ಮನುಷ್ಯನಿಗೆ ಜ್ಞಾನ ಬೇಕಾದರೆ ಯಾವ ಭಾಷೆ ಬೇಕಾದರೂ ಕಲಿಯಬಹುದು. ಇದು ಅವನ ಬುದ್ಧಿಶಕ್ತಿಯ ಆಧಾರದ ಮೇಲೆ ಇರುತ್ತದೆ ಎಂದು ನನ್ನ ಸಲಹೆ. ಮತ್ತೆ ಕನ್ನಡದ ಬಗ್ಗೆ ತುಚ್ಛವಾದ ಭಾವನ ಬರುವುದಕ್ಕೆ ಸರಕಾರವೂ ಕೂಡ ನೇರವಾಗಿ ಹೊಣಗಾರಿಕೆಯನ್ನು ಹೊರಬೇಕಾಗಿದೆ. ಇವತ್ತು ಪಟ್ಟಣಗಳಲ್ಲಿ ಅನೇಕ ಕಾನ್ವೆಂಟ್ ಶಾಲೆಗಳಿಗೆ 30ರಿಂದ 40 ಸಾವಿರ 50 ಸಾವಿರ ರೂಪಾಯಿ ಡೊನೇಷನ್ ಕೊಡುವಂಥ ಪ್ರಶ್ನೆ ಇದೆ. ಯಾವುದೇ ಸರಕಾರ ಆಗಿರಲಿ, ಆ ಸರಕಾರ, ಈ ಸರಕಾರ ಎಂದು ಅಲ್ಲ. ಇದುವರೆಗೆ ನಡೆದುಕೊಂಡು ಬಂದಿರತಕ್ಕಂಥ ಅನೇಕ ಸರಕಾರಗಳು ಕಾರಣವಾಗಿದೆ. ಅನೇಕರಿಗೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಶಾಲೆಗಳ ವಿಚಾರವಾಗಲೀ, ಶಿಕ್ಷಕರ ವಿಚಾರವಾಗಲೀ, ಅಧಿಕಾರಿಗಳ ವಿಚಾರವಾಗಲೀ, ಇದನ್ನು ಯಾರೂ ಸ್ಟ್ರೆಂಥನ್ ಮಾಡುವುದಕ್ಕೆ ಪ್ರಯತ್ನ ಮಾಡಲೇ ಇಲ್ಲ. ಉದಾಹರಣೆಗೆ ಹೇಳಬೇಕಾದರೆ ಒಬ್ಬ ಎ.ಇ.ಒ.ಗೆ 300ರಿಂದ 400 ಶಾಲೆಗಳು ಬರುತ್ತವೆ. ಅವನಿಗೊಂದು ಜೀಪ್ ಸಹ ಇಲ್ಲ. ಒಂದು ವರ್ಷಕ್ಕೆ ಒಬ್ಬ ಎ.ಇ.ಒ ಎಷ್ಟು ಶಾಲೆಗೆ ವಿಜಿಟ್

LA. Vol. VII

ಕೊಡುವುದಕ್ಕೆ ಸಾಧ್ಯವಾಗುತ್ತದೆ? ಅದನ್ನು ಸ್ಟ್ರೆಂಥೆನ್ ಮಾಡುತ್ತಿಲ್ಲ ಅನೇಕ ಒಳ್ಳೊಳ್ಳೆಯ ವಿದ್ಯಾವಂತರು, ಅನೇಕ ಅನುಭವಿಗಳು ಇರತಕ್ಕಂಥ ಶಾಲೆಗಳನ್ನು ಪಟ್ಟಣಗಳಲ್ಲಿ ತೆರೆಯುವುದರಿಂದ ಇಲ್ಲಿ ನೂಕುನುಗ್ಗಲು ಆಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಟ್ರೆಂಥೆನ್ ಮಾಡಿ, ಅನೇಕ ಜನರಿಗೆ, ಒಳ್ಳೆಯ ಸವಲತ್ತುಗಳನ್ನು ಕೊಟ್ಟು ಬುದ್ಧಿಜೀವಿಗಳನ್ನು ಅಲ್ಲಿ ಹಾಕಿದ್ದೇ ಆದರೆ, ಅವರು ಇಲ್ಲಿಗೆ ಬರುವುದು ಕಡಿಮೆಯಾಗುತ್ತದೆ. ಆದುದರಿಂದ ಇಂಗ್ಲೀಷ್ ಶಾಲೆ ತೆಗೆಯಬಾರದೆಂದು ಇಲ್ಲಿ. ನಮ್ಮ ಸರಳ ಭಾಷೆಯಲ್ಲಿ ಕಲಿಯಬೇಕು, ಕನ್ನಡದಲ್ಲಿ ಪ್ರತಿಯೊಬ್ಬರಿಗೂ ಅರ್ಥವಾಗುವ ರೀತಿಯಲ್ಲಿ ಇರಬೇಕು. ಜೊತೆಗೆ ಅದನ್ನು ಕಲಿತು ಜ್ಞಾನಾರ್ಜನೆ ವಿಚಾರದಲ್ಲಿ ಯಾವುದೇ ಬೇರೆ ಭಾಷೆ ಕಲಿತರೆ ತೊಂದರೆ ಇಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಸಾದತ್‌ಆಲಿಖಾನ್ : (ಚನ್ನಪಟ್ಟಣ) ಮಾನ್ಯ ಅಧ್ಯಕ್ಷರೇ ಈಗ ಇಂಗ್ಲೀಷ್ ಸ್ಕೂಲ್ಸ್ ಕೊಡಬಾರದೆಂದು ಸ್ವಲ್ಪ ಜನ ಸದಸ್ಯರು ಮಾತನಾಡಿದ್ದಾರೆ. ನಾವೆಲ್ಲರೂ ಕೊಡಬೇಕೆಂದು ಹೇಳಿದ್ದೇವೆ. ಇಂಗ್ಲೀಷ್ ಸ್ಕೂಲ್ಸ್ ಏತಕ್ಕೆ ಕೊಡಬೇಕೆಂದರೆ, ನಾವು ನೋಡುತ್ತಿದ್ದೇವೆ, ನೀವೂ ನೋಡುತ್ತಿದ್ದೀರಿ, ಇವತ್ತು ಚನ್ನಪಟ್ಟಣ ಮಂಡ್ಯದಲ್ಲಿ ಯಾರು ಇಂಗ್ಲೀಷ್ ಸ್ಕೂಲ್ಸ್ ನಡೆಸುತ್ತಿದ್ದಾರೆ ಅವರು ಯಾವ ಮಟ್ಟದಲ್ಲಿದ್ದಾರೆ, ಎಂದು ನೋಡುತ್ತೀದ್ದೇವೆ, ಇವತ್ತು ಇಂಗ್ಲೀಷ್ ಸ್ಕೂಲ್ಸ್‌ಗೆ ಸೇರಿಸುವುದಕ್ಕೆ ಮಾತ್ರ ಲೆಟರ್ಸ್ ಬೇಕೆಂದು ನಮ್ಮ ಹತ್ತಿರ ಜನಗಳು ಬರುತ್ತಾರೆ, ಬೇರೆ ಯಾವ ಸ್ಕೂಲ್ಸ್‌ಗೂ ಯಾರೂ ಬರುವುದಿಲ್ಲ. ಇವತ್ತು ತಮ್ಮ ಮಕ್ಕಳನ್ನು ಇಂಗ್ಲೀಷ್ ಸ್ಕೂಲ್ಸ್‌ಗೆ ಸೇರಿಸುವುದಕ್ಕೆ ಹಳ್ಳಿಯಿಂದ ಜನ ಮಂಡ್ಯಕ್ಕೆ, ಬೆಂಗಳೂರಿಗೆ ಬರುತ್ತಿದ್ದಾರೆ. ಇವತ್ತು ನನ್ನ ಕಾನ್‌ಸ್ಟಿಟ್ಯೂಯೆನ್ಸಿಯ ಎಷ್ಟೋ ಜನರು ಮಕ್ಕಳಿಗೆ ಓದಿಸಬೇಕೆಂದು ಬೆಂಗಳೂರಿಗೆ ಬಂದಿರುತ್ತಾರೆ. ಅವರಿಗೆ ಬಾಲ್ಡ್‌ವಿನ್ ಬೇಕು, ಸೋಫಿಯಾಬೇಕು, ಈಗ ಒಂದು ಹೇಳುತ್ತೇನೆ. ನಾನು ಸೋಫಿಯಾ ಸ್ಕೂಲ್‌ಗೆ ಹೋಗಿದ್ದೆ. ಅಲ್ಲಿ ಪ್ರಿನ್ಸಿಪಾಲರನ್ನು ನೋಡುವುದಕ್ಕೆ ಆಗುವುದಿಲ್ಲ. ಪ್ರಿನ್ಸಿಪಾಲ್ ಯಾರನ್ನೂ ನೋಡುವುದಿಲ್ಲ. ಮಿನಿಸ್ಟರ್ ಲೆಟರ್ ಇದ್ದರೂ ಪಕ್ಕದಲ್ಲಿರುವ ಬುಟ್ಟಿಗೆ ಹಾಕುತ್ತಾರೆ. ಮಿನಿಸ್ಟರ್ ಬಂದರೂ ನೋಡುವುದಿಲ್ಲ. ಇನ್ನು ಎಂ.ಎಲ್.ಎಗಳಿಗೆ ಬೆಲೆನೇ ಕೊಡುವುದಿಲ್ಲ ಇವತ್ತು ಇಂಗ್ಲೀಷ್ ಲಾಂಗ್ವೇಜ್ ಡಿಸ್ಕರೇಜ್ ಮಾಡಿಬಿಟ್ಟರೆ ಇವತ್ತು ಕಂಪ್ಯೂಟರ್ ಕೋರ್ಸ್ ಓದಬೇಕು, ಇದು ಡೇ ಬೈ ಡೇ ಮಾಡರ್‌ನೈಷೇಷನ್ ಆಗುತ್ತಿದೆ, ಇವತ್ತು ಕಂಪ್ಯೂಟರ್ ಕೋರ್ಸ್, ಎಲೆಕ್ಟ್ರಾನಿಕ್ ಓದಬೇಕೆಂದರೆ ಇಂಗ್ಲೀಷ್‌ನಲ್ಲಿ ಓದಬೇಕು. ಕನ್ನಡವನ್ನು ಕೂಡಾ ಕಂಪಲ್‌ಸರಿ ಆಗಿ ಮಾಡಿ, ಕಂಪಲ್‌ಸರಿಯಾಗಿ 100 ಮಾರ್ಕ್ಸ್ ಕನ್ನಡಕ್ಕೆ ಇಟ್ಟರೆ ಅದೇ ರೀತಿಯಾಗಿ ಇಂಗ್ಲೀಷಗೂ ಇಡಿ.

ಕನ್ನಡಕ್ಕೆ ನಾವು ಎಷ್ಟು ಇಂಪಾರ್ಟೆನ್ಸ್ ಕೊಡುತ್ತೇವೋ ಅದೇ ರೀತಿಯಾಗಿ ಇಂಗ್ಲೀಷ್‌ಗೂ ಕೊಡಬೇಕು. ಈಗ ನಮ್ಮ ಕರ್ನಾಟಕದಿಂದ ಒಬ್ಬರೂ ಕೂಡ ಐ.ಎ.ಎಸ್. ಪಾಸ್ ಮಾಡಲಿಲ್ಲ. ಈ ವರ್ಷ ಒಬ್ಬರೂ ಇಲ್ಲ. ಕೇರಳದಿಂದ ಇಬ್ಬರು ಮಾತ್ರ ಪಾಸಾಗಿದ್ದಾರೆ. ತಮಿಳುನಾಡಿನಿಂದ ಆಗಿದ್ದಾರೆ. ಆದರೆ ನಮ್ಮ ಕರ್ನಾಟಕದಿಂದ ಒಬ್ಬರೂ ಇಲ್ಲ, ನಾವು ಎಲ್ಲಿಂದ ತರುತ್ತಿದ್ದೇವೆ ಅಂದರೆ ಯು.ಪಿ.ಯಿಂದ ಅಥವಾ ಬಿಹಾರ್‌ನಿಂದ ಇಲ್ಲಿ 90% of the IAS officers are from North India ನಮ್ಮ ಕರ್ನಾಟಕದಿಂದೇ ಬಹಳ ಕಡಿಮೆ ಐ.ಎ.ಎಸ್. ಆಫೀಸರ್ಸ್ ಇದ್ದಾರೆ.. ನಾವು ಇಂಗ್ಲೀಷನ್ನು ಡಿಸ್‌ಕರೇಜ್ ಮಾಡಿರುವುದರಿಂದಲೇ ನಮ್ಮಲ್ಲಿ ಯಾರೂ ಐ.ಎ.ಎಸ್. ಆಫೀಸರ್ಸ್ ಆಗಿಲ್ಲ. ಅದಕ್ಕೆ ಕನ್ನಡದ ಜೊತೆಯಲ್ಲಿ ಇಂಗ್ಲೀಷ್‌ನ್ನು ಕಲಿಸಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಲಕ್ಕಣ್ಣ : ಮಾನ್ಯ ಅಧ್ಯಕ್ಷರೇ ಈಗ ಕನ್ನಡ ಮಾಧ್ಯಮ, ಇಂಗ್ಲೀಷ್ ಮಾಧ್ಯಮದ ಸಮಸ್ಯೆ ಈ ಸಭೆಯಲ್ಲಿ ಪ್ರಾರಂಭವಾಗಿದೆ. ಕಳದ 20 ವರ್ಷಗಳ ಹಿಂದೆ ಇಂಗ್ಲೀಷ್ ಮೀಡಿಯಂ ಎಲ್ಲೂ ಇರಲಿಲ್ಲ. ಆದರ ಕನ್ನಡ ಮೀಡಿಯಂನಲ್ಲಿ ಓದಿ ಇಂಜಿನಿಯರ್ಸ್ ಆಗಿದ್ದಾರೆ, ಡಾಕ್ಟರ್ಸ್ ಆಗಿದ್ದಾರೆ. ತಾವು ಕೂಡ ಬಾರ್ ಆಟ್‌ಲಾ ಮಾಡಿದ್ದೀರಿ. ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಇವು ಹಣವನ್ನು ಸುಲಿಗೆ ಮಾಡತಕ್ಕಂಥ ಸಂಸ್ಥೆಗಳಾಗಿವೆ. ಅವುಗಳಿಗೆ ಸಹಕಾರ ಮಾಡಿದಂತಾಗಿದೆ ಬಾಲ್ಡ್‌ವಿನ್ ಮತ್ತು ಅನೇಕ ಕ್ರಿಶ್ಚಿಯನ್ ಶಾಲೆಗಳಲ್ಲಿ ಓದಿದವರು ಯಾರೂ ಐ.ಎ.ಎಸ್ ಆಗಿಲ್ಲ. ಐ. ಪಿ.ಎಸ್ ಆಗಿಲ್ಲ.

ಅವರು ಬಿ.ಎಸ್ಸಿಗೂ ಹೋಗುವುದಿಲ್ಲ. ಏನಿದ್ದರೂ ಅವರು ವ್ಯವಹಾರ ಮಾಡತಕ್ಕಂಥಾದ್ದಕ್ಕೆ ಭಾಷೆ ಕಲಿಸುತ್ತಾರೆ. ಆದರೆ ಜ್ಞಾನಾರ್ಜನ ಅವರಿಗೆ ಬರುವುದಿಲ್ಲ ತಾವು ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗೆ ಅನುಮತಿ ಕೊಟ್ಟರೆ, ಆ ಶಿಕ್ಷಣ ಸಂಸ್ಥೆಯವರು ಲಕ್ಷಾಧಿಪತಿಗಳಾಗುತ್ತಾರೆಯೇ. ಹೊರತು ಈ ಸಮಸ್ಯೆ ಬಗೆಹರಿಯುವುದಿಲ್ಲ. ಈ ದಿಸೆಯಲ್ಲಿ ಕನ್ನಡ ಮೀಡಿಯಂ ಇರತಕ್ಕಂಥಾದ್ದು ಒಳ್ಳೆಯದು. ಅದಕ್ಕೆ ನಾವು ಬೆಂಬಲ ಕೊಡಬೇಕು. ತಾವೆಲ್ಲ ಬಾರ್ ಅಟಲಾ ಮಾಡಿದ್ದೀರಿ. ಸರ್.ಎಂ. ವಿಶ್ವೇಶ್ವರಯ್ಯನವರು ಈ ದೇಶದಲ್ಲಿ ಹೆಸರಾಂತ ಇಂಜನೀಯರ್ ಆಗಿದ್ದರು, ಅದೇರೀತಿ ಡಾಕ್ಟರ್ಸ್ ಆಗಿದ್ದಾರೆ. ಹೊರದೇಶಕ್ಕೆ ಹೋಗಿದ್ದಾರೆ. ಅವರೆಲ್ಲಾ ಹಳ್ಳಿಗಳಲ್ಲಿ ಓದಿದವರು ಪೇಟೆಯಲ್ಲಿ ಓದಿದವರು ಯಾರೂ ಕೂಡ ಅಂತಹ ಮಟ್ಟಕ್ಕೆ ಹೋಗಿಲ್ಲ, ಆದ್ದರಿಂದ ಕನ್ನಡಕ್ಕೆ ಹೆಚ್ಚಿನ ಪ್ರಾತಿನಿಧ್ಯ, ಕೊಡಬೇಕೆಂದು ನಾನು ಮಾನ್ಯ ವಿದ್ಯಾಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಚಿಕ್ಕಮಾದು (ಹುಣಸೂರು) :– ಮಾನ್ಯ ಅಧ್ಯಕ್ಷರೇ, ಸುಮಾರು 40–45 ನಿಮಿಷಗಳ ಕಾಲ ಇವತ್ತು ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಬಗ್ಗೆ ಚರ್ಚೆಯಾಗುತ್ತಿದೆ. ಈ ವಿಚಾರದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ಕೊಟ್ಟರೂ ಕೂಡ ಇಂಗ್ಲೀಷ್ ಭಾಷೆ ಕಲಿಯಬೇಕಾದದ್ದು ಅತ್ಯಗತ್ಯ. ಏಕೆಂದರೆ ನಾನು ಈ ಸದನಕ್ಕೆ ಹೊಸದಾಗಿ ಬಂದಂಥ ಸಂದರ್ಭದಲ್ಲಿ ಅದರಲ್ಲಿಯೂ ಮೊದಲನೆಯ ಬಜೆಟ್ ಲೀಕೇಜ್ ಬಗ್ಗೆ ಚರ್ಚೆ ಆಗುತ್ತಿರುವ ಸಂದರ್ಭದಲ್ಲಿ ಹಿರಿಯ ಸದಸ್ಯರುಗಳು ದೇಶ ವಿದೇಶಗಳ ನಡವಳಿಕೆಗಳನ್ನು ಪ್ರಸ್ತಾಪ ಮಾಡುತ್ತಿದ್ದಾಗ, ತಾವು ಕೂಡ ದೇಶವಿದೇಶಗಳ ನೀತಿ ನಿಯಮಗಳನ್ನು ಇಂಗ್ಲೀಷ್‌ನಲ್ಲಿ ಓದಿದ ಸಂದರ್ಭದಲ್ಲಿ ಮತ್ತು ಈ ಸದನದ ಹಿರಿಯ ಸದಸ್ಯರುಗಳು, ಮಾತನಾಡುತ್ತಿದ್ದಾಗ ನಾನು ನಿಮ್ಮೆಲ್ಲರನ್ನೂ ಕೂಡ ಗಂಭೀರವಾಗಿ ನೋಡಿತ್ತಿದ್ದೆ. ತಾವು ಏನೇನು ಪ್ರಸ್ತಾಪ ಮಾಡುತ್ತಿದ್ದೀರಿ, ಯಾವ್ಯಾವ ವಿಧಿವಿಧಾನಗಳನ್ನು, ನಿಯಮಗಳನ್ನು ಪರಿಪಾಲನೆ ಮಾಡಡುತ್ತಿದ್ದೀರಿ ಎಂದು ನೋಡುತ್ತಿದ್ದೆ. ಏಕೆಂದರೆ ನಾನೊಬ್ಬ ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂಥ ಸದಸ್ಯ. ಆ ದಿಸೆಯಿಂದ ನನಗೆ ಪ್ರಾರಂಭದಲ್ಲಿ ಇದನ್ನೆಲ್ಲ ಅರ್ಥಮಾಡಿಕೊಳ್ಳುವುದು ಆ ಸಂದರ್ಭದಲ್ಲಿ ಸ್ವಲ್ಪ ಕಷ್ಟ ಆಯಿತು. ಆದರೂ ಕೂಡ ತಾವು ಕೊಟ್ಟ ತೀರ್ಪನ್ನು ಕನ್ನಡಕ್ಕೆ ಅನುವಾದ ಮಾಡಿ ಅರ್ಥಮಾಡಿಕೊಂಡೆ ನನಗೆ ಪ್ರಪಂಚಜ್ಞಾನ ಬರಬೇಕಾದರೆ ಇಂಗ್ಲೀಷ್ ಭಾಷೆ ಮಹತ್ವ, ಅತ್ಯವಶ್ಯಕ. ಇದು ಪರಭಾಷೆ ಪರಕೀಯರ ಭಾಷೆ ಎಂದು ನಾವುಕೂಡ ದೂರ ಇರಬಾರದು. ಅದು ಮುಂದಿನ ಏಳಿಗೆಗೆ ಇಂಗ್ಲೀಷ್ ಭಾಷೆ ಸಹಾಯಕವಾಗುತ್ತದೆ. ಆ ದಿಸೆಯಿಂದ ಗ್ರಾಮೀಣ ಪ್ರದೇಶದಲ್ಲಿ ಇಂಗ್ಲೀಷ್‌ನ್ನು ಕಡ್ಡಾಯವಾಗಿ ತರಬೇಕು. ಇವತ್ತು ಇಂಗ್ಲೀಷ್‌ನಲ್ಲಿ ಗ್ರಾಮರ್ ಎನ್ನತಕ್ಕಂಥಾದ್ದು ಹೊರಟು ಹೋಗಿದೆ. ಯಾವುದೇ ಶಾಲೆಗಳಲ್ಲಿ ಇಂಗ್ಲೀಷ್‌ನ್ನು ಪ್ರಥಮವಾಗಿ ಕೈಗೆತ್ತಿಕೊಳ್ಳುತ್ತಾರೆ . ಆದರೆ ವ್ಯಾಕರಣ ಯಾರೂ ಕೂಡ ಸರಿಯಾಗಿ ಹೇಳಿಕೊಡುತ್ತಿಲ್ಲ. ಅಲ್ಲಿ ಪಾಠ ಹೇಳಿಕೊಡುವ ಉಪಾಧ್ಯಾಯರಿಗೂ ಕೂಡ ವ್ಯಾಕರಣ ಗೊತ್ತಿರುವುದಿಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಕಡ್ಡಾಯವಾಗಿ ಹೇಳಿಕೊಡಬೇಕು ಆದರ ಜೊತೆಗೆ ಗ್ರಾಮರ್‌ನ್ನು ಕೂಡ ಹೇಳಿಕೊಡತಕ್ಕದರ ಬಗ್ಗೆ ವ್ಯವಸ್ಥೆ ಮಾಡಬೇಕು. ನಾವು ಇಂಗ್ಲೀಷ್ ಮಾತನಾಡುವುದಕ್ಕೆ ಪ್ರಯತ್ನಪಟ್ಟರೂ ಕೂಡ ವ್ಯಾಕರಣದ ತೊಂದರೆಯಿಂದಾಗಿ ಕೆಲವು ಸಂದರ್ಭಗಳಲ್ಲಿ ಹಿಂಜರಿಯಬೇಕಾಗುತ್ತದೆ. ನಮ್ಮಲ್ಲಿ ಬಹತೇಕ ಐ.ಎ.ಎಸ್. ಮತ್ತು ಕೆ.ಎ.ಎಸ್. ಉನ್ನತ ಮಟ್ಟದ ಶಿಕ್ಷಣ ಪರೀಕ್ಷೆಗೆ ಭಾಷೆ ಅತಿ ಮುಖ್ಯ. ಭಾಷೆ ನಮ್ಮಲ್ಲಿ ಕಲಿಯುವುದಕ್ಕೆ ಅಷ್ಟು ಕಷ್ಟ ಇದೆ. ಮಾನ್ಯ ಸದಸ್ಯರುಗಳು ಉತ್ತರ ಪ್ರದೇಶದಿಂದ ಹೆಚ್ಚು ಐ.ಎ.ಎಸ್. ಅಧಿಕಾರಿಗಳು ನಮ್ಮಲ್ಲಿಗೆ ಬರುತ್ತಿದ್ದಾರೆಂದು ಹೇಳಿದರು. ನಮ್ಮಲ್ಲಿ ಐ.ಎ.ಎಸ್. ಅಧಿಕಾರಿಗಳು ಕಾಣಿಸುತ್ತಿಲ್ಲ., ಅದು ಸಾಧ್ಯವಿಲ್ಲ. ಆ ದೃಷ್ಟಿಯಿಂದ ಕಡ್ಡಾಯವಾಗಿ ಇಂಗ್ಲೀಷ್ ಬೇಕಾಗಿದೆ. ಆದರೆ ಮೊದಲ ಆದ್ಯತೆ ಕನ್ನಡಕ್ಕೆ ನಾವು ಕೊಟ್ಟು ಯಾವ ಯಾವ ಸ್ಥಾನದಲ್ಲಿ ಯಾವ ಯಾವ ಭಾಷೆ ಇರಬೇಕೆಂಬುದನ್ನು ನಾವು ಮಾಡಬೇಕು. ಇವತ್ತು ಹಿಂದಿ ಕೂಡ ನಮಗೆ ಅವಶ್ಯಕತೆ ಇದೆ. ನಾವು ದೆಹಲಿಗೆ ಹೋಗಿ ಅಲ್ಲಿ ಯಾವುದಾದರೊಂದು ಕಚೇರಿಗೆ ಹೋದರೆ ಅಲ್ಲಿ 4ನೇ ದರ್ಜೆ ನೌಕರನಿಂದ ಹಿಡಿದು ಮೇಲಾಧಿಕಾರಿಗಳ ಹತ್ತಿರ ಮಾತನಾಡಬೇಕಾದರೂ ಹಿಂದಿ ಅವಶ್ಯಕತೆ ಇದೆ. ಆ ಆಫೀಸಿನಲ್ಲಿರುವ

4ನೇ ದರ್ಜೆ ನೌಕರರಿಗೆ ಇಂಗ್ಲೀಷ್ ಅಷ್ಟಾಗಿ ಬರುವುದಿಲ್ಲ ನಮಗೆ ಹಿಂದಿ ಬರುವುದಿಲ್ಲ. ಆ ಸಂದರ್ಭದಲ್ಲಿ ನಾವು ಭೇಟಿ ಮಾಡಲು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಪ್ರತಿಯೊಂದು ಭಾಷೆ ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ಅವಶ್ಯಕ ಇದೆ. ಅದಕ್ಕೆ ತಾವು ಒಂದೊಂದು ಸ್ಥಾನಮಾನ ಕೊಡಿ ಕರ್ನಾಟಕದಲ್ಲಿ ಕನಡಕ್ಕೆ ಮೊದಲ ಸ್ಥಾನ ಕೊಡಿ ಇಂಗ್ಲೀಷ್ ಮತ್ತು ಹಿಂದಿ ಕಲಿಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸರ್ ನಾಯಕ ಅಜಯಕುಮಾರ್ ಸಾಂಬಸದಾಶಿವ (ಬಾಗಲಕೋಟೆ) :— ಸನ್ಮಾನ್ಯ ಅಧ್ಯಕ್ಷರೆ, ಪ್ರಾಮುಖ್ಯವಾಗಿ ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಅನುಮತಿಯನ್ನು ಕೊಡಬೇಕೆಂದು ನಾನು ಬಹಳಷ್ಟು ಸಮಯದಿಂದ ಒತ್ತಾಯ ಮಾಡುತ್ತಿದ್ದೇನೆ. ಪ್ರಾಮುಖ್ಯವಾಗಿ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಈ ಮೀಡಿಯಂ ಆಫ್ ಲಾಂಗ್ವೇಜನ್ನು ಸೆಲೆಕ್ಟ್ ಮಾಡಿಕೊಳ್ಳುವುದು ಅವರವರ ತಂದೆತಾಯಿಗಳ ಇಚ್ಛೆಗೆ ಬಿಟ್ಟಿರ ಬೇಕೇ ಹೊರತು ಸರ್ಕಾರವಾಗಲೀ ಅಥವಾ ಕೆಲವೇ ವ್ಯಕ್ತಿಗಳ ಒತ್ತಾಯಕ್ಕೆ ಒಂದು ಭಾಷೆಯನ್ನು ಹೇರುವುದು ಅಷ್ಟು ಸಮಂಜಸವಲ್ಲ. ಮತ್ತೆ ನಾವು ಯಾವಾಗಲೂ 21ನೇ ಸೆಂಚುರಿ ವಿಷಯವಾಗಿ ಮಾತನಾಡುತ್ತಿದ್ದೇನೆ. ಅದೇ ತರಹ ಮೆಡಿಕಲ್ ಕಾಲೇಜುಗಳಲಾಗಲೀ, ಇಂಜಿನೀಯರಿಂಗ್ ಕಾಲೇಜುಗಳಲ್ಲಾಗಲೀ, ಸರಿಯಾದ ಶಬ್ದಗಳು ಕನ್ನಡದಲ್ಲಿ ಇಲ್ಲ. ಸೀಮಿತವಾಗಿ ಕೆಲವೇ ಶಾಲೆಗಳು ಇರುವುದರಿಂದ ಹೆಚ್ಚು ಡೊನೇಷನ್ ಕೇಳುತ್ತಿದ್ದಾರೆ ಆದ್ದರಿಂದ ಇನ್ನೂ ಅಷ್ಟು ಶಾಲೆಗಳಿಗೆ ಪರವಾನಿಗಿ ಕೊಟ್ಟರೆ ಈ ಡೊನೇಷನ್ ವ್ಯವಸ್ಥೆಯನ್ನು ಖಂಡಿತವಾಗಿಯೂ ತಪ್ಪಿಸಬಹುದು. ಮತ್ತು ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲೂ ಕನ್ನಡ ಒಂದು ಸಬ್ಜೆಕ್ಟ್ ಆಗಿ ಇದ್ದೇ ಇದೆ. ಆದ್ದರಿಂದ ಇಂಗ್ಲೀಷ್ ಮೀಡಿಯಂಗೆ ಯಾರು ಕೇಳುತ್ತಿದ್ದರೋ ಅವರು ಖಂಡಿತವಾಗಿಯೂ ಕನ್ನಡಕ್ಕೆ ವಿರೋಧಿಗಳಲ್ಲ. ಉದಾಹರಣೆಗಾಗಿ ಇಲ್ಲಿ ಮಾತನಾಡಿದ ಎಲ್ಲಾ ಸದಸ್ಯರ ಮಕ್ಕಳು, ಸನ್ಮಾನ್ಯ ಇದಿನಬ್ಬನವರ ಮಗನ ಮಕ್ಕಳು ಎಲ್ಲರೂ ಇಂಗ್ಲೀಷ್ ಮೀಡಿಯಂನಲ್ಲಿ ಓದುತ್ತಿದ್ದಾರೆ. ಅವರ ಮಗನ ಮಗನಿಗೆ ನಮ್ಮ ಸನ್ಮಾನ್ಯ ಲಾ ಮಿನಿಸ್ಟರ್ ಆದ ಡಿಸೋಜಾರವರು ಒಂದು ಸೀಟನ್ನು ಕೊಡಿಸಿಕೊಟ್ಟರು.

(ಗೊಂದಲ)

ಶ್ರೀ ಸರ್ ನಾಯಕ್. ಅಜಯಕುಮಾರ್ ಸಾಂಬಸದಾಶಿವ :— ನಾನೇ ಮಿನಿಸ್ಟರ್ ಹತ್ತಿರ ಹೋಗಿ ಅವರ ಮೊಮ್ಮಗನಿಗೆ ಒಂದು ಸೀಟ್ ಕೊಡಿಸಿಕೊಟ್ಟಿದ್ದೇನೆ. ಇಂಗ್ಲೀಷ್ ಮೀಡಿಯಂ ಬೇಕೆಂದು ನಾನು ಕೇಳುತ್ತಿರುವುದರಿಂದ ನಾನು ಕನ್ನಡ ವಿರೋಧಿಯಲ್ಲ. ಆದ್ದರಿಂದ ದಯವಿಟ್ಟು ನಾವು ಬಾವಿಯೊಳಗಿರುವ ಕಪ್ಪೆಯಂತೆ ಆಗುವುದು ಬೇಡ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಇಲ್ಲಿ ಮಾತನಾಡಿದಂಥ ಅನೇಕ ಸದಸ್ಯರ ಮನೆಯ ಮಕ್ಕಳೆಲ್ಲಾ ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲಿ ಓದುತ್ತಿದ್ದಾರೆಂದು ಆರೋಪ ಮಾಡಿದರು. ಆ ಕಾರಣ ನಾನು ಎದ್ದುನಿಲ್ಲಬೇಕಾಯಿತು. ನನ್ನ ಇಬ್ಬರೂ ಮಕ್ಕಳನ್ನೂ ರಾಜಾಜಿನಗರದಲ್ಲಿರುವ ವಿದ್ಯಾವರ್ಧಕ ಸಂಸ್ಥೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದಾರೆಂದು ಈ ಸದನಕ್ಕೆ ತಿಳಿಸುವುದಕ್ಕೆ ಇಚ್ಛಪಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ :— ಹಾಗಿದ್ದರೆ ಪ್ರೈವೇಟ್ ಆಗಿ ಟ್ಯೂಷನ್‌ನಲ್ಲಿ ಇವರು ಇಂಗ್ಲೀಷ್‌ನ್ನು ಹೇಳಿ ಕೊಡಿಸುತ್ತಿರಬಹುದು.

ಶ್ರೀ ವಾಟಾಳ್‌ನಾಗರಾಜ್ :— ಸ್ವಾಮಿ, ಅಧ್ಯಕ್ಷರೆ, ನಾಗಮಂಗಲದ ಶಾಸಕರಾದ ಶಿವರಾಮೇಗೌಡರು, ನನ್ನ ಮಕ್ಕಳು ಸದಾ ಇಂಗ್ಲೀಷ್ ಶಾಲೆಯಲ್ಲಿ ಓದುತ್ತಿದ್ದಾರೆಂದು ಹೇಳಿ ಆರೋಪಣೆ ಮಾಡಿದ್ದಾರೆ.

ಅಧ್ಯಕ್ಷರು :— ಪ್ರಿವಿಲೇಜ್‌ಗೆ ಹಾಕಿ.

ಶ್ರೀ ವಾಟಾಳ್ ನಾಗರಾಜ್ :— ದಯಮಾಡಿ, ನಾನು ಹಕ್ಕುಚ್ಯುತಿ ತರುವುದಕ್ಕಿಂತ ಮುಂಚೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನ್ನ ಇಬ್ಬರೂ ಮಕ್ಕಳೂ ಕನ್ನಡ ಮಾಧ್ಯಮದಲ್ಲೇ ಓದುತ್ತಿರುವುದು. ಶಿವರಾಮೇಗೌಡರಿಗೂ ನನಗೂ ಇಷ್ಟು ವರ್ಷದ ಸ್ನೇಹ ಇದೆ. ಅವರಿಗೆ, ನಾನು ಏನು ಎತ್ತ ಎಂದು ಗೊತ್ತಿಲ್ಲದೆ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ. ಇವರು ಈ ಸಬೆಯಲ್ಲಿ ಇಂಥಾ

ಬೇಜವಾಬ್ದಾರಿ ಹೇಳಿಕೆ ಕೊಡುತ್ತಿದ್ದಾರೆ. ನಾಗಮಂಗಲದಲ್ಲಿ ಕನ್ನಡದ ಜನರಿಂದ ವೋಟು ತೆಗೆದುಕೊಂಡು ಅವರ ವಿರುದ್ಧ ತೀರ್ಮಾನಕ್ಕೆ ಬರತಕ್ಕಂಥವರು, ಅವರು ಈ ಕೂಡಲೇ ಶಾಸನ ಸಭೆಯ ಸ್ಥಾನಕ್ಕೆ ರಾಜೀನಾಮೇ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನೀವೇ ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ :— ನಾನು ಏನಾದರೂ ಆ ಮಾತನ್ನು ಹೇಳಿದ್ದೆ, ಈ ಕ್ಷಣದಲ್ಲೇ ರಾಜೀನಾಮೆ ಕೊಟ್ಟು ಹೋಗುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನನ್ನ ಮಕ್ಕಳಿಗೆ ಕನ್ನಡ ಕಲಿಸಿ ನನಗೆ ಬಹಳ ಅನ್ಯಾಯವಾಗಿದೆ ಎಂದು ತಾವು ಹೇಳಿದ್ದೀರಿ. ಅವರಿಗೆ ಇಂಗ್ಲೀಷ್ ಕಲಿಸಬೇಕಾಗಿತ್ತು ಎಂದು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನಾನು ಮಹದೇಶ್ವರನ ಮೇಲೆ ಆಣೆ ಇಟ್ಟು ಹೇಳುತ್ತಿದ್ದೇನೆ. ಈ ಮಾತನ್ನು ನಾನು ಎಂದೂ ಆಡಿಲ್ಲ. ನನ್ನ ಆತ್ಮಸಾಕ್ಷಿಯಾಗಿ ನಾನು ಎಂದೂ ಹಾಗೆ ಹೇಳಲಿಲ್ಲ. ಇದು ನನಗೆ ಬಹಳ ನೋವಾಗಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾನು ಹುಟ್ಟು ಕನ್ನಡಿಗ. ನನ್ನ ನೀತಿ ಕನ್ನಡ. ಅದನ್ನು ಯಾರೂ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ಇವರ ವ್ಯಾಖ್ಯಾನ ಬೇಕಾಗಿಲ್ಲ. ಈ ದೇಶದಲ್ಲಿ ರಾಜಾರಾಮಣ್ಣನಂಥವರು, ಕನ್ನಡದಲ್ಲಿ ಓದಿ ದೊಡ್ಡ ವ್ಯಕ್ತಿಯಾಗಿದ್ದಾರೆ. ಶಿವರಾಮೇಗಾಡರಿಗೆ ಇಂಥಾ ವಿಚಾರಗಳು ಏನು ಗೊತ್ತು? ಇತಿಹಾಸ ಏನು ಗೊತ್ತಿದೆ?

ಶ್ರೀ ವಿಜಯಕುಮಾರ್ ಶೆಟ್ಟಿ :— ಇಂಗ್ಲೀಷ್ ಮಾಧ್ಯಮಕ್ಕೆ ಅನುಮತಿ ಕೊಡದಿದ್ದರೆ ಅದರಿಂದ ಕನ್ನಡದ ಅಭಿವೃದ್ಧಿಯಾಗುತ್ತದೆ ಎಂಬ ಒಂದು ತಪ್ಪು ಭಾವನೆಯನ್ನು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದಾರೆ. ಅಧ್ಯಕ್ಷರೇ, ನನ್ನ ಕ್ಷೇತ್ರವು ನವಮಂಗಳೂರು, ಬಂದರು ಪ್ರದೇಶದಲ್ಲಿರುವ ಕ್ಷೇತ್ರವಾಗಿದೆ. ನಮ್ಮ ರಾಷ್ಟ್ರದ ಅಭಿವೃದ್ಧಿಗೆ ಜೀವನದಂತಿರುವ ನನ್ನ ಕ್ಷೇತ್ರದಲ್ಲಿ, ನಮ್ಮ ರಾಷ್ಟ್ರದ ಎಲ್ಲಾ ಭಾಗಗಳವರು ಇರುವಂಥ ಕ್ಷೇತ್ರ ನನ್ನದ್ದು. ಆದ್ದರಿಂದ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಸಂದರ್ಭದಲ್ಲಿ ಅನುಮತಿ ಕೊಡಬೇಕು. ಸುಮಾರು 150 ಶಾಸಕರುಗಳು ಸಹಿ ಮಾಡಿ ನಾವು ಒಂದು ಮನವಿಯನ್ನು ಕೊಟ್ಟಿದ್ದೇವೆ. ಆ ಬಗ್ಗೆ ಪರಿಶೀಲಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ (ಜಯಮಹಲ್) :— ಮಾನ್ಯ ಅಧ್ಯಕ್ಷರೇ, ಕರ್ನಾಟಕದ ನಾಲ್ಕು ಕೋಟಿ ಜನರ ಎದುರು ಇರುವ ಪ್ರಾಮುಖ್ಯವಾದ ಸಮಸ್ಯೆ ಅಂದರೆ, ಯಾವ ಭಾಷೆ ಮಾಧ್ಯಮವಾಗಿರಬೇಕು ಮತ್ತು ಆಗಿರಬಾರದು ಎಂದು ಅಲ್ಲ. ನಮ್ಮೆಲ್ಲರ ಅತೀ ಪ್ರಾಮುಖ್ಯವಾದ, most important and second aspect of the entire matter is that Kannada should be given as a compulsory language.

ಕನ್ನಡವನ್ನು ಎಲ್ಲರೂ ಕಡ್ಡಾಯವಾಗಿ ಕಲಿಯಬೇಕೆಂದು ಹೇಳುವುದೇ ನಮ್ಮ ಎದುರು ಇರುವ ದೊಡ್ಡದಾದ ಒಂದು ಪ್ರಶ್ನೆಯಾಗಿದೆ. ಅದಕ್ಕಾಗಿ ನಮ್ಮ ಮಾತೃಭಾಷೆ ಕನ್ನಡವಲ್ಲದಿದ್ದರೂ ಕನ್ನಡವನ್ನು ಕಲಿಯಬೇಕು. ಕನ್ನಡವು ಬಹಳ ಸರಳ ಹಾಗೂ ಬಹಳ ಉತ್ತಮವಾದ ಭಾಷೆ. ಅದಕ್ಕಾಗಿ ಪ್ರತಿಯೊಬ್ಬರೂ ಒಂದನೇ ತರಗತಿಯಿಂದಲೇ ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇ ಬೇಕು. ಕರ್ನಾಟಕದಲ್ಲಿರುವ ಎಲ್ಲರಿಗೂ ಕನ್ನಡ ಭಾಷೆ ಬರಬೇಕೆಂದು ಹೇಳಿ, ನಾನು ಆ ಒಂದು ತತ್ವ ಮತ್ತು ವಿಚಾರವನ್ನು ಇಟ್ಟುಕೊಂಡವನಾಗಿದ್ದೇನೆ. ಆದಕ್ಕಾಗಿ ಇವೊತ್ತು ಶಿಕ್ಷಣ ಮಾಧ್ಯಮ ಯಾವುದು ಇರಬೇಕೆಂದು ಹೇಳುವ ಬದಲು, ಅದು ಇಂಗ್ಲೀಷ್ ಇರಲಿ, ಕನ್ನಡ ಇರಲಿ, ಯಾವುದೇ ಇರಲಿ, ಶಿಕ್ಷಣ ಮಾಧ್ಯಮ ಎನ್ನುವುದು ಒಂದು Teaching ಇಶ್ಯೂ ಆಗಿದೆ. Medium of instruction is one issue; but knowing Kannada, to aching Kannada is the major issue.

ಎಂದು ನಾನು ತಿಳಿದುಕೊಂಡಿದ್ದೇನೆ. ಆ ಕಾರಣದಿಂದ ಇಂಗ್ಲೀಷ್ ಇಲ್ಲದೆ ಸೈನ್ಸ್ ಕಲಿಯಲಿಕ್ಕೆ ಆಗುವುದಿಲ್ಲವೇ? ರಷ್ಯಾ, ಜಪಾನ್‌ಗಳಲ್ಲಿ ಬ್ರಿಟೀಷರು ತಮ್ಮ ಆಳ್ವಿಕೆಯನ್ನು ಮಾಡಲಿಲ್ಲ. ರಷ್ಯಾದಲ್ಲಿ ಇಂಗ್ಲೀಷ್ ಭಾಷೆಯು ಅಲ್ಲಿ ಅಡ್ಮಿನಿಸ್ಟ್ರೆಶನ್ ಆಗಿರಲಿಲ್ಲ. ನಮ್ಮ ಭಾರತದಲ್ಲಿ . . .

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ಮಾನ್ಯ ಸಭಾಧ್ಯಕ್ಷರೇ ತಮ್ಮ ಮೂಲಕ ಮಾತನಾಡಲು ಅಪ್ಪಣೆ ಪಡೆಯುತ್ತಾ ಇದ್ದೇನೆ If I am allowed to correct him ಜಪಾನಿನಲ್ಲಿ ಇಂಗ್ಲೀಷ್ ಮಾಧ್ಯಮ ಇತ್ತು. ಎಂಪರರ್ ಹಿರೋಹಿಟೊ ಒಂದು ರಾಯಲ್ ಡಿಕ್ರಿ ಹೊರಡಿಸಿ, ಇಂಥ ತಾರೀಖಿನಿಂದ ಈ ದೇಶದಲ್ಲಿ ಎಲ್ಲಾ ಚಟುವಟಿಕೆ ಜಪಾನೀಸ್ ಭಾಷೆಯಲ್ಲಿ ಆಗಬೇಕು ಎಂದು ಹೊರಡಿಸಿ ನಂತರ ಜಪಾನ್ ದೇಶ ಒಂದು ಪ್ರಬಲವಾದ ರಾಷ್ಟ್ರವಾಯಿತು. ಇದು ಬಹಳ ಮುಖ್ಯವಾದ ವಿಚಾರ. ಇದರ ಬಗ್ಗೆ ದೀರ್ಘವಾದ ಚರ್ಚೆಯಾದರೆ ಒಳ್ಳೆಯದು ಎಂದು ಹೇಳಿದ್ದೇನೆ. ನಾವು ಕೂಡ ಎಲ್ಲಿಯವರೆಗೆ ನಮ್ಮ ಭಾಷೆಯಲ್ಲಿಯೇ ಎಲ್ಲಾ ಚಟುವಟಿಕೆಗಳನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ಪೂರ್ಣ ಪ್ರಮಾಣದ ರಾಜಕೀಯ ಪ್ರಜಾಪ್ರಭುತ್ವ ಆಗಲೀ ಅಥವಾ ಆರ್ಥಿಕ ಪ್ರಜಾಪ್ರಭುತ್ವವಾಗಲೀ ನಾವು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ನಾವು ಸಂಪೂರ್ಣವಾಗಿ ಸಾಮರ್ಥ್ಯ ಇರುವಂಥ ಒಂದು ರಾಜ್ಯವಾಗಿ ವಿಕಾಸವಾಗುವುದಕ್ಕೆ ಸಾಧ್ಯವೇ ಆಗುವುದಿಲ್ಲ.

ಶ್ರೀ ಎಸ್.ಎಂ. ಯಾಹ್ಯಾ:– ನನಗಿಂತ ನೀವೇ ಹೆಚ್ಚು ಭಾಷಣ ಮಾಡುತ್ತಿದ್ದೀರಿ ನನಗೆ ಅವಕಾಶವೇ ಇಲ್ಲ, ನಿಮಗೆ ಬಹಳ ಥಾಟ್ಸ್ ಇದೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ತೋರಿಕೆಗೋಸ್ಕರ ನನ್ನ ಮಕ್ಕಳನ್ನು ಕನ್ನಡ ಮೀಡಿಯಂಗೆ ಹಾಕಿಲ್ಲ. I am fully convinced that educating the children through their own language is the most scientific education.

ಶ್ರೀ ನಾರಾಯಣಸ್ವಾಮಿ ಎಂ. : ನೀವು ಕನ್ನಡದಲ್ಲೇ ಓದಿದ್ದರೆ ಇಷ್ಟು ಇಂಟಲಿಜೆಂಟ್ ಆಗಿರುತ್ತಿದ್ದಿರಾ ಹೇಳಿ ?

(ಗೊಂದಲ)

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ನೀವು ಬಹಳ ಚೆನ್ನಾಗಿ ಮಾತನಾಡುತ್ತೇನೆಂದು ಹೇಳುತ್ತಿದ್ದೀರಿ ನನ್ನ ಮತ್ತು ಸಭಾಧ್ಯಕ್ಷರ ಪೀಳಿಗೆಯವರು ಶಾಲೆಯಲ್ಲಿ ಕನ್ನಡದಲ್ಲೇ ಕಲಿತದ್ದು ಆದರೆ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿತು ಶಿಕ್ಷಣ ಮಾಧ್ಯಮಕ್ಕೂ ಐತಿಹಾಸಿಕವಾಗಿ ನಮಗೆ ಇಂಗ್ಲೀಷ್ ಅವಶ್ಯಕತೆ ಇದೆ ಯಾರಿಲ್ಲ ಅಂತಾರೆ ಉಂಟು, ಆದರೆ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಯಲು ಏನಡ್ಡಿಯಿಲ್ಲ. ಆದರೆ ಇಂಗ್ಲೀಷ್ ಮಾಧ್ಯಮದ ಮೂಲಕ ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಲು ಪ್ರಾರಂಭಿಸಿದ ಕೂಡಲೇ ಅವರ ಮೆದುಳಿನ ಮೇಲೆ ನಾವು ಹತ್ಯೆ ಮಾಡುತ್ತಿದ್ದೇವೆಂದು ಅರ್ಥ. Comphension and expression will be the best when education is through the child's language. I am not using the words Mother Tongue at all. When it is through child's language. ಇದಕ್ಕೆ ಮುನಿಯಪ್ಪನವರು ಹೇಳ್ತಾ ಇದ್ದರು ಇಂಗ್ಲೀಷ್ ಲ್ಯಾಂಗ್ವೇಜ್‌ನಲ್ಲಿ ಓದುವ ಮಕ್ಕಳು ಬರೀ ಇಂಗ್ಲೀಷ್‌ನಲ್ಲಿ ಮಾತಾಡ್ತಾರೆಯೇ ಹೊರತು ವಿಷಯದ ಗ್ರಹಿಕೆ ಆಗಿರುವುದಿಲ್ಲ ಅವರಿಗೆ. ಇದು ವಿಶ್ವಾದ್ಯಂತ ಕಂಡುಬಂದಿರುವಂಥ ಸತ್ಯ ಆ ಕಾರಣ ಇದನ್ನು ಇನ್ನೂ ಸ್ವಲ್ಪ ನಿಧಾನಕ್ಕೆ ಯೋಚನೆ ಮಾಡಬೇಕು ಈ ಸಭೆಯ ಗೌರವಾನ್ವಿತ ಸದಸ್ಯರು ಅವಸರಿಸಬಾರದು. ಇಂಗ್ಲೀಷ್ ಮಾಧ್ಯಮದ ಮೂಲಕವೇ ನಮಗೆ ಮೋಕ್ಷ ಎಂಬುದು ಅಥವಾ ಇಂಗ್ಲೀಷ್ ನಮಗೆ ಜ್ಞಾನದ ಕಪಾಟ ಎಂಬುದು ಸ್ವಲ್ಪ ಅವಸರದ ತೀರ್ಮಾನಗಳು ಅಂತ ನನಗೆ ಅನ್ನಿಸುತ್ತದೆ.

ಶ್ರೀ ಎಸ್.ಎಂ ಯಾಹ್ಯಾ :– ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಒಂದು ಇತಿಹಾಸ ಸಂಸ್ಕೃತಿ ಇದೆ. ಜಪಾನಿನಲ್ಲಿ ನಂಜುಂಡಸ್ವಾಮಿಯವರು ಹೇಳಿದಂತೆ ಈಗಲೂ ಇಂಗ್ಲೀಷ್ ಕಲಿಸ್ತಿದ್ದಾರೆ ಮತ್ತು ಇನ್ನೊಂದು ವಿಚಾರವೆಂದರೆ ಜಪಾನ್ ದೇಶ It is a Unitary State. It is not a federal

state. There is only one language in Japan, whereas in India, it is having multi - multi - religious, multi-linguistic-everything multi. In such a very complicated country, can we say this is not correct and this is correct.

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ಹೊಸ ಸಮಸ್ಯೆ ತೆಗೆದಿರಿ. ಸಂಪರ್ಕ ಭಾಷೆ ಬಗ್ಗೆ ಮಾತನಾಡಬೇಕಾಗುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ :– ನಾನು ಯಾವ ವಾದಕ್ಕೂ ಸಿದ್ಧನಿದ್ದೇನೆ, ಈ ವಿಚಾರದಲ್ಲಿ. ಆದರೆ ಅಧ್ಯಕ್ಷರು ಹೆಚ್ಚು ಸಮಯ ಕೊಟ್ಟರೆ, ನೀವೂ ಸಹ ಬಹಳ ಯೋಚನೆ ಮಾಡಿ ನನಗಿಂತ ಹೆಚ್ಚು ನಿಮಗೆ ತಮ್ಮದೇ ಆದ ನಿಲುವಿರಬಹುದು. ನಾನೂ ಸಹ ಬಹಳ ಯೋಚನೆ ಮಾಡಿ ಇಡೀ ದೇಶದ ಈಗಿನ ಪರಿಸ್ಥಿತಿಯಲ್ಲಿ, ಯಾವಾಗಲೂ ಇಂಗ್ಲೀಷ್ ಇರಬೇಕೂಂತ ಹೇಳುವುದಿಲ್ಲ ಆದರೆ ಈಗಿನ ಪರಿಸ್ಥಿತಿಯಲ್ಲಿ ಯಾವ ಇಂಗ್ಲೀಷ್ ಭಾಷೆ ಇಡೀ ದೇಶದಲ್ಲಿ ಒಂದು ಶಿಕ್ಷಣ ಪದ್ಧತಿಯನ್ನು ತಂದಿತ್ತೋ, ಈ ಇಂಗ್ಲೀಷ್ ಬರುವ ಮುಂಚೆ ಬರೀ ಕರ್ನಾಟಕವೆಲ್ಲ ಇಡೀ ಭಾರತದ ಐಕ್ಯತೆಗಾಗಿ ಯಾವುದಾದರೂ ಭಾಷೆ, ದಕ್ಷಿಣ ಭಾರತ ನಾರ್ತ್ ಇಂಡಿಯಾ ಎಲ್ಲ ಒಟ್ಟುಗೂಡಿ ನಮ್ಮ ಸ್ವಾತಂತ್ರ್ಯ ಚಳುವಳಿಯಲ್ಲಿ ಒಂದು ಭಾಷೆ ನಮ್ಮೆಲ್ಲರನ್ನೂ ಒಂದುಗೂಡಿಸಿ ಐಕ್ಯ ಮಾಡಿದ್ದು ಎಂದರೆ ಅದು ಇಂಗ್ಲೀಷ್ ಭಾಷೆ ಒಂದೇ! ಇಂಗ್ಲೀಷರು ಬಹಳ ತಪ್ಪು ಮಾಡಿರಬಹುದು ಅವರಿಂದ ಬಹಳ ಶೋಷಣೆ ಆಗಿರಬಹುದು ಆದರೆ ಒಳ್ಳೆ ಕಾರ್ಯಗಳು ಆಗಿವೆ, ದೇಶದ ಐಕ್ಯತೆಯನ್ನು ಇಂಗ್ಲೀಷಿನಿಂದಲೂ ಮಾಡಿದ್ದಾರೆಂಬ ಕಾರಣದಿಂದ ಜಪಾನಿನ ಇತಿಹಾಸ, ಸಂಸ್ಕೃತಿ, ಇಂಡಿಯಾದ ಇತಿಹಾಸ ಸಂಸ್ಕೃತಿ ತೀರಾ ಬದಲಾಗಿದೆ ಅಂತ ನಾನು ಹೇಳುತ್ತೇನೆ. ಆ ಕಾರಣದಿಂದ ಈ ವಿಚಾರದಲ್ಲಿ ನನ್ನದೊಂದು ಸಲಹೆ, ಮದರ್‌ಟಂಗ್ ಅಂತ ನಾನು ಹೇಳ್ತೇನೆ, ಅದು ಚೈಲ್ಡ್ ಭಾಷೆ ಅಂತ ಪ್ರೊ. ನಂಜುಂಡಸ್ವಾಮಿಯವರು ಹೇಳ್ತಾ ಇದ್ದಾರೆ ಅದನ್ನು ಕಲಿಸಬೇಕು. ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಎಂದು ಹೇಳಿದರೆ ಎಲ್ಲಾ ಇಂಗ್ಲೀಷ್ ಎಂದು ಅಲ್ಲ. ಅದಕ್ಕಾಗಿ ಈಗ ನಮ್ಮ ದೇಶದಲ್ಲಿ ತ್ರೀ ಲಾಂಗ್ವೇಜ್ ಫಾರ್ಮುಲಾ ಇದೆ. ನಮ್ಮಂಥವರು ಐದಾರು–ಏಳು ಲಾಂಗ್ವೇಜ್ ಕಲಿಯಲಿಲ್ಲ ಎಂದು ಹೇಳಿದರೆ ಇರುವುದೇ ಕಷ್ಟವಾಗುತ್ತದೆ. ನಮ್ಮದು ಮದರ್‌ಟಂಗ್ ಬೇರೆ ಇರುತ್ತದೆ. ಅದನ್ನು ನಾವು ಕಲಿತು ಪ್ರೊಫಿಸಿಯೆನ್ಸಿ ಹೊಡೆಯಬೇಕಾಗುತ್ತದೆ. ಹಿಂದಿ ಕಲಿತುಕೊಂಡು ಅದರಲ್ಲಿ ಪ್ರೊಫಿಸಿಯೆನ್ಸಿ ಹೊಡೆಯಬೇಕಾಗುತ್ತದೆ. ಇಂಗ್ಲೀಷ್ ಕಲಿಯಬೇಕಾಗುತ್ತದೆ. ನಮ್ಮಂಥವರಿಗೆ ಆರೇಳು ಲಾಂಗ್ವೇಜಂತೂ ಕಡ್ಡಾಯವಾಗಿ ಬರಲೇಬೇಕು. ಆ ಕಾರಣದಿಂದ ಹೇಳುವುದಾದರೆ ಈ ಮೀಡಿಯಂ ವಿಚಾರದಲ್ಲಿ ನಾವು ಬಹಳಷ್ಟು ವಿಚಾರವನ್ನು ಮಾಡದೆ ಕನ್ನಡವನ್ನು ಪ್ರತಿಯೊಬ್ಬರಿಗೆ ಕಲಿಸುವ ರೀತಿಯಲ್ಲಿ ಕರ್ನಾಟಕದಲ್ಲಿ ಇದ್ದವರೂ ಪ್ರತಿಯೊಬ್ಬರೂ ಸದಾ ಕನ್ನಡವನ್ನು ಕಲಿಯಲೇಬೇಕು. ಆ ಕಡೆ ನಾವು ಜ್ಞಾನ ಇರಬೇಕು ಎಂದು ಹೇಳುತ್ತಿದ್ದೇನೆ. ಇದರಿಂದ ಯಾವುದೇ ಒಂದು ಇತಿಹಾಸದಿಂದ ಯಾವುದೊಂದು ಲಾಂಗ್ವೇಜ್‌ಗೂ ಮೀಡಿಯಂ ಮಾಡಿ, ಮಾಡದೇ ಇರಲಿ, ಕನ್ನಡ ಮೀಡಿಯಂ ಮಾಡುವುದಕ್ಕೆ ಬರುತ್ತಾರೋ ಅವರಿಗೆ ಗ್ರಾಂಟ್ ಕೊಡಬೇಡಿ. ಕನ್ನಡವನ್ನು ಫಸ್ಟ್‌ಕ್ಲಾಸ್ ಎಂದು ಕಡ್ಡಾಯ ಮಾಡಿಕೊಳ್ಳಿ. ಈ ಸೊಸೈಟಿ ಬಹಳಷ್ಟು ಕಾಂಪ್ಲಿಕೇಟೆಡ್ ಸೊಸೈಟಿ ಇರುವುದರಿಂದ ನಾವು ಒಂದು ಕಡೆ ಅತೃಪ್ತಿಯನ್ನು ಉಳಿಸಬಾರದು. ಕೆಲವರು ಕಲಿಯಬೇಕು ಎಂದು ಹೇಳಿದರೆ He has a right to learn. Now we are in a state of liveralisation. But we cannot have the freedom to open school in whatever medium we want. I for one who would say that every person should have the right to have his own medium of instruction. Only the standard and examinations, should be decided by the Government. We should not go on interering with the Institutions. Let us have a policy. Kannada should be learnt.

ಕನ್ನಡ ಆಗಲೇಬೇಕು, ಪ್ರತಿಯೊಬ್ಬರೂ ಕಡ್ಡಾಯವಾಗಿ ಕಲಿಯಲೇಬೇಕು, ಆ ಒಂದು ವಿಚಾರವನ್ನು ಇಟ್ಟುಕೊಂಡು ಮುಂದೆ ಹೋಗಬೇಕೇ ಹೊರತು ಇಂಗ್ಲೀಷ್ ಆಗಲೇಬಾರದು, ಇಂಗ್ಲೀಷಿನಿಂದ ಅನಾಹುತವಾಗಿದೆ ಎಂದು ಹೇಳಿದರೆ ಇಂಗ್ಲೀಷ್ ಇಲ್ಲದಿದ್ದರೂ ಅನಾಹುತವಾಗುವುದಕ್ಕೆ ಸಾಧ್ಯ ಇದೆ.

ಅದನ್ನೂ ಸಹಾ ವಿಚಾರ ಮಾಡಬೇಕು. ಇಡೀ ದೇಶಕ್ಕೆ ಯಾವುದೇ ಒಂದು ಲ್ಯಾಂಗ್ವೇಜ್ ಇಡೀ ನ್ಯಾಷನಲ್ ಇಂಟಿಗ್ರಿಟಿಗೆ ಕೆಲಸ ಮಾಡಿದೆಯೋ ಇನ್ನೂ ಅದು ಹೋಗಿಲ್ಲ. ಇಂಗ್ಲೀಷಿನ ಇಂಪಾರ್ಟೆನ್ಸ್ ಇವತ್ತಲ್ಲ ನಾಳೆ ಹೋಗುತ್ತದೆ. ಹೋದಮೇಲೆ ಅದನ್ನು ತೆಗೆದುಹಾಕೋಣ. ಬೇಡವೇ ಬೇಡ ಎಂದು ಹೇಳೋಣ. ಆದರೆ ಈಗ ಇಂಗ್ಲೀಷಿನ ಇಂಪಾರ್ಟೆನ್ಸ್ ಇದೆ, ಆ ಕಾರಣದಿಂದ ನಾನು ಈ ಮೀಡಿಯಂನ ವಿಚಾರವನ್ನು ಮಾತನಾಡದೇ ಇಡೀ ಕನ್ನಡವನ್ನು ಎಲ್ಲರಿಗೂ ಕೊಡಬೇಕು. ಯಾರು ಇತರೆ ಮೀಡಿಯಂ ಮಾಡುವುದಕ್ಕೆ ಮುಂದೆ ಬರುತ್ತಾರೋ ಅವರಿಗೆ ಅಧಿಕಾರವನ್ನು ಕೊಡಬೇಕು. ಅವರಿಗೆ ಆ ಒಂದು ರೈಟ್ ಇದೆ, ಆ ರೈಟನ್ನು ನಾವು ತೆಗೆದುಹಾಕಬಾರದು. ಆ ರೈಟಿಗೆ we should not restrict their right ಎಂದು ಹೇಳಿ ಈ ವಿಚಾರವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) :— ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಕನ್ನಡವನ್ನು ಕಂಪಲ್ಸರಿಯಾಗಿ ಕಲಿಯಬೇಕು ಎಂದು ಹೇಳಿ ಮಾಡುವುದು ಒಳ್ಳೆಯದು. ಆದರೆ ಇಂಗ್ಲೀಷ್ ಕಲಿಯಬಾರದು ಎಂದು ಹೇಳುವುದೂ ಕೂಡಾ ತಪ್ಪಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಕೆಲವು ಟೆಕ್ನಿಕಲ್ ಕೋರ್ಸ್ ಏನು ಇದೆ, ಅದರಲ್ಲಿ ಇಂಗ್ಲೀಷ್ ಪದಗಳನ್ನು ಉಪಯೋಗಿಸಬೇಕಾಗುತ್ತದೆ. ಕನ್ನಡದಲ್ಲಿ ಇಲ್ಲ. ಫಾರ್ ಎಕ್ಸಾಂಪಲ್ ಆಟೋಮೋಬೈಲ್, ಜೂಡಿಸಿಯ. ಇದರಲ್ಲಿ ಏನು ಹೇಳುತ್ತೀರಿ? ಕನ್ನಡದಲ್ಲಿ ಪದಗಳು ಇಲ್ಲ. ಇಂಗ್ಲೀಷನ್ನು ಕನ್ನಡದಲ್ಲಿ ಟ್ರಾನ್ಸ್‌ಲೇಟ್ ಮಾಡುವುದಕ್ಕೆ ವರ್ಡ್ಸ್ ಇಲ್ಲ. ಆ ರೀತಿಯಾದಾಗ ಏನು ಮಾಡಬೇಕು? ಉದಾಹರಣೆಗೆ ನಮ್ಮ ಹಾಸ್ಪಿಟಲ್‌ನಲ್ಲಿ "ಬೋರ್ಡ್ ಆಫ್ ವಿಸಿಟರ್ಸ್‌ನಲ್ಲಿ'' ನಾನು ಒಬ್ಬ ಮೆಂಬರ್. ಸಿಮೆನ್ಸ್ ಕಂಪನಿ, ಬಾಂಬೆಯಲ್ಲಿದೆ ಒಂದು ಎಕ್ಸ್‌ರೇ ಪ್ಲಾಂಟ್ ಕೆಟ್ಟುಹೋಗಿದೆ. ಕನ್ನಡ ಟೈಪರೈಟರ್ ಆಸ್ಪತ್ರೆಯಲ್ಲಿ ಇದೆ. ನಾವು ಕರ್‌ಸ್ಪಾಂಡೆನ್ಸ್ ಮಾಡಿದೆವು. ರಿಪ್ಲೈ ಇಲ್ಲ. ಆಮೇಲೆ ಪಾರ್ಟ್ಸ್ ಹೆಸರು ಇಂಗ್ಲೀಷಿನಲ್ಲಿ ಇದೆ, ನಾವು ಅದನ್ನು ಕನ್ನಡದಲ್ಲೇ ಟ್ರಾನ್ಸ್‌ಲೇಟ್ ಮಾಡಿ ಬರೆದೆವು. ಸೇಮ್ ವರ್ಡ್ಸ್. ಅದೇನಾಯಿತು, ಮತ್ತೇ ಸ್ವಲ್ಪ ದಿವಸವಾದ ಮೇಲೆ ಮತ್ತೆ ಇನ್ನೊಂದು ಲೆಟರ್‌ನ್ನು ಬರೆದೆವು. ಅವರು ಅಲ್ಲಿಂದ ಇಂಗ್ಲೀಷ್‌ನಲ್ಲಿ ಬರೆದರು. Your correspondence should be in English or in Hindi, we do not follow Kannada ಅಂತ ಬರೆದರು. ಏನು ಮಾಡಬೇಕು ಇಂಥ ಸಂದರ್ಭದಲ್ಲಿ. For two months x-ray plant was dead. Who are the sufferers? Patients. ಅದೇ ರೀತಿ ಆಟೋಮೊಬೈಲ್ ಸೆಕ್ಷನ್ ತೆಗೆದುಕೊಳ್ಳಿ. ನೀವು ಕೆಲವು ಟೆಕ್ನಿಕಲ್ ಇನ್ಸ್‌ಟಿಟ್ಯೂಷನ್‌ನ್ನು ಕೊಡುತ್ತಿದ್ದಿರಿ.

ಅಧ್ಯಕ್ಷರು :— ನನಗೂ ಒಂದು ತೊಂದರೆ ಇದೆ. ನಾನು ಕನ್ನಡದಲ್ಲಿ ಮಾತನಾಡುವುದಕ್ಕೆ ಬಹಳ ಪ್ರಯತ್ನ ಪಡುತ್ತೇನೆ. ಆದರೆ ಸಭೆಯಲ್ಲಿ ಸ್ವಲ್ಪ ಒಂದು ಸಾರಿ ತಡಬಂದಿಗೆ ತರುವಾಗ 'ಆರ್ಡರ್, ಆರ್ಡರ್' ಎಂದು ಹೇಳುತ್ತೇನೆ. ಅದನ್ನು ಕನ್ನಡದಲ್ಲಿ ಹೇಗೆ ಹೇಳಬೇಕು ಎಂದು ನನಗೆ ಗೊತ್ತಾಗುವುದಿಲ್ಲ. ವಾಟಾಳ್ ನಾಗರಾಜ್‌ರವರು ಏನಾದರೂ ಅದರ ಬಗ್ಗೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ :— ಒಪ್ಪುತ್ತೇನೆ.

ಅಧ್ಯಕ್ಷರು :— ಕೋಪಮಾಡಿಕೊಳ್ಳಬೇಡಿ.

ಶ್ರೀ ವಾಟಾಳ್ ನಾಗರಾಜ್ :— ತಮ್ಮ ಮನಸ್ಸಿನ ಅನಿಸಿಕೆಯನ್ನು ನಾನು ಒಪ್ಪುತ್ತೇನೆ. ನನಗನ್ನಿಸುತ್ತಿದೆ . . . .

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾವು 150 ಜನ ಶಾಸಕರು ಇದ್ದೇವೆ. ತಾವು ನಮ್ಮ ಸಹಕಾರಕ್ಕೆ ಬರಬೇಕು.

ಅಧ್ಯಕ್ಷರು :— ನಿಮ್ಮನ್ನು ಕರೆದಾಗ ನೀವು ಹೇಳುವಿರಂತೆ.

ದಯವಿಟ್ಟು ಕುಳಿತುಕೊಳ್ಳಬೇಕು. ನಿಮ್ಮ ವಿಚಾರಲಹರಿಗೆ ನಾನು ಯಾವತ್ತೂ ಕಡಿವಾಣ ಹಾಕುವುದಿಲ್ಲ. ಕುಳಿತುಕೊಳ್ಳಿ. ಅವಕಾಶವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :— ನಾವು ಕನ್ನಡ ಭಾಷೆಯನ್ನು . . . .

ಅಧ್ಯಕ್ಷರು :— ನನ್ನ ಪ್ರಶ್ನೆಗೆ ಬರುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :— ತಮ್ಮ ಪ್ರಶ್ನೆಗೆ ಬರುತ್ತೇನೆ.. ಭಾಷೆಯನ್ನು ಸಮೃದ್ಧಪಡಿಸಬೇಕಾದರೆ ನಾವು ಜನ ಬಳಸತಕ್ಕ ಭಾಷೆಗಳನ್ನು ಉಪಯೋಗಿಸಬೇಕಾಗುತ್ತದೆ. ಕನ್ನಡ ಭಾಷೆಯ ಬೆಳವಣಿಗೆಯ ಬಗ್ಗೆ ಬರೀ ಆಡಳಿತ ಭಾಷೆಯಾಗಿದೆ, ಕನ್ನಡ ಮಾಧ್ಯಮ ಆಗಿದೆ ಎಂದು ಹೇಳಿದರೆ ಸಾಕಾಗುವುದಿಲ್ಲ. ಸರ್ಕಾರ ಇದರ ಸಂಪತ್ತನ್ನು ಗಳಿಸಬೇಕು., ಸಂಪತ್ತನ್ನು ಬೆಳೆಸಬೇಕು., ಶಬ್ದಕೋಶವನ್ನು ಬೆಳೆಸಬೇಕು., ಇದು ನಮ್ಮಲ್ಲಿ ಬೆಳೆಯುತ್ತಿಲ್ಲ. ಆದ್ದರಿಂದ ಈ ಶಬ್ದಕೋಶವನ್ನು ಬೆಳೆಸಿ ಇದನ್ನು ಆಚರಣೆಗೆ ತಂದರೆ ಸಾಧ್ಯ. ಈ ರೀತಿ 150 ಜನ ನಮಗೆ ಇಂಗ್ಲೀಷ್ ಇರಲಿ, ಕನ್ನಡವೇ ಬೇಡ ಅಂದರೆ ಶಬ್ದಗಳು ಬರುವುದಿಲ್ಲ. ಭಾಷೆ ಬರುವುದಿಲ್ಲ.

ಅಧ್ಯಕ್ಷರು :— ನಿಜ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ನನ್ನ ಶಬ್ದಕೋಶಕ್ಕೆ ನೀವು ಸ್ವಲ್ಪ ಸಹಕಾರ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಆರ್ಡರ್ ಅನ್ನುವುದಕ್ಕೆ ಏನು ಹೇಳಬೇಕು ಅಂದರೆ, ಒಂದು ಸಾರಿ ಶಬ್ದದ ಬ್ರಹ್ಮರು ಅಂತ ಹೆಸರಾಗಿದ್ದಂಥ ತಿತಾಶಮಾನ್ ಅವರ ಜೊತೆಯಲ್ಲಿ ಒಂದು ಚರ್ಚೆ ಬಹಳ ಚೆನ್ನಾಗಿ ನಡೆಯಿತು. ನಾನು ಆ ಒಂದು ಸಭೆಯಲ್ಲಿ ಅವರ ಹತ್ತಿರ ಒಂದು ಇಂಗ್ಲೀಷ್ ಪದ ಷೂ ಲೇಸಿಗೆ ಕನ್ನಡದಲ್ಲಿ ಏನೆಂದು ಅದಕ್ಕೆ ಅವರು ಬಹಳ ಸೊಗಸಾಗಿ ಹೇಳಿದರು. ಉಡಿಗೆ ಹಾಕುವುದಕ್ಕೆ ಉಡಿದಾರ ಅನ್ನುತ್ತೀಯಾ, ಅಡ್ಡ ಅಡ್ಡಹಾಕುವುದಕ್ಕೆ ಜನಿವಾರ ಅಂತೀಯಾ, ಹಾಗೆ ಇದನ್ನು “ಬಿಗಿದಾರ” ಅನ್ನು ಅಂದ್ರು. ಮತ್ತೊಂದು ಕಡೆ ಕುವೆಂಪುರವರು ಹಾಸನದಲ್ಲಿ ಒಂದು ಸಭೆಯೊಳಗೆ ‘ಸ್ಟಾರ್ಟ್’ ಅನ್ನುವ ಪದಕ್ಕೆ ಚಾಲನೆ ಅಂತ ಇದೆ. ಕನ್ನಡ ಎನ್ನು. ಇದಕ್ಕೆ ಏಕೆ ಕನ್ನಡವನ್ನು ಹುಡುಕುವುದಕ್ಕೆ ಹೋಗುತ್ತಿಯಪ್ಪಾ, ಒಂದು ಪದ ಕನ್ನಡದ ಶಬ್ದಕೋಶಕ್ಕೆ ಸೇರಿದರೆ ನಷ್ಟವಾಗುವುದಿಲ್ಲ. ಕೆಲವರು ಸ್ಟಾರ್ಟ್ ಕರೋ ಅನ್ನುತ್ತಾರೆ, ಇನ್ನು ಕೆಲವರು ಸ್ಟಾರ್ಟ್ ಮಾಡು ಅನ್ನುತ್ತಾರೆ. ಸ್ಟಾರ್ಟ್ ಅನ್ನುವ ಪದ ಕನ್ನಡ ಶಬ್ದಭಂಡಾರಕ್ಕೆ ಸೇರಲಿ, ಮಾಡು ಅನ್ನುವುದನ್ನು ಕನ್ನಡದಲ್ಲಿ ಹೇಳು ಅಂದ್ರು. ಹಾಗೆ ಆರ್ಡರ್ ಅನ್ನುವುದನ್ನು ಕನ್ನಡ ಶಬ್ದಕೋಶಕ್ಕೆ ಸೇರಿಸೋಣ.

ಅಧ್ಯಕ್ಷರು :— ಸೇರಿಸೋಣ, ಯಾರ್ದಾದರೂ ಆಬ್ಜೆಕ್ಷನ್ ಇದೆಯಾ?

ಶ್ರೀ ವಾಟಾಳ್ ನಾಗರಾಜ್ :—ನನ್ನ ತಕರಾರು ಇದೆ. ಎನ್ನುವುದಕಿಂತ ಹೆಚ್ಚಾಗಿ ನಮ್ಮ ಭಾಷೆಯನ್ನು ಶ್ರೀಮಂತವಾಗಿ ಬೆಳೆಸಬೇಕಾದರೆ ಬೇರೆ ಭಾಷೆಗಳಿಂದ ಪದಗಳನ್ನು ತೆಗೆದುಕೊಂಡರೆ ಅದರಲ್ಲಿ ಏನು ತಪ್ಪಾಗುವುದಿಲ್ಲ. ನಮ್ಮಲ್ಲಿ ಬಳಕೆ ಇದೆ. ಪೋಲೀಸ್ ಅಂತ ಇದೆ. ಪೋಲೀಸ್ ಎಂದು ಜನಕ್ಕೆ ಅರ್ಥವಾಗುತ್ತದೆ. ಅದನ್ನು ಬಿಟ್ಟರೆ ಆರಕ್ಷಕ ಅಂದ್ರೆ ಯಾರಿಗೂ ಅರ್ಥವಾಗುವುದಿಲ್ಲ. ಪಾದೇಕ್ಷಕ ಅಂದ್ರೆ ಏನು? ಆದ್ದರಿಂದ ಜನ ಆಡುವ ಭಾಷೆಗಳು . . . .

ಅಧ್ಯಕ್ಷರು :— ಜನಗಳಿಗೆ ಉಚ್ಚಾರ ಬಹಳ ಕಷ್ಟವಾಗುತ್ತದೆ. ಆರಕ್ಷಕ ರಕ್ಷಕ, ರಾಕ್ಷಸ, ಹಾಗೆ ಎಂದು ಹೇಳಿ ಅದು ಕೆಲವು ಕಡೆ. . . . .

ಶ್ರೀ ವಾಟಾಳ್ ನಾಗರಾಜ್ :— ಎಲ್ಲಾ ಕವಿಗಳು ಸಾಹಿತಿಗಳು ಹೇಳಿದ್ದಾರೆ. ಬೇರೆ ಭಾಷೆಯ ಪದಗಳು ನಮ್ಮಲ್ಲಿ ಬಳಕೆಯಾಗಿದ್ದರೆ ಅದನ್ನು ನಾವು ಶ್ರೀಮಂತಗೊಳಿಸೋಣ. ಸೇರಿಸಿಕೊಳ್ಳೋಣ ಅದರಲ್ಲಿ ನಮ್ಮದು ಏನು ಅಭ್ಯಾಂತರವಿಲ್ಲ. ಆದರೆ ಭಾಷೆಯನ್ನು ತರ್ಜುಮೆ ಮಾಡುವಾಗ ಯಾವ ಭಾಷೆಯನ್ನು ತರ್ಜಿಮೆ ಮಾಡಬೇಕು. ಅದೊಂದು ದೊಡ್ಡ ವಿಚಾರ ಆಗುತ್ತದೆ. ಸಂಸ್ಕೃತದಲ್ಲಿ ಮಾಡಬೇಕೇ, ಕನ್ನಡದಲ್ಲೀ ಮಾಡಬೇಕೇ, ಪದಗಳು. ಯಾವುದು ಸಿಗುತ್ತದೆ., ಇದು ಬಹಳ ದೊಡ್ಡ ವಿಚಾರವಾಗುತ್ತದೆ. ಆದ್ದರಿಂದ ದಯಮಾಡಿ ತಮಗೆ ಹೇಳುತ್ತಿದ್ದೇನೆ, ಅನೇಕ ಭಾಷೆಗಳ ಪದಗಳನ್ನು ನಮ್ಮ ಕನ್ನಡ ಭಾಷೆಗೆ ತೆಗೆದುಕೊಳ್ಳಲಿಕ್ಕೆ ತಪ್ಪೇನು ಆಗುವುದಿಲ್ಲ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು :– ಪ್ರಪಂಚದಲ್ಲಿ ನಡೆಯತಕ್ಕ ನ್ಯೂಸ್ ಏನು ನಮಗೆ ಬರುತ್ತದೆ, ಅದೆಲ್ಲಾ ಬೇರೆ ಬೇರೆ ಭಾಷೆಯಲ್ಲಿ ಹೆಚ್ಚಿಗೆ ಇಂಗ್ಲೀಷ್‌ನಲ್ಲೇ ಬರುತ್ತದೆ. ಅದನ್ನು ನಾವು ಇಲ್ಲಿ ಕನ್ನಡದಲ್ಲಿ ಪ್ರಿಂಟ್ ಮಾಡಿ ಓದಬಹುದು. ಕನ್ನಡದಲ್ಲಿ ಪ್ರಿಂಟ್ ಆಗಬೇಕಾದರ ಅದನ್ನು ಅವರು ತಿಳಿದುಕೊಂಡಿರಬೇಕಲ್ಲ, ಇಂಗ್ಲೀಷ್ ಅವರಿಗೆ ಬಂದಿರಬೇಕಲ್ಲ, ಆ ನ್ಯೂಸ್ ಅದನ್ನು ತೆಗೆದುಕೊಂಡು ಆಮೇಲೆ ಕನ್ನಡದಲ್ಲಿ ಹಾಕಲಿಕ್ಕೆ ಅವರಿಗೂ ಬರುವುದಿಲ್ಲ. ಅವರಿಗೂ ಇಂಗ್ಲೀಷ್ ಗೊತ್ತಿಲ್ಲದೆ ಇದ್ದರ ಹೇಗೆ ಮಾಡಬೇಕು? ನಮ್ಮ ದೇಶದ್ದು ನಮ್ಮ ಕರ್ನಾಟಕದ್ದು ಮಾತ್ರ ನಾವು ಓದಿಕೊಳ್ಳಬೇಕಾಗುತ್ತದೆ ಅಷ್ಟೆ. ಆದ್ದರಿಂದ ಇಂಗ್ಲೀಷ್ ಬೇಕು ಕನ್ನಡ ಬೇಡ ಅಂತ ಯಾರು ಹೇಳಲಿಲ್ಲ. ಕನ್ನಡನೂ ಬೇಕು. ಇಂಗ್ಲೀಷ್ ಕಲಿಯುನವರು ಇಂಗ್ಲೀಷ್ ಕಲಿಯಲಿ, ಇಂಗ್ಲೀಷ್ ಬೇಡ, ಕನ್ನಡ ಬೇಡ, ಅದು ಬೇಕು, ಇದು ಬೇಕು ಅಂತ ಯಾರು ಹೇಳಿಲ್ಲ, ಎರಡೂ ಬೇಕು. ಅದನ್ನು ಕಲಿಯುವರಿಗೆ ಆ ಚಾನ್ಸ್ ಕೊಡಿ. ಇದನ್ನು ಕಲಿಯುವರಿಗೆ ಈ ಚಾನ್ಸ್ ಕೊಡಿ. ಆದರೆ ಕನ್ನಡವನ್ನು ಕಂಪಲ್ಸರಿಯಾಗಿ ನಮ್ಮ ಕರ್ನಾಟಕದಲ್ಲಿ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ದಿವಸ ತಮಗೆ ನಾವು ಅಭಿನಂಧಿಸಬೇಕು. ಕಾರಣವೇನೆಂದರೆ ಇವತ್ತು ಮೂರ್ಖರ ದಿನ. ತಾವು ನಮ್ಮನ್ನೆಲ್ಲ ಮಹಾ ಮೂರ್ಖರನ್ನು ಮಾಡಿಬಿಟ್ಟಿದ್ದೀರಿ. ಒಂದು ಭಾಷೆಯ ಬಗ್ಗೆ 150 ಜನ ಸಹಿ ಹಾಕಿಕೊಟ್ಟ ಕೂಡಲೇ ಆಡಳಿತ ಭಾಷೆ ಬದಲಾವಣೆಯಾಗುವುದಿಲ್ಲ. ಯಾವ ಮಾಧ್ಯಮ ಇರಬೇಕು ಎನ್ನತಕ್ಕದ್ದು ಚರ್ಚೆಯಾಗುತ್ತಿದೆ. ಎ.ಆರ್. ಕೃಷ್ಣಶಾಸ್ತ್ರಿಗಳವರ ಮಾತಿನಲ್ಲಿ ಹೇಳುವುದಾದರೆ ಅವರು ಒಂದು ಮಾತನ್ನು ಹೇಳುತ್ತಾರೆ, ಒಂದೇ ಮಾತನ್ನು ಹೇಳುತ್ತಾರೆ. ಆಡು ಭಾಷೆ, ತಾಯಿ ನುಡಿ, ಆಡಳಿತ ಭಾಷೆಯಾದರೆ "ನಂಟು ಉಳಿತು, ಗಂಟು ಉಳಿತು'' ಅಂತ ಹೇಳುತ್ತಾರೆ. ನಾವು ಯಾರೋ ಒಬ್ಬ ಹೊಸ ಅಳಿಯನನ್ನು ಹಿಡಿದುಕೊಂಡು ಬಂದು ಅವನಿಗೆ ವರಪೂಜೆ ಮಾಡಿ ಅವನು ಅಳಿಯನಾಗುತ್ತಾನೋ, ಗಿಳಿಯನಾಗುತ್ತಾನೋ ಗೊತ್ತಿಲ್ಲ. ಅದನ್ನು ಬಿಟ್ಟು ಅಕ್ಕನ್ನ ಮಗನನ್ನೋ, ಸೋದರ ಮಾವನ ಮಗನನ್ನೋ ಸ್ವಂತ ಅಳಿಯನನ್ನಾಗಿ ಮಾಡಿಕೊಂಡರೆ, ಹಳೆಯ ಸಂಬಂಧವೂ ಉಳಿಯುತ್ತದೆ ಮತ್ತು ಕೊಡಬೇಕಾದ್ದು ಉಳಿಯುತ್ತದೆ. ಆ ಕಾರಣ ನಮ್ಮ ತಾಯಿ ನುಡಿ ಆಡಳಿತ ಭಾಷೆಯಾದರೆ ಇಂತಹ ಒಂದು ಸಂಬಂಧ ಇರುತ್ತದೆ ಎನ್ನುವಂಥ ಮಾತನ್ನು ಹೇಳುತ್ತೇನೆ. ನಾನು ಕೂಡ ಕನ್ನಡ ಶಾಲೆಯಲ್ಲಿಯೇ ಓದಿದವನು ನಮಗೆ ಇಂಗ್ಲೀಷ್ ಬರುತ್ತದೆ, ಅದರಲ್ಲಿ ಪ್ರಭುತ್ವವಿದೆ, ಮತ್ತೊಂದಿದೆ ಎಂದರೆ, ಅದು ವ್ಯಕ್ತಿಯ ಗ್ರಹಿಕೆ ಮತ್ತು ಜ್ಞಾನದ ಗವಾಕ್ಷಿಯನ್ನು ತೆರೆಯಬೇಕೆನ್ನುವ ಸದೀಚ್ಛೆಯಿಂದ ಆಗುತ್ತದೆ. ತಾವು ಕೂಡ ಬ್ಯಾರಿಸ್ಟರ್ ಆಗಿದ್ದೀರಿ. ಆದರೆ, ನಾವು ಗ್ರಾಮಾಂತರ ಪ್ರದೇಶದಲ್ಲಿ ಕನ್ನಡದಲ್ಲಿ ಕಲಿತು ಬಂದಂಥ ಜನರು. ಇವೊತ್ತು 150 ಜನರೋ, 225 ಜನರೋ ಅಥವಾ ನನ್ನನ್ನು ಶ್ರೀ ವಾಟಾಳ್ ನಾಗರಾಜ್‌ರವರನ್ನು ಹೊರತುಪಡಿಸಿ ಮತ್ತು ಪ್ರೊ: ನಂಜುಂಡಸ್ವಾಮಿಯವರನ್ನು ಮತ್ತು 4–5 ಜನರನ್ನು ಬಿಟ್ಟು ನೀವು ಇರುವ 184 ಜನರು ಸಹಿ ಹಾಕಿಕೊಟ್ಟರೆ ಮಾಧ್ಯಮ ಕನ್ನಡದಲ್ಲಿ ಆಗುವುದಿಲ್ಲ. ಇದರ ಬಗ್ಗೆ ನಿರ್ಣಯ ಮಾಡತಕ್ಕಂಥವರು ಶಾಸಕರಲ್ಲ, ಈ ಶಾಸನ ಸಭೆಯೂ ಅಲ್ಲ. ನಿರ್ಣಯ ಮಾಡತಕ್ಕಂಥವರು ಕನ್ನಡ ನಾಡಿನ ಜನರು. ಇದೇ ರೀತಿ ಹಿಂದೆ ಈ ನಿರ್ಣಯವನ್ನು ಮಾಡಿದ್ದು ಇದೆ. ಆಗ ನಾವೇನು ಮಾಡಿದ್ದೇವೆ? ಆಡಳಿತ ಭಾಷೆ ಕನ್ನಡ ಎಂದು ಹೇಳಿದ್ದೇವೆ. ಆಡಳಿತ ಭಾಷೆ ಕನ್ನಡವೆಂದರೆ ಮಾಧ್ಯಮದ ಭಾಷೆಯೂ ಕನ್ನಡವಾಗಬೇಕು. ಉಳಿಕ ಭಾಷೆಗಳಲ್ಲಿ ಕಲಿಯತಕ್ಕಂಥಾದ್ದು ಬೇರೆ. ಬೋಧನೆಯ ಮಾರ್ಗ ಶಾಲೆಗಳಿಗೆ ಅನುದಾನ ಕೊಡತಕ್ಕಂಥಾದ್ದು ಬೇರೆ. ಬೋಧನೆಯ ಮಾರ್ಗ ಶಾಲೆಗಳಿಗೆ ಅನುದಾನ ಕೊಡತಕ್ಕಂಥಾದ್ದು. ಕುವೆಂಪುರವರು ಏನು ಹೇಳಿದ್ದಾರೆ ಮತ್ತೊಬ್ಬರು ಏನು ಹೇಳಿದ್ದಾರೆ, ಅಂತ ಶಾಮಣ್ಣನವರು ಏನೋ ಹೇಳಿ ಹೊರಗೆ ಹೋಗಿದ್ದರೆ ಆದರೆ ಅವರು ಬೇರೆ ಏನನನ್ನೂ ಹೇಳಿಲ್ಲ. ಕುವೆಂಪುರವರು ಹೇಳಿದ ಹಾಗೆ "ರಾಜ್ಯ ಭಾಷೆ ಎಂದೊಂದು, ರಾಷ್ಟ್ರಭಾಷೆ ಎಂದೊಂದು, ದೇವ ಭಾಷೆ ಎಂದೊಂದು ಹತ್ತಿ, ಜಗ್ಗಿ, ನಿಟಿ ನಿಟಿಲು ನಿಟಿಲೆಂದು ಮುದಿ ಮೂಳೆ ಮುರಿಯುತಿದೆ ಕೂಗಿಕೊಳ್ಳಲು ದನಿ ಇಲ್ಲವೆ ನಿಮಗೆ'' ಎನ್ನುವ ಮಾತನ್ನು ಹೇಳುತ್ತಾರೆ. 'ಕೂಗಿಕೊಳ್ಳಲು ನಿಮಗೆ ದನಿ ಇಲ್ಲವೆ' ಎನ್ನುವ ಮಾತನ್ನು ಅವರು ಹೇಳಿದರು. ಏತಕ್ಕೆ ಇಲ್ಲ? ಇಂಗ್ಲೀಷಿನ ವ್ಯಾಮೋಹದಿಂದಾಗಿ

ಕನ್ನಡ ಕೂಗುವ ಧ್ವನಿಯನ್ನು ಭದ್ರವಾಗಿ ಮುಚ್ಚಿಬಿಟ್ಟಿದ್ದಾರೆ. ಅದರಿಂದ ಭಾವನೆಗಳು ಹೊರಬರುವುದಕ್ಕೆ ಬರೀ ಅಭಿಮಾನ ಶೂನ್ಯತೆ ಮಾತ್ರವಲ್ಲ, ನಮ್ಮ ಅಪ್ರಬುದ್ಧತೆಯ ಪ್ರದರ್ಶನವೂ ಇವೊತ್ತು ಆಗುತ್ತಿದೆ. ಆದರೆ, ಈ ಭಾಷೆಯ ವಿಚಾರದಲ್ಲಿ ಚರ್ಚೆ ಮಾಡಬೇಕಾದ್ದಿಲ್ಲ. ಇದಕ್ಕಾಗಿ ನೀವು ಒಂದು ಸಮಿತಿಯನ್ನು ನೇಮಕ ಮಾಡಿದ್ದಿರಿ. ಆ ಸಮಿತಿ ಏನೆಂದು ವರದಿ ಕೊಟ್ಟಿತು? ಆ ವರದಿಗೆ ನೀವು ಸ್ಪಂದಿಸಿದ್ದೀರಾ? ಇವೊತ್ತಿನ ಒಟ್ಟು ಚರ್ಚೆ ಶೂನ್ಯದಲ್ಲಿ ನಡೆಯುತ್ತಿದೆ. ನೀವು ಆಜ್ಞೆ ಹೊರಡಿಸಿದ್ದೀರೋ? ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ ಎಂಬುದು ನಮಗೆ ಗೊತ್ತಿಲ್ಲ. ಶ್ರೀ ವಾಟಾಳ್ ನಾಗರಾಜ್‌ರವರು ಆಜ್ಞೆ ಹೊರಡಿಸಲಾಗಿದೆಯೆಂದು ಹೇಳಿದ್ದಾರೆ. ಅವರು ಅದರ ನಕಲನ್ನು ನಮಗೂ ಕೊಡುವುದಿಲ್ಲ, ಅವರಿಗೂ ಕೊಡುವುದಿಲ್ಲ. ಏನೋ ನಡೆದುಬಿಟ್ಟಿದೆಯೆಂದು ನಾವು ಒಂದೂವರೆ ಗಂಟೆಗಳ ಕಾಲ ಚರ್ಚೆಯನ್ನು ಮಾಡಿದ್ದೇ ಮಾಡಿದ್ದು. ಅದಕ್ಕಾಗಿ ವಾಟಾಳ್ ನಾಗರಾಜ್‌ರವರು ಈ ಸದನವನ್ನು ಮೂರ್ಖರನ್ನಾಗಿ ಮಾಡುವುದಕ್ಕೆ ಪ್ರಯತ್ನವೇನಾದರೂ ಮಾಡಿದ್ದರೆ, ಅದು ಬೇರ ಮಾತು. ಅದಕ್ಕಾಗಿ ನಾವು 'ಮೂರ್ಖರ ದಿನ'ದಲ್ಲಿ 'ಶೂನ್ಯ ಸಮಸ್ಯೆಯನ್ನು' ಚರ್ಚೆ ಮಾಡುತ್ತಿದ್ದೇವೆ. ಇದು ಶೂನ್ಯ ವೇಳೆ ಅಲ್ಲ. ಇದರ ಬಗ್ಗೆ ಆಜ್ಞೆ ಇದೆಯೆಂದರೆ ಚರ್ಚೆ ಮಾಡೋಣ. ಆ ಆಜ್ಞೆ ಇಲ್ಲವೆಂದರೆ ಚರ್ಚೆ ಅನಗತ್ಯವೆಂದು ನಾನು ಅಂದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದಂಥ ಸಿದ್ದಯ್ಯನವರು 'ಜ್ಞಾನಾರ್ಜನೆಗಾಗಿ ಇಂಗ್ಲೀಷ್ ಅನ್ನು ಕಲಿಯಬೇಕು' ಎಂದು ಹೇಳುತ್ತಿದ್ದರು. ಕಲಿಯಬೇಡವೆಂದು ಹೇಳಿದವರ್ಯಾರು ಸ್ವಾಮಿ? ಕನ್ನಡ ನಾಡಿನಲ್ಲಿರತಕ್ಕಂಥವರು ಹಿಂದಿಯನ್ನು ಕಲಿಯಲಿ, ಬೇಕಾದರೆ ಇಂಗ್ಲೀಷ್ ಅನ್ನು ಕಲಿಯಲಿ, ಫ್ರೆಂಚ್ ಭಾಷೆ ಕಲಿಯಲಿ ಯಾರು ಬೇಡವೆನ್ನುತ್ತಾರೆ? ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಪ್ಯಾರಿಸ್ ನಗರಕ್ಕೆ ಹೋದರೆ, ಒಂದು ಕಾಲದಲ್ಲಿ ಅಲ್ಲಿ ಹೆಚ್ಚು ಕಡಿಮೆ ಇಂಗ್ಲೀಷ್ ಕಾಲೋನಿ ಇತ್ತು. ಆದರೆ, ಇವೊತ್ತು ಅಲ್ಲಿ ಒಂದು ಶಬ್ದವನ್ನು ಇಂಗ್ಲೀಷಿನಲ್ಲಿ ಬಳಸುವುದಿಲ್ಲ. ಜಪಾನ್‌ಗೆ ಹೋದರೆ, ಅಲ್ಲಿ ಕೆಳಗೆ ಇಳಿದು ದಾರಿ ಯಾವುದೆಂದರೆ ಇಂಗ್ಲೀಷಿನಲ್ಲಿ ಕೇಳಿದರೆ, ಅವರು ಹೇಳುವುದಿಲ್ಲ. ನಾನು ಎಲ್ಲಾ ನಗರಗಳನ್ನು ನೋಡಿಕೊಂಡು ಬಂದಿದ್ದೇನೆ. ರಷ್ಯ ದೇಶದಲ್ಲಿ ಮನುಷ್ಯರನ್ನು ಚಂದ್ರಲೋಕಕ್ಕೆ ಕಳುಹಿಸಿದರು. ಅವರನ್ನು ಇಂಗ್ಲೀಷ್, ಫ್ರೆಂಚ್, ಲ್ಯಾಟಿನ್ ಮತ್ತಿತರ ಎಲ್ಲಾ ಭಾಷೆಗಳು ಸೇರಿ ಕಲಸುಮೇಲೋಗರವಾಗಿ ರೂಪಿತವಾದಂಥ ಒಂದು ಅಡ್ಡ ಭಾಷೆ. ಅವರು ನಮ್ಮನ್ನು ಆಳಿದರು ಎನ್ನುವ ಕಾರಣಕ್ಕಾಗಿ, ನಾವು ಈ ದಾಸ್ಯದ ಸಂಕೇತವನ್ನು ಸದ್ಯಕ್ಕೆ ಬಿಡಿಸಿಕೊಂಡಿದ್ದೇವೆಂದು, ಅದರ ಪ್ರದರ್ಶನವನ್ನು ಏತಕ್ಕೆ ಮಾಡುವುದಕ್ಕೆ ಹೋಗಬೇಕು? ಅದನ್ನು ಶಾಸನ ಸಭೆಯಲ್ಲಿ ಏತಕ್ಕೆ ಪ್ರದರ್ಶನ ಮಾಡಬೇಕು?

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ವಿರೋಧ ಪಕ್ಷದ ನಾಯಕರು ದಾಸ್ಯವೆಂದು ಹೇಳುತ್ತಿದ್ದಾರೆ. ರಾಷ್ಟ್ರದ ಕವಿ ಕುವೆಂಪುರವರು ನನಗೆ ಒಂದು ಮಾತನ್ನು ಹೇಳಿದ್ದು ನೆನಪಿಗೆ ಬಂತು. ಏನೆಂದರೆ "ಒಂದು ಇಂಗ್ಲೀಷ್ ಗೂಟ ಇತ್ತಂತೆ. ಅದಕ್ಕೆ ಒಂದು ನಾಯಿಯನ್ನು ಕಟ್ಟಿಹಾಕಿದ್ದರಂತೆ. ಆಗ ಆ ನಾಯಿ ಆ ಗೂಟದ ಸುತ್ತು ಸುತ್ತುತ್ತಿತ್ತು. ಆ ಗೂಟ ಹೋದ ಬಳಿಕವೂ ಸುತ್ತಾ ಇತ್ತಂತೆ''.

ಅಧ್ಯಕ್ಷರು : ಇದು ಇನ್ನೂ ಕೂಡ ಸುತ್ತುತ್ತಲೇ ಇರಬೇಕಲ್ಲವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರ, ಈ ಗೂಟದ ಸುತ್ತ ಯಾರು ಸುತ್ತುತ್ತಿದ್ದಾರೆಂದು ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಹೇಳಿದ್ದಕ್ಕೆ ಅವರನ್ನು ಅಭಿನಂದಿಸುತ್ತ ಈ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿಯನ್ನು ಕೊಡಬೇಕೆ ಅಥವಾ ಬೇಡವೇ ಎಂದು ಹೇಳುತಕ್ಕಂಥ ಪ್ರಶ್ನೆ ಈಗ ನಮ್ಮ ಮುಂದಿರತಕ್ಕದ್ದು ಇಂಗ್ಲೀಷನ್ನು ಕಲಿಯಲು ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಅದು ಕನ್ನಡನಾಡಿನಲ್ಲಿ ಕಲಿಕೆಯ ಭಾಷೆಯಾಗಬಾರದು, ಅದು ಮಾಧ್ಯಮದ ಭಾಷೆಯಾಗಬಾರದು. ಇಂಗ್ಲೀಷನ್ನು ಕಲಿಯುವವರಿಗೆ ಎಲ್ಲಾ ಪ್ರೋತ್ಸಾಹವನ್ನು ಕೊಡಿ, ಮಾನ್ಯ ಸಿದ್ದಯ್ಯನವರು ಇಂಗ್ಲೀಷ್ ಕಲಿಯಬೇಕಾಗಿದ್ದರೆ ಯಾರಾದರೂ ಇಂಗ್ಲೀಷ್ ಪ್ರೊಫೆಸರನ್ನು ನೇಮಕ ಮಾಡಿ ಮಾಡಿಕೊಳ್ಳಲಿ, ನಮ್ಮದು ಅಭ್ಯಂತರವಿಲ್ಲ. ಆದುದರಿಂದ ಜ್ಞಾನಾರ್ಜನೆಯ ಅರ್ಥ ಬೇರೆ. ಶ್ರೀಮಾನ್ ಕುವೆಂಪುರವರಿಗೆ ಇಂಗ್ಲೀಷ್ ಬರುವುದಿಲ್ಲವೆ? ಅವರು ಬರವಣಿಗೆಯನ್ನು ಪ್ರಾರಂಭ ಮಾಡಿದ್ದೇ ಇಂಗ್ಲೀಷ್‌ನಲ್ಲಿ. ಆಮೇಲೆ ಆಂಗ್ಲ ಕವಿಯೊಬ್ಬರು ಇಲ್ಲಾ, ನೀವು ನಿಮ್ಮ ಭಾಷೆಯಲ್ಲಿ, ಕನ್ನಡದಲ್ಲಿ ಬರೆಯಿರಿ ಎಂದು

ಹೇಳಿದ ಮೇಲೆ ಕನ್ನಡದಲ್ಲಿ ಪ್ರಭುತ್ವ ಅರಳಿದ್ದು ಆಮೇಲೆ ಈ ಇಂಗ್ಲೀಷ್‌ನವರು ಬಂದು ಶ್ರೀಮಾನ್ ಪುಟ್ಟಪ್ಪನವರಿಗೆ ಕನ್ನಡದಲ್ಲಿ ಬರೆಯಿರಿ ಎಂದು ಹೇಳಿದರು. ನಾವು ಈ ಪುಟ್ಟಪ್ಪನವರನ್ನು ಇಲ್ಲಿ ಪ್ರದರ್ಶನ ಮಾಡುವುದು ಬೇಡ, ಆ ಒಂದು ದೊಡ್ಡ ಅಪರಾಧದಿಂದ ಹೊರಗಿರಲು ನಾವು ಪ್ರಯತ್ನ ಮಾಡೋಣ. ಆದುದರಿಂದ ನಾನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳಲ್ಲಿ ಮೊದಲನೆಯ ಪ್ರಶ್ನೆಯನ್ನು ಕೇಳುತ್ತೇನೆ. ಆ ರೀತಿ ಆಜ್ಞೆಯನ್ನೇನಾದರೂ ಹೊರಡಿಸಿದ್ದೀರಾ? ಹಾಗೆ ಆಜ್ಞೆಯನ್ನು ಹೊರಡಿಸಿದ್ದರೆ, ಅದನ್ನು ನೀವು ಮಾಡಿದಂಥ ಸಮಿತಿಯು ಕೊಟ್ಟ ವರದಿಯ ವ್ಯಾಪ್ತಿಯಲ್ಲಿ ಇದೆಯೆ? ಅದು ಇದ್ದರೆ ಅದರ ಮೇಲೆ ನಾವು ಏನು ಚರ್ಚೆ ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಎಂ. ವೀರಪ್ಪಮೊಯ್ಲಿ : (ಶಿಕ್ಷಣ ಸಚಿವರು) ಅಧ್ಯಕ್ಷರೆ, ಇವತ್ತು ಈ ಸದನದ ಅಧಿವೇಶನದಲ್ಲಿ ಬಹಳ ತೀವ್ರವಾದಂಥ ಕೊರತೆ ಇತ್ತು. ಅದರ ವೇದನೆಯೂ ಕೂಡ ನನ್ನನ್ನು ಬಾದಿಸಿತ್ತು. ಅದೇನಂದರೆ ನನ್ನ ಇಲಾಖೆಯ ಬಗ್ಗೆ ಸಮರ್ಪಕವಾದಂಥ ಚರ್ಚೆಯಾಗಲಿಲ್ಲವೆಂದು ಆ ಕೊರತೆ ಇತ್ತು. ತಾವು ಇಲ್ಲಿ ಭಾಗವಹಿಸುವುದರಿಂದ, ಅದೂ ಕೂಡ ಭಾಷಾ ಮಾಧ್ಯಮದ ವಿಚಾರದಲ್ಲಿ ಭಾಗವಹಿಸಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಏಪ್ರಿಲ್‌ನಲ್ಲಿ ಫೂಲ್ ಮಾಡುವುದನ್ನು ಮಾರ್ಚ್‌ನಲ್ಲಿ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯ್ಲಿ : ತಾವು ಆ ಕೊರತೆಯನ್ನು ನೀಗಿಸಿಬಿಟ್ಟಿದ್ದೀರಿ. ತಮಗೆ ವಿಶೇಷವಾಗಿ ನನ್ನ ಇಲಾಖೆಯ ಪರವಾಗಿ ನನ್ನ ಕೃತಜ್ಞತೆಯನ್ನು ಬಹಳ ಸಂತೋಷದಿಂದ ಬಹುಶಃ ಬಹಳ ಪ್ರತಿಭಾನ್ವಿತವಾದಂಥ ಚರ್ಚೆ ಅದು ಭಾಷಾ ಮಾಧ್ಯಮದ ವಿಚಾರದಲ್ಲಿ ಇವತ್ತು ಬಂದಿದೆ. ಅಂದರೆ ಕನ್ನಡ ಮಾಧ್ಯಮದ ಶಾಲೆಯ ಪರವಾಗಿ ಮಾತನಾಡುವವರು ಅವರು ದುರಭಿಮಾನಿಗಳು ಎಂದು ಹೇಳತಕ್ಕಂಥದ್ದು ಅಥವಾ ಅಂಗ್ಲ ಮಾಧ್ಯಮದ ಶಾಲೆ ಬೇಕು ಅಥವಾ ಅಂಗ್ಲ ಭಾಷಾ ವಿಷಯದಲ್ಲಿ ಮಾತನಾಡುವವರನ್ನು ಕನ್ನಡದ ಅಭಿಮಾನ ಶೂನ್ಯರು ಎಂದು ಹೇಳತಕ್ಕಂಥದ್ದು ಇದು ಬಹುಶಃ ಕೊನೆಯ ಮಟ್ಟದಲ್ಲಿ ಒಂದು ಅಂತ್ಯ ಇಟ್ಟುಕೊಂಡು ಹೋಗತಕ್ಕಂಥ ವಾದವೇನಿದೆ ಅದಂತು ಸರಿಯಲ್ಲ. ಸನ್ಮಾನ್ಯ ಪಾಟೀಲ್ ನಾಗರಾಜ್‌ರವರು ಇದನ್ನು ಪ್ರಾರಂಭ ಮಾಡುವಾಗ ನನಗನ್ನಿಸುತ್ತದೆ ತಮ್ಮ ಉದ್ದೇಶವೆ ಅವರಿಗೂ ಇತ್ತು ಎಂದು. ಅವರಿಗೂ ಕೂಡ ಏಪ್ರಿಲ್ ಫೂಲ್ ಮಾಡತಕ್ಕದ್ದು ಉದ್ದೇಶ ಇತ್ತು. ಆದರೆ ಅದು ಏನಾಯಿತೆಂದರೆ ಇಲ್ಲಿ ಗಂಭೀರವಾದ ಚರ್ಚೆಯಾಗಿ ಪರಿವರ್ತನೆಯಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ಆದುದರಿಂದ ಅವರ ಫೂಲ್ ಆದರು.

ಶ್ರೀ ಎಂ. ವೀರಪ್ಪಮೊಯ್ಲಿ : ಕೊನೆಗೆ ಅದರ ಪರಿಣಾಮ ಅದೇ ಆಗುತ್ತದೆ. ಅದರ ಒಟ್ಟು ಮೊತ್ತವೇನಾಗುತ್ತದೆಂದರೆ, ತಾವು ಇದನ್ನು ಪ್ರಾರಂಭ ಯಾರು ಮಾಡಿದ್ದೀರಿ ಅದನ್ನು ಸದಸ್ಯರುಗಳು ಗಂಭೀರವಾಗಿ ತೆಗೆದುಕೊಂಡುಬಿಟ್ಟರು. ಅವರು ಚರ್ಚೆ ಪ್ರಾರಂಭ ಮಾಡುವಾಗ ನನಗೂ ಕೂಡ ಏನೋ ಒಂದು ಆದೇಶವಿದೆಯೋ ಎಂದು ಅನ್ನಿಸಿ, ಅನಂತರ ಅಧಿಕಾರಿಗಳನ್ನು ಕರೆದು ಕೇಳಿದೆ ಪ್ರಾರಂಭದಲ್ಲಿ ನಾನು ಕೂಡ ಸ್ವಲ್ಪ ಏಪ್ರಿಲ್‌ಫೂಲ್ ಆದೆ, ಅನಂತರ ಅದೆ. ಇದು ಒಂದು ಚರ್ಚೆ ಬಹಳ ಗಂಭೀರ ರೂಪದಲ್ಲಿ ಆಗಿದೆ. ಆದರೆ ಒಂದು ಮಾತ್ರ ಸ್ಪಷ್ಟ. ಈ ಅಂಗ್ಲ ಮಾಧ್ಯಮ ಶಾಲೆಯ ಬಗ್ಗೆ ನಾವು ಇದುವರೆಗೂ ಕೂಡ ಯಾವ ನೀತಿಯನ್ನು ತಗೆದುಕೊಂಡಿಲ್ಲ. ಆ ಬಗ್ಗೆ ಪರಿಣಿತರ, ತಜ್ಞರ ಸಮಿತಿ ವರದಿಯನ್ನು ಕೊಟ್ಟಿದೆ. ಆ ವರದಿಗೆ ನಾವು ನಮ್ಮ ಇಲಾಖೆಯವರು ಒಂದು ಸ್ವರೂಪವನ್ನು ಕೊಟ್ಟು ಅದನ್ನು ಕ್ಯಾಬಿನೇಟ್‌ಗೆ ಸಲ್ಲಿಸಿದ್ದೇವೆ.

ಸಂಪುಟದಲ್ಲಿ ಇದು ನಿರ್ಣಯಕ್ಕೆ ಬಾಕಿಯಾಗಿ ಉಳಿತಿದೆ. ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ಈ ನಿರ್ಣಯ ಒಂದು ವರ್ಷದ ಹಿಂದೆನೇ ಆಗುತ್ತಿತ್ತು. ಯಾವ ಸ್ವರೂಪವಿರಬೇಕು ಅಂತ ಹೇಳಿ ನಾವು ಪರಿಣಿತರ ವರದಿಯನ್ನು ಪರಿಶೀಲನೆ ಮಾಡಿದ್ದೇವೆ. ಅದರ ಮೇಲೆ ಈ ಭಾಷಾ ಮಾಧ್ಯಮದ ಒಂದು ವಿಚಾರದಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಸನ್ಮಾನ್ಯ ರಾಮಾಜೋಯಿಸ್‌ರವರು ಕೊಟ್ಟಂತಹ ತೀರ್ಪು, ಇದನ್ನೆಲ್ಲಾ ಪರಿಗಣನೆಗೆ ತಂದು ಒಂದು ನೀತಿ

ಸ್ವರೂಪ ಸರ್ಕಾರದ್ದು ಬೇಕು ಎಂದು ಹೇಳಿ ಎಲ್ಲಾ ಆಂಗ್ಲ ಮಾಧ್ಯಮ ಶಾಲೆಗಳು ಏನು ಅನಧಿಕೃತವಾಗಿ ನಡೆಯುತ್ತಿವೆ, ಆ ಶಾಲೆಗಳಿಗೆ ನಾವು ಮಾನ್ಯತೆ ಕೊಟ್ಟಿಲ್ಲ. ಅದು ಹಾಗೆಯೇ ಇದೆ. ಇವತ್ತು ಮಾನ್ಯತೆಯನ್ನು ಯಾವ ಸ್ವರೂಪದಲ್ಲಿ ಕೊಡಬೇಕು? ಹೇಗೆ ಕೊಡಬೇಕು? ಅಥವಾ ಬೇಡವೇ ಎನ್ನುವುದು ಇದು ಇವತ್ತಿಗೂ ಕೂಡ ನೆನಗುದಿಯಲ್ಲಿ ಬಿದ್ದಿದೆ ಸನ್ಮಾನ್ಯ ಅಧ್ಯಕ್ಷರೇ, ಇದು ಚರ್ಚೆ ಆಗುತ್ತಿರುವಾಗ ನನಗನಿಸುತ್ತದೆ ಚರ್ಚೆ ಆಗದೇ ಇದ್ದರೆ ಬಹುಶಃ ನಿರ್ಣಯ ಯಾವಾಗಲೋ ಆಗುತ್ತಿತ್ತು. ಈಗ 125 ಮಂದಿ ಶಾಸಕರು ಆಂಗ್ಲ ಮಾಧ್ಯಮದ ಪರವಾಗಿಯೋ ಅಥವಾ ಆಂಗ್ಲ ಮಾಧ್ಯಮದ ವಿರೋಧವಾಗಿಯೋ ಅರ್ಜಿ ಕೊಟ್ಟ ಕೂಡಲೇ ಏನಾಗುತ್ತಿದೆಯೆಂದರೆ ಅದು ಅಕ್ಷರಮಟ್ಟಿಗೆ ನಿರ್ಣಯ ತಡವಾಗಿ ಹೋಗುತ್ತದೆ. ಮೊದಲು ಹಾಗೆ ಆಗಿದೆ. ಇದು ಒಂದು ಮರೀಚಿಕೆಯಾಗುತ್ತದೆ, ಚರ್ಚೆಯಾಗುತ್ತದೆ, ವಾಗ್ವಾದವಾಗುತ್ತದೆ, ವಿವಾದವಾಗುತ್ತದೆ, ವಿವಾದದ ಸುಳಿಯಲ್ಲಿ ಈ ನಿರ್ಣಯ ಏನಾಗುತ್ತದಂದರೆ ಬಹಳ ಅಲುಗಾಡುತ್ತಿದೆ. ಒಂದು ಸ್ಥಿರತೆಯಿಂದ ನಿರ್ಣಯ ಕೊಡುವುದಕ್ಕೆ ನಮಗೆ ಸ್ವಲ್ಪ ಕಷ್ಟವಾಗುತ್ತದೆ. ಬಹುಶಃ ತಮ್ಮ ಅರ್ಜಿ ಕೊಟ್ಟಿರತಕ್ಕಂಥದ್ದು ಆಂಗ್ಲ ಮಾಧ್ಯಮದ ಪರವಾಗಿಯೋ ವಿರೋಧವಾಗಿಯೋ ನನಗಂತೂ ಇರುತ್ತದೆ. ಅಧ್ಯಕ್ಷರೆ, ನಮ್ಮ ವಾದ ವಿವಾದದಿಂದ ನಾವು ಹೊರಗೆ ಇರಬೇಕು. ಏಕೆಂದರೆ ಭಾಷಾ ಮಾಧ್ಯಮದ ವಿಚಾರ, ಅಭಿಪ್ರಾಯ ನಾವು ಗ್ರಹಿಸಬೇಕಾಗುತ್ತದೆ ಆದರೆ ಇದು ಭಾಷಾ ಮಾಧ್ಯಮ ಏನು ಇರಬೇಕು ಎಂಬುದಕ್ಕೆ ಬಹುಶಃ ಅದು ಒಂದು ವಾದ ವಿವಾದವೆಂದು ನನಗಂತೂ ಅನ್ನಿಸುವುದಿಲ್ಲ. ಏಕೆಂದರೆ ಅದು ರಾಷ್ಟ್ರದಲ್ಲಿ ಇರಬಹುದು, ಅಥವಾ ವಿಶ್ವದ ಯಾವುದೇ ರಾಷ್ಟ್ರದಲ್ಲಿ ಇರಬಹುದು, ಆಡಳಿತ ಭಾಷೆ ಮಾತೃಭಾಷೆಯಾಗಿ ಇರಬೇಕಾಗುತ್ತದೆ. ಭಾಷಾ ಮಾಧ್ಯಮ ಸನ್ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಹೇಳಿದ ಪ್ರಕಾರ ಮಾತೃಭಾಷೆ ಮತ್ತು ಅದು ಅದಕ್ಕಿಂತಲೂ ಹೆಚ್ಚಿಗೆ ಸ್ವಲ್ಪ ಮುಂದೆ ಹೋಗಿ ಹೇಳುವುದಾದರೆ ಮಗುವಿನ ಭಾಷೆಯಲ್ಲಿ ಇರಬೇಕಾಗುತ್ತದೆ. ಇದು ಬಹುಶಃ ಸಾರ್ವತ್ರಿಕವಾಗಿ ಶಿಕ್ಷಣ ತಜ್ಞರು ಕೂಡ ಅದಕ್ಕೆ ಕರ್ನಾಟಕ ರಾಜ್ಯದ ಶಿಕ್ಷಣ ಅಲ್ಲ, ರಾಷ್ಟ್ರದ ಎಲ್ಲಾ ಭಾಷೆಯ ಶಿಕ್ಷಣ ಭಾಷಾ ತಜ್ಞರು, ಆಂಗ್ಲ ಮಾಧ್ಯಮದಲ್ಲಿರತಕ್ಕಂತಹ ಪರಿಣಿತರಾದಂತಹ ಶಿಕ್ಷಣ ತಜ್ಞರ ಒಂದು ಸಂಶೋಧನೆ ಅಥವಾ ಪರಿಣಿತರ ಭಾಷಾ ಶಾಸ್ತ್ರ ಗ್ರಂಥಗಳು, ಎಲ್ಲಾ ಗ್ರಂಥಗಳು ಕೂಡ ಇದನ್ನೇ ಹೇಳುತ್ತವೆ. ಬೇಕಾದರೆ ಆಂಗ್ಲ ಭಾಷೆ ಭಾಷಿಕರು, ಶಿಕ್ಷಣ ತಜ್ಞರು ಕೂಡ ಹೇಳುವುದು ಇದನ್ನೇ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕೆಂದು ಹೇಳುತ್ತಾರೆ. ಭಾಷಾ ಮಾಧ್ಯಮ ಇರಬೇಕು, ಇದಕ್ಕೆ ಬಹುಶಃ ಚರ್ಚೆ ಮಾಡಿ ನಾವು ಅದಕ್ಕೆ ಹೊಸದಾಗಿ ವ್ಯಾಖ್ಯಾನ ಕೊಡತಕ್ಕಂತಹ ಪ್ರಶ್ನೆ ಇಲ್ಲ. ಇದು ಸರ್ವತಾ ಒಪ್ಪಿದಂತಹ ವಿಚಾರ. ಇಡೀ ವಿಶ್ವದ ಎಲ್ಲಾ ಭಾಷಾ ತಜ್ಞರು ಅದನ್ನು ಬೇಕಾದರೆ ಬೆಂಗಳೂರಿನ ಭಾಷಾ ತಜ್ಞರು, ಬೇರೆ ಭಾಷಾ ತಜ್ಞರು ವಿಶ್ವದ ಒಂದು ಸಮ್ಮೇಳನ ಮಾಡಿ, ಸಮಾವೇಶ ಮಾಡಿ ಚರ್ಚೆ ಮಾಡಿದರೂ ಕೂಡ ಅದು ಕೊನೆಗೆ ಬರತಕ್ಕಂತಹ ನಿರ್ಣಯ ಏನು ಇರುತ್ತದೆ ಇದೇ ಆಗಿದೆ. ಅವರವರ ಮಾತೃಭಾಷೆಯಲ್ಲಿ ಶಿಕ್ಷಣ ಮಾಧ್ಯಮವಾಗಿರಬೇಕು. ಆಡಳಿತಭಾಷೆಯಾಗಿರಬೇಕು ಎಂಬುದನ್ನು ಬಹುಶಃ ಯಾರೂ ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವಾಗ ಭಾಷಾ ಶಾಸ್ತ್ರಜ್ಞರು ಏನು ಹೇಳುತ್ತಾರೆ, ಭಾಷಾ ಶಾಸ್ತ್ರದ ಬುನಾದಿಯ ಮೇಲೆ ಯಾವುದೇ ಇಂತಹ ಶಿಕ್ಷಣ ವ್ಯವಸ್ಥೆ ನಿಲ್ಲುತ್ತದೆ. ಆ ಶಿಕ್ಷಣದ ವ್ಯವಸ್ಥೆಯ ಮೇಲೆ ಸಾಮಾಜಿಕ, ಆರ್ಥಿಕವಾದಂತಹ, ರಾಜಕೀಯವಾದಂತಹ, ಸಂಪೂರ್ಣವಾದಂತಹ ಪ್ರಗತಿ ಅಥವಾ ಸಂಪೂರ್ಣವಾದಂತಹ ಒಂದು ಅಭಿವೃದ್ಧಿ ನಿಲ್ಲುತ್ತದೆ. ಅದಕ್ಕಿಂತ ಹೊರತಾಗಿರುವುದಕ್ಕೆ ಸಾಧ್ಯವಾಗುವುದಿಲ್ಲ. ಭಾಷೆಯ ಅಭಿವೃದ್ಧಿಯಿಂದ ಭಾಷಾ ಶಾಸ್ತ್ರದಿಂದ ಶಿಕ್ಷಣ ವ್ಯವಸ್ಥೆಯಿಂದ ಇಡೀ ಒಂದು ರಾಷ್ಟ್ರದ ಅಥವಾ ವಿಶ್ವದ ಒಂದು ಸಾಮಾಜಿಕ ಆರ್ಥಿಕ, ರಾಜಕೀಯ ಬೆಳವಣಿಗೆ ಅದು ಪರಸ್ಪರ ಹೊಂದಿಕೊಂಡಿರುತ್ತದೆ, ಎಂದು ಹೇಳಿದರೆ ಅದು ಬಹುಶಃ ಅತಿಶಯೋಕ್ತಿ ಆಗಲಿಕ್ಕಿಲ್ಲ ಅದು ಬಹುಶಃ ಎಲ್ಲರೂ ಒಪ್ಪತಕ್ಕಂಥ ಮಾತು. ಏಕೆ ಈ ಮಾತನ್ನು ಹೇಳಿದೆ ಎಂದರೆ, ಯಾವುದೇ ಒಬ್ಬ ವ್ಯಕ್ತಿ, ಇವತ್ತು ಅವನ ಬೆಳವಣಿಗೆ ನಾವು ಕೆಲವು ಸಾರಿ ಸಂಸ್ಕಾರ ಎಂದು ಹೇಳುತ್ತೇವೆ. ಬೇರೆ ಬೇರೆ ಭಾಷೆಯನ್ನು ಉಪಯೋಗ ಮಾಡುತ್ತೇವೆ. ಈ ಸಂಸ್ಕಾರ ಎಂದು ಅನೇಕ ಅದು ಬರೀ ಆಯಾಯ ವ್ಯಕ್ತಿಯ ವಯಸ್ಸಿನ ಒಂದು

ಪ್ರಮಾಣದ ಸಂಸ್ಕಾರ ಆಗುವುದಿಲ್ಲ ಅದು. ಆ ಸಂಸ್ಕಾರಕ್ಕೆ ಶತಶತಮಾನಗಳ ಆಯಾಯ ರಾಷ್ಟ್ರದ ಆಯಾಯ ನೆಲದ ಗುಣದ ಒಂದು ಕೊಂಕಿ ಇರುತ್ತದೆ ನನ್ನ ಮಗನ ಆಯಸ್ಸು 15 ವರ್ಷ ಆದರೆ ನನ್ನ ದೃಷ್ಟಿಯಲ್ಲಿ 15 ವರ್ಷ ಇಲ್ಲ. ಭರತ ಖಂಡಕ್ಕೆ 5 ಸಾವಿರ ವರ್ಷದ ಒಂದು ಭವಿಷ್ಯ ಇದೆ. ಒಂದು ಉಜ್ವಲವಾದಂತಹ ಪರಂಪರೆ ಇದೆ. ಆ ಪರಂಪರೆಯ ಕೊಂಡಿ ಆ ವ್ಯಕ್ತಿಯ ಜೊತೆಯಲ್ಲಿ ಅವನ ಧಮನಿಗಳಲ್ಲಿ ಹರಿದು ಬಂದಿರುತ್ತದೆ. ಅವನಿಗೆ 15 ವರ್ಷ ವಯಸ್ಸಲ್ಲ ಅವನಿಗೆ 5 ಸಾವಿರದ 15 ವರ್ಷ ವಯಸ್ಸು ಎಂದು ಹೇಳಬೇಕಾಗುತ್ತದೆ. ಆಂಗ್ಲ ಭಾಷೆಯ ಮಾಧ್ಯಮದಲ್ಲಿ ಶ್ರಮಿಸಿ, ಆಂಗ್ಲ ಮಾಧ್ಯಮದಲ್ಲಿ ಕಲಿತಂಥ ವಿದ್ಯಾರ್ಥಿಗೆ ಅವನಿಗೆ ಬರೀ 15 ವರ್ಷ ಆಗುತ್ತದೆ. 5 ಸಾವಿರ ವರ್ಷದ ಕೊಂಡಿ ಅದು ಕಳಚಿಹೋಗುತ್ತದೆ. ಆ ಟಚ್ ಇರಬೇಕಾಗುತ್ತದೆ, ಏಕೆಂದರೆ ತಾವು ಬೇಕಾದರೆ ಆಲೋಚನೆ ಮಾಡಿ ಭಾಷಾ ಶಾಸ್ತ್ರಜ್ಞರನ್ನು ಕೇಳಿ ಅಥವಾ ಹಿನ್ನೆಲೆಯಲ್ಲಿ ನೋಡಿ. ಇದೆಲ್ಲಾ ಇರುತ್ತದೆ. Person has got that kind of linkage with the past ಅದು ಸಂಸ್ಕಾರ past may be good or bad......

ಆ ಪರಂಪರೆ ಒಳ್ಳೆಯದು ಇರಬಹುದು ಅದು ಕೆಟ್ಟ ಪರಂಪರೆ ಇರಬಹುದು, ಆಯಾ ನಾಗರೀಕತೆಯನ್ನು ಹೊಂದಿಕೊಂಡಿರಬಹುದು ಅಥವಾ ಅದಕ್ಕೆ ಬದಲಾಗಿ ಇರಬಹುದು. ಏಕೆಂದರೆ, ಇವತ್ತು ಇಡೀ ವಿಶ್ವದ ಸುಮಾರು 24 ನಾಗರೀಕತೆಗಳಲ್ಲಿ ಸುಮಾರು 19 ನಾಗರೀಕತೆಗಳು ಅರನಾಲ್ಡ್ ಟಾಯ್ನ್‌ಬಾಯ್ ಹೇಳತಕ್ಕಂಥ ಮಾತು. ಇದು ನನ್ನ ಸ್ವಂತ ಅಲ್ಲ. 24 ಪ್ರಮುಖವಾದಂತಹ ನಾಗರೀಕತೆಗಳಲ್ಲಿ 19 ವಿಶ್ವದ ನಾಗರೀಕತೆಗಳು ನಾಶವಾದಂಥದ್ದು ಯಾವುದೇ ಒಂದು ವೈರಿಗಳು ಆಕ್ರಮಣದಿಂದ ಅಲ್ಲ, not by the enemies aggression. It is only because of crisis of character of respective civilization. ಇದರಿಂದಾಗಿ ಈ ಭಾಷಾ ಶಿಕ್ಷಣದ ವ್ಯವಸ್ಥೆ ಇರಬಹುದು that builds the character of a nation. ಇದನ್ನು ನಾವು ಮರೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ನಾವು casual approach ಮಾಡಲಿಕ್ಕೆ ಆಗುವುದಿಲ್ಲ ಇದಕ್ಕೆ ನಾವು ಬಹಳ ಕ್ಷಣಿಕವಾದಂಥ ಲೇಪ ಕೊಡುವುದಕ್ಕೆ ಆಗುವುದಿಲ್ಲ. ಅಥಾವಾ ನಾವು ತಾತ್ಕಾಲಿಕವಾದಂಥ ಒಂದು ನಿರ್ಣಯದಿಂದ ಇದನ್ನು ನಾವು ಹಸ್ತಕ್ಷೇಪ ಮಾಡಿ ಬದಲಾವಣೆ ಮಾಡತಕ್ಕಂತ ಮಡಲ್ ಮಾಡತಕ್ಕಂಥ ಪರಿಸ್ಥಿತಿ ಕೂಡ ಬರುವುದದಿಲ್ಲ. ಆದ್ದರಿಂದ ಯಾವುದೇ ಸರ್ಕಾರ ಯಾವುದೇ ಒಂದು ಸಂದರ್ಭದಲ್ಲಿ ಅಥವಾ ಯಾವುದೇ ಒಂದು ಶಾಸನಸಭೆ ಇರಲಿ ನಾವು ಭಾಷಾ ಶಾಸ್ತ್ರದ ವಿಷಯದಲ್ಲಿ ಭಾಷಾ ಮಾಧ್ಯಮ ವಿಷಯದಲ್ಲಿ, ಅದು ಆಡಳಿತ ಭಾಷಾ ಮಾಧ್ಯಮ ಇರಬಹುದು, ಅಥವಾ ಶೈಕ್ಷಣಿಕ ಮಾಧ್ಯಮ ವಿಷಯ ಇರಬಹುದು, ಇದು ಆಯಾಯ ರಾಜ್ಯದ ಮತ್ತು ಆಯಾಯ ರಾಷ್ಟ್ರದ ಒಂದು ಜೀವನದ ಪ್ರಕ್ರಿಯೆಯನ್ನು ಬದಲಾವಣೆ ಮಾಡಬಹುದು ಅಥವಾ ಸ್ವರೂಪ ಪ್ರಕ್ರಿಯೆ, ಸ್ವರೂಪ ಕೊಡತಕ್ಕಂಥ ಶಕ್ತಿ ಈ ಭಾಷಾ ವಿಷಯದಲ್ಲಿ ಇರುತ್ತದ. ನಾನು ಒಂದು ಪ್ರಯೋಗ ಮಾಡುವುದಕ್ಕೆ ಆಗುವುದಿಲ್ಲ. ಹಿಂದಿನ ಇತಿಹಾಸ ನೋಡಿಕೊಂಡು, ನಮ್ಮ ಬೆಳವಣಿಗೆಯನ್ನು ಇಟ್ಟುಕೊಂಡು ನಾವು ಇದನ್ನು ಮಾಡಬೇಕಾಗುತ್ತದೆ. ನಮ್ಮ ಮಾನ್ಯ ಸದಸ್ಯರು ಇವತ್ತು ಹೇಳಿದರು, ನಾನು ಸ್ಪಷ್ಟವಾಗಿ ಒಂದು ನೀತಿ ಹೇಳುತ್ತೇನೆ. ಇಲ್ಲಿಯವರೆಗೂ ಈ ಬಗ್ಗೆ ಯಾವುದೇ ನೀತಿಯ ಸ್ವರೂಪ ನಿರ್ಣಯ ಸರ್ಕಾರ ಮಾಡಿಲ್ಲ. ಆದ್ದರಿಂದ ಅನುಮತಿ ಕೊಡತಕ್ಕಂಥ ಪ್ರಶ್ನೆ ಉದ್ಭವ ಆಗುವುದಿಲ್ಲ. ನಾವೂ ಅನುಮತಿ ಕೊಟ್ಟಿಲ್ಲ. ಇದರ ಬಗ್ಗೆ ನಾವು ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳಿ ಸಂಪುಟದಲ್ಲಿ ನಾವು ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ಅದರ ಬಗ್ಗೆ ಎನು ಪರಿಣಿತರ ಸಮಿತಿ ಇದೆ ಅದರ ಶಿಫಾರಸ್ಸಿನ ಅನ್ವಯ ಕರ್ನಾಟಕದ ಉಚ್ಚ ನ್ಯಾಯಲಯ ಕೊಟ್ಟಂಥ ನಿರ್ಣಯ ಮತ್ತು ಸಂವಿಧಾನದ ಪ್ರಕಾರ ಸಂವಿಧಾನದ ಒಂದು ಹಿನ್ನಲೆಯಲ್ಲಿ ಎನು ನಿರ್ಣಯ ತೆಗೆದುಕೊಳ್ಳಿ ಬೇಕಾದರೂ ಕೂಡ ನಾವು ಸಂವಿಧಾನದ ಹಿನ್ನಲೆಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಭಾರತದ ಶ್ರೇಷ್ಠ ನ್ಯಾಯಲಯ ಕೂಡ ಈ ಬಗ್ಗೆ ಆದೇ ನಿರ್ಣಯಗಳನ್ನು ಕೊಟ್ಟಿದೆ. ಈ ಹಿನ್ನಲೆಯಲ್ಲಿ ನಾವು ಇದರ ಬಗ್ಗೆ ಆದಷ್ಟು ಜಾಗ್ರತೆಯಾಗಿ ನೀತಿ ಸ್ವರೂಪದನಿರ್ಣಯ ತೆಗೆದುಕೊಳ್ಳುತ್ತೇವೆ. ಅದನ್ನು ತೆಗೆದುಕೊಳ್ಳುವಾಗ ಬಹಳ ಎಚ್ಚರಿಕೆಯಿಂದ, ಪರಂಪರೆಯ ಒಂದು ದೃಷ್ಟಿಯನ್ನು ಇಟ್ಟುಕೊಂಡು

ಭಾಷಾ ಶಾಸ್ತ್ರಜ್ಞರ ಸಂಪೂರ್ಣವಾದಂತಹ ಒಂದು ಅನುಭವದ ಹಿನ್ನೆಲೆಯಲ್ಲಿ ಅಂತಹ ಒಂದು ನಿರ್ಣಯವನ್ನು ಖಂಡಿತವಾಗಿ ನಾವು ತೆಗೆದುಕೊಳ್ಳುತ್ತೇವೆ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆದರೆ ವಿವರಣೆಯನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಶಿಫಾರಸಿನ ವಿವರ ಈಗಾಗಲೇ ಪತ್ರಿಕೆಗಳಲ್ಲಿ ಬಂದಿದೆ. ಪುನಃ ಅದನ್ನು ಚರ್ಚಾ ವಸ್ತುವನ್ನಾಗಿ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಸದಸ್ಯರಾದ ಸಾದದ ಅಲಿಖಾನ್‌ರವರು ಐ.ಎ.ಎಸ್. ಪರೀಕ್ಷೆಗೆ ಸಂಬಂಧಪಟ್ಟಂತೆ ಹೇಳಿದರು. ಈಗ ಇಂಗ್ಲಿಷ್ ಮಾಧ್ಯಮದವರು ಒಬ್ಬರೂ ಕೂಡ ಐ.ಎ.ಎಸ್.ನ್ನು ಪಾಸ್ ಮಾಡಿಲ್ಲ. ಕನ್ನಡದಲ್ಲಿ ಶಿವರಾಮ್ ಎನ್ನುವವರು ಐ.ಎ.ಎಸ್. ನ್ನು ಪಾಸ್ ಮಾಡಿದ್ದಾರೆ. ಈಗ ಅವರು ಬೆಂಗಳೂರು ಮಹಾನಗರಪಾಲಿಕೆ.ಯಲ್ಲಿ ಉಪ ಆಯುಕ್ತರಾಗಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಅವರು ಅತ್ಯುತ್ತಮವಾಗಿ ಬರೆದು ರ್‍ಯಾಂಕ್ ಪಡೆದು ಪಾಸ್ ಆಗಿದ್ದಾರೆ. ತಾವೇ ಲೆಕ್ಕ ಹಾಕಿ ನೋಡಿ. ಇವತ್ತು ಐ.ಎಂ.ಎಸ್ ಪರೀಕ್ಷೆಗ ಇಂಗ್ಲೀಷ್ ಮಾಧ್ಯಮದವರೇ ಅನೇಕ ಜನ ಹೋಗಿದ್ದಾರೆ. ಆದರೆ ಅವರು ಪಾಸ್ ಆಗಿಲ್ಲ. ಇಲ್ಲಿ ಕನ್ನಡ ಮಾಧ್ಯಮದವರು ಮಾತ್ರವಲ್ಲ, ಇಂಗ್ಲೀಷ್ ಮಾಧ್ಯಮದವರೂ ಕೂಡ ಪಾಸ್ ಆಗಿಲ್ಲ. ಇದಕ್ಕೆ ಅದು ಕಾರಣವಲ್ಲ. ಇದರ ಬಗ್ಗೆ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲೂ ಮಾನವ ಸಂಪನ್ಮೂಲದ 10 ವರ್ಷದ ಪರಸ್ಪೆಕ್ಟೀವ್ ಪ್ಲಾನನ್ನು ಪ್ರತಿಯೊಂದು ವಿಶ್ವವಿದ್ಯಾಲಯಗಳ ಪರಿಧಿಯಲ್ಲಿ ರಾಜ್ಯ ಮಟ್ಟದಲ್ಲಿ ಮಾಡುತ್ತಿದ್ದೇವೆ. ಪ್ರತಿಯೊಂದು ವಿಶ್ವವಿದ್ಯಾಲಯವೂ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದೆ. ಕೇವಲ ಇವರಿಗೆ ಕೋಚಿಂಗ್ ಕೊಟ್ಟರೆ ಸಾಕಾಗುವುದಿಲ್ಲ. ರಾಷ್ಟ್ರಮಟ್ಟದ ಬೇರೆ ಬೇರ ಪರೀಕ್ಷೆಗಳಿಗೆ, ಬೇರೆ ಬೇರೆ ಸಂಸ್ಥೆಗಳಿಗೆ ಲೋಕಸೇವಾ ಆಯೋಗದವರು ನಡೆಸತಕ್ಕ, ಐ.ಎ.ಎಸ್. ಐ.ಪಿ.ಎಸ್. ಮುಂತಾದುವುಗಳಿಗೆ ನಮ್ಮ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ಕೇವಲ 2–3 ತಿಂಗಳ ಕಾಲ ತರಬೇತಿಯನ್ನು ಕೊಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಐ.ಎ.ಎಸ್. ಐ.ಪಿ.ಎಸ್.ನ ಸಿಲಬಸ್‌ಗೆ ಸಂಬಂಧಪಟ್ಟಂತೆ ಪದವಿ ಪೂರ್ವ ಕಾಲೇಜಿನಿಂದ ಹಿಡಿದು ವಿಶ್ವವಿದ್ಯಾಲಯದವರೆಗ ಅಥವಾ ಅಂಡರ್ ಗ್ರ್ಯಾಜ್ಯುಯೇಟ್ ಲೆವೆಲ್‌ನಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಆ ಮಟ್ಟದಲ್ಲಿ ಸ್ಪರ್ಧಿಸುವುದಕ್ಕೆ ತರಬೇತು ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಾಧ್ಯವಿಲ್ಲ. ಕೇವಲ ಆಂಗ್ಲ ಮಾಧ್ಯಮ ಶಾಲೆಗಳನ್ನು ಹೆಚ್ಚು ಮಾಡಿದರೆ ಅದು ಇದಕ್ಕೆ ಉತ್ತರ ಆಗುತ್ತದೆಂಬು ಹೇಳುವುದು ಖಂಡಿತ ಅಲ್ಲ ಎಂದು ಹೇಳಬಯಸುತ್ತೇನೆ. ನಾನು ಇದರ ಬಗ್ಗ ಬಹಳವಾಗಿ ಯೋಚನೆ ಮಾಡುತ್ತಿದ್ದೇನೆ. ಈ ವಿಚಾರವನ್ನು ತಮಗೆ ನಾನು ಬಿಡುತ್ತೇನೆ. ಸಂವಿಧಾನಬದ್ಧವಾಗಿ ಇದು ಎಲ್ಲಿಯವರೆಗೆ ಸಾಧ್ಯವಾಗುತ್ತದೆಂಬುದು ತಮಗೆ ಬಿಟ್ಟಿದ್ದು. ತಾಂತ್ರಿಕ ಕ್ಷೇತ್ರ ಅಥವಾ ವೈಜ್ಞಾನಿಕ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕನ್ನಡ ಭಾಷೆಯಲ್ಲಿ ಸಂಪನ್ನತೆ, ಸಮೃದ್ಧತೆ ಇಲ್ಲವೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಆ ಕೊರತೆ ಕನ್ನಡ ಭಾಷೆಯಲ್ಲಿ ಇಲ್ಲ ಎನ್ನುವಂಥ ರೀತಿಯಲ್ಲಿ ಇದಕ್ಕೆ ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ಈ ಬೆಳವಣಿಗೆಯನ್ನು ಕುರಿತ ಮಾಡುವುದಕ್ಕೆ ನಾವು ಹೋದರೆ ನಮ್ಮ ಭಾಷೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಜನರು ಉದಾಹರಣೆಗಳನ್ನು ಕೊಟ್ಟರು. ತಾಂತ್ರಿಕ ಕ್ಷೇತ್ರಕ್ಕೆ ವೈಜ್ಞಾನಿಕ ಕ್ಷೇತ್ರಕ್ಕೆ ಅಥವಾ ಬೇರೆ ಇನ್ನಾವುದೇ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆಗಲಿ ನಮ್ಮ ಕನ್ನಡ ಭಾಷೆಯಲ್ಲಿ ಶಬ್ದ ಭಂಡಾರ ಕಡಿಮೆ ಏನೂ ಇಲ್ಲ. ಮಾನ್ಯ ಕುವೆಂಪುರವರು ಹೇಳಿದಂತೆ ಮತ್ತು ನಮ್ಮ ಭಾಷಾ ಕಾರ್ಯಕ್ರಮದ ಪ್ರಕಾರ ನಮ್ಮ ಭಾಷಗೆ ಇನ್ನಷ್ಟು ಭಾಷಗಳ ಸಂಪತ್ತನ್ನು ತಂದು ಸೇರಿಸಬೇಕು. ಕವಲು ನದಿಗಳ ರೀತಿಯಲ್ಲಿ ನಮ್ಮ ಭಾಷೆಯನ್ನು ಉಪಯೋಗ ಮಾಡಿಕೊಂಡರೆ, ನಮ್ಮ ಭಾಷಾ ಮುಖ್ಯ ವಾಹಿನಿಯನ್ನು ವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮುಖ್ಯ ವಾಹಿನಿ ಎಂದರೆ ಕವಲು ಸಂಪನ್ನತೆಯನ್ನು ಪಡೆದು ಒಂದು ದೊಡ್ಡ ಪ್ರವಾಹವಾಗುತ್ತದೆ. ಆದರೆ ಇದಕ್ಕೆ ಉಪನದಿಗಳು ಸೇರುವುದು ಬೇಡ ಎಂದು ಸುಮ್ಮನೆ ಕುಳಿತುಕೊಳ್ಳುವ ಅಭಿಮಾನ ಶೂನ್ಯ ಸಂಕುಚಿತ ಭಾವನೆ ನಮ್ಮ ಕನ್ನಡಿಗರಲ್ಲಿ ಎಲ್ಲಿಯವರೆಗ ಇರುತ್ತದೋ ಅಲ್ಲಿಯವರೆಗೂ ಈ ಭಾಷೆ ಅಭಿವೃದ್ಧಿಯಾಗುವುದಿಲ್ಲ. ನಮ್ಮಲ್ಲಿ ಸಂಕುಚಿತ ದೃಷ್ಟಿ ಇರಬಾರದು. ನಾನು ಇದಕ್ಕೆ ಏನು ಯೋಜನೆ ಮಾಡಿದ್ದೇನೆಂದರೆ I am just putting across the House and to the people of Karnataka. ಎಂಟರೆನ್ಸ್

ಟೆಸ್ಟ್ ಇದೆ. ಇದು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸಂಬಂಧಪಟ್ಟಂತಿದೆ. ನಮ್ಮ ಜನರ ಮನಸ್ಸಿನಲ್ಲೂ ಏನು ಅಭಿಮತ ಇದೆ ಎಂದರೆ ಇದರಲ್ಲಿ ಆಂಗ್ಲ ಮಾಧ್ಯಮದಿಂದ ಬಂದ ವಿದ್ಯಾರ್ಥಿಗಳು ಮಾತ್ರ ಈ ಟೆಸ್ಟ್‌ನಲ್ಲಿ ಆಗುತ್ತಾರೆ, ಉಳಿದವರಿಗೆ ಸಾಧ್ಯವಾಗುವುದಿಲ್ಲ ಎನ್ನತಕ್ಕ ಸೈಕಾಲಜಿ ಇದೆ. ಆದುದರಿಂದ ಮುಂದೆ ಆಂಗ್ಲ ಮಾಧ್ಯಮ ಶಾಲೆಯವರಿಗೇ ಒಂದು ಪ್ರತ್ಯೇಕವಾದ ರ್‍ಯಾಂಕಿಂಗ್, ಕನ್ನಡ ಮಾಧ್ಯಮ ಶಾಲೆಯವರಿಗೇ ಒಂದು ಪ್ರತ್ಯೇಕವಾದ ರ್‍ಯಾಂಕಿಂಗ್‌ನ್ನು ಈ ಎಂಟ್ರೆನ್ಸ್ ಟೆಸ್ಟ್‌ನಲ್ಲಿ ಏಕೆ ಕೊಡಬಾರದೆಂದು ಯೋಚನೆ ಮಾಡುತ್ತಿದ್ದೇನೆ.

ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ಒಂದು ವ್ಯಾಮೋಹದ ಪ್ರಶ್ನೆ ಇದೆಯೇ ಹೊರತು ಇದು ಒಂದು ಜ್ಞಾನದ ಪ್ರಶ್ನೆಯಾಗಿಲ್ಲ. ಏತಕ್ಕೆಂದರೆ ಆಂಗ್ಲ ಭಾಷೆಯ ವಿಚಾರದಲ್ಲಿ ನಾನು ಒಂದು ಮಾತನ್ನು ಕೇಳುತ್ತೇನೆ. ಮೂರನೆ ದರ್ಜೆಯ ಸಾಕರನೊಬ್ಬ ಆಂಗ್ಲೇಯನಾಗಿರುವುದಕ್ಕಿಂತ ಪ್ರಥಮ ದರ್ಜೆಯ ಕನ್ನಡಿಗನಾಗಿರುವುದು ಒಳ್ಳೆಯದು. ನನ್ನ ದೃಷ್ಟಿಯಲ್ಲಿ ಏತಕ್ಕೆಂದರೆ ಸನ್ಮಾನ್ಯ ಸಾದತ್ ಅಲಿಖಾನ್‌ರವರು ಆಂಗ್ಲ ಮಾಧ್ಯಮ ಶಾಲೆಗಳಿಗೆ ಹೋಗಿದ್ದೀರೋ ಇಲ್ಲವೋ ಗೊತ್ತಿಲ್ಲ. ನಾನು ನೋಡಿದ್ದೇನೆ. ಹಿಂದೆ ನಾವು ಬಟ್ಲರ್ ಇಂಗ್ಲೀಷ್ ಎಂದು ಹೇಳುತ್ತಿದ್ದೆವು. ಆ ಟೀಚರ್ಸ್ ನಮಗೆ ಸ್ವಾಗತ ಭಾಷಣ ಮಾಡುತ್ತಾರೆ. ಅದನ್ನು ಕೇಳುವುದಕ್ಕಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಇಂಗ್ಲೀಷ್ ಮೀಡಿಯಮ್‌ನಿಂದ ಬಂದಿರುವವರೆಲ್ಲರೂ ಬಟ್ಲರ್ ಇಂಗ್ಲೀಷ್ ಮಾತನಾಡುತ್ತಾರೆ ಎಂದು ಹೇಳುತ್ತೀರಾ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸಚಿವರು ಅಂಕಿ ಸಂಖ್ಯೆ ತರಿಸಿ ನೋಡಿ. ಎಸ್.ಎಸ್.ಎಲ್.ಸಿಯಲ್ಲಿ ಆಂಗ್ಲ ಮಾಧ್ಯಮದವರು ಬಹುತೇಕ ರ್‍ಯಾಂಕ್ ಬಂದಿಲ್ಲ. ಎಕ್ಸಪೆಶನ್ ಇವೆ. ಕನ್ನಡ ಮಾಧ್ಯಮದಲ್ಲಿ ಕಲಿತವರು ಅತ್ಯುತ್ತಮ ಗುಣಗಳನ್ನು ತೆಗೆದುಕೊಂಡು ಪ್ರಥಮ ದರ್ಜೆಯಲ್ಲಿ ಉನ್ನತ ಮಟ್ಟದಲ್ಲಿ ಪಾಸ್ ಆಗಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ತಾಂತ್ರಿಕವಾದ ಪದಗಳು ಕನ್ನಡದಲ್ಲಿ ಸಿಕ್ಕುವುದಿಲ್ಲವೆಂದು ಬಹಳ ಜನರು ಹೇಳುತ್ತಿದ್ದಾರೆ. ವೈದ್ಯಕೀಯ ಶಬ್ದಗಳ ಬಗ್ಗೆ ಡಾ. ಶಿವಪ್ಪ ಎಂಬ ಹೇಳಿ ದೊಡ್ಡ ಪಂಡಿತರು, ಈ ವೈದ್ಯ ಕಾರ್ಯದ ಬಗ್ಗೆ ಪದಕೋಶವನ್ನು ಬರೆದಿದ್ದಾರೆ. ತಮಗೆ ಪುಸ್ತಕ ಬಂದಿರಬಹುದು, ತಾವು ನೋಡಬೇಕು.

ಶ್ರೀ ಬಸವರಾಜರಾಯರೆಡ್ಡಿ : ತಾವು ಪ್ಯಾಂಟ್ ಹಾಕಿಕೊಂಡಿದ್ದೀರಲ್ಲ, ಆ ಪ್ಯಾಂಟಿಗೆ ಕನ್ನಡದಲ್ಲಿ ಅರ್ಥವೇನು?

ಶ್ರೀ ವಾಟಾಳ್ ನಾಗರಾಜ್ : ಒಬ್ಬಟ್ಟಿಗೆ ಇಂಗ್ಲೀಷ್‌ನಲ್ಲಿ ಏನು? ಒಬ್ಬಟ್ಟು ಕಜ್ಜಾಯಕ್ಕೆ ಇಂಗ್ಲೀಷ್‌ನಲ್ಲಿ ಏನು?

ಶ್ರೀ ಬಿ.ಹೆಚ್. ಬನ್ನಿಕೋಡ್ : ಶ್ರೀಯುತ ರಾಯರೆಡ್ಡಿಯವರು ಕೇಳುತ್ತಿದ್ದರು, ಇಂಗ್ಲೀಷ್‌ನಲ್ಲಿ ಏನು ಅಂತ, ಇಂಗ್ಲೀಷ್‌ನಿಲ್ಲ ರಾಗಿ, ಜೋಳ, ಸಾವೆ ಜೋಳ ಎನ್ನುವುದಕ್ಕೆ ಯಾವ ಶಬ್ದವಿದೆ. ಇಂಗ್ಲೀಷ್‌ನವರು ರಾಗಿಯನ್ನು ರಾಗಿ ಎಂದು ಕರೆಯುತ್ತಾರೆ, ಜೋಳವನ್ನು ಜವಾರ್ ಎಂದು ಕರೆಯುತ್ತಾರೆ.

ಅಧ್ಯಕ್ಷರು : ಸ್ಟೋನ್‌ಗೆ ಸ್ಟೋನ್ ಎಂದು ಕರೆಯುತ್ತಾರೆ, ಬ್ಲಾಕ್‌ಗೆ — ಬ್ಲಾಕ್ ಎಂದು ಕರೆಯುತ್ತಾರೆ, ವೈಟ್‌ಗೆ ವೈಟ್ ಎಂದು ಕರೆಯುತ್ತಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಮ್ಮ ಶಬ್ದಗಳನ್ನೇ ಅವರು ಬಳಸಿಕೊಳ್ಳುತ್ತಾರೆ, ಅದೇ ರೀತಿ ನಾವು ಬಳಸಿಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಈಗ ಪ್ರಶ್ನೆ ಡಾ. ವಿ.ಆರ್. ರಾವ್ ಇದ್ದಾರೆ. ಇಸ್ರೋದ ಅಧ್ಯಕ್ಷರು. ಅವರು ಉಡುಪಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತಿದ್ದಾರೆ. ನಾವು ಕನ್ನಡ ಮಾಧ್ಯಮದಲ್ಲಿ ಕಲಿತಿದ್ದೇವೆ. ನಮಗೆ ಆಂಗ್ಲ ಭಾಷೆ ಏನು ತೊಂದರೆಯಾಗಲಿಲ್ಲ. ಸನ್ಮಾನ್ಯ ರವೀಂದ್ರನಾಥ್ ಬಾಬು ಅವರು ಒಂದು ವಿಚಾರ ಹೇಳಿದರು. ಅದು ಏನೆಂದರೆ ಯಾವುದೋ ಒಂದು ಎಕ್ಸ್‌ರೆ ಪ್ಲಾಂಟ್

ಕನ್ನಡದಲ್ಲಿ ಕಾಗದ ಬರೆದರು. I think that officer deserves to be supended, for such a delay. ಎಂದು ಮೂರ್ಖತನದ ಪರಮಾವಧಿ ಅದು. ನಾವು ಯಾರು ಹೇಳಲಿಲ್ಲ.

ಅಧ್ಯಕ್ಷರು : ಇವತ್ತು ಫಸ್ಟ್ ಇದೆ, ಹೋಗಿ ಈ ತಕ್ಷಣ ಅವರನ್ನು ಬೇಕಾದರೆ ಸಸ್‌ಪೆಂಡ್ ಮಾಡಿ

Sir. M. Veerappa Moily : Sir, He deserves to be suspended for such a delay.

ಏತಕ್ಕೆಂದರೆ ನಾವು ಆಡಳಿತ ಭಾಷೆಯ ವ್ಯವಹಾರದ ಬಗ್ಗೆ ಹೇಳಿದ್ದೇವೆ. ಹೊರಗಿನ ಯಾವುದಾದರು ಸಂಸ್ಥೆಯೊಡನೆ ಅಥವಾ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂಥದ್ದು ಇದ್ದರೆ ಅಥವಾ ಹೊರಗಡೆ ಏನಾದರೂ ವ್ಯವಹಾರ ಮಾಡುತ್ತೇವೆ ಎಂದರೆ ಆಗ ಆಂಗ್ಲ ಭಾಷೆಯಲ್ಲಿ ಮಾಡಬೇಕೆಂದು ನಾವು ಹೇಳಿದ್ದೇವೆ. ಕನ್ನಡದಲ್ಲಿ ಏತಕ್ಕೆ ಮಾಡಬೇಕಿತ್ತು. I think there is something wrong with that gentleman.

ಶ್ರೀ ಕೆ.ಹೆಚ್. ಹನುಮೇಗೌಡ : ಅವರಿಗೆ ಟೈಪ್‌ರೈಟರ್ ಸಪ್ಲೈ ಮಾಡಿರುವುದು ಕನ್ನಡ, ಇಂಗ್ಲೀಷ್ ಅಲ್ಲ.

Sri. M. Veerappa Moily : That is not an excuse. I think fundamentally there is something wrong with that gentleman. ಬೇಕಾಗಿದ್ದಾರೆ. ಇಂಗ್ಲೀಷ್‌ನಲ್ಲಿ ಬರೆಯಬಹುದಾಗಿತ್ತು. ಅಥವಾ ಕಂಟಿನ್‌ಜೆನ್ಸಿ ಪ್ರಾವಿಷನ್ ಇದೆ. ಹೊರಗೆ ಹೋಗಿ ಟೈಪ್ ಮಾಡಿ ಕಳುಹಿಸಬಹುದಾಗಿತ್ತು. ಒಂದು ವರ್ಷಕ್ಕೆ 10–15 ಪತ್ರ ವ್ಯವಹಾರ ಮಾಡುವುದಕ್ಕಾಗಿ ನಾವು ಇಂಗ್ಲೀಷ್ ಟೈಪ್‌ರೈಟರ್‌ಗಳನ್ನು ಕೊಡಲಿಕ್ಕೆ ಆಗುವುದಿಲ್ಲ. ಏತಕ್ಕೆ ಕೊಡಬೇಕು? ಅಲ್ಲಿ ಪ್ರಮುಖವಾಗಿ ಬೇಕಾದ್ದು ಕನ್ನಡ ಟೈಪ್‌ರೈಟರ್. ಆಡಳಿತ ಹೆಚ್ಚಾಗಿ ಅಲ್ಲೇ ಇರತಕ್ಕಂಥದ್ದು. ಹೊರಗೆ ವ್ಯವಹಾರ ಮಾಡಬೇಕಾಗಿದ್ದರೆ ಫಂಡ್‌ನಲ್ಲಿ ಹಣವಿದೆ ಅದರಿಂದ ಕೊಡಬಹುದಾಗಿತ್ತು. I think better you move the concerned minister of Head of the Department for suspension of that irresponsible officer.

ಆ ಬೇಜವಾಬ್ದಾರಿಗೆ ಇದು ಒಪ್ಪುತ್ತೇನೆ ಆಂಗ್ಲಭಾಷೆ ಅದು ಕಲಿಯಬೇಕಾದ ಭಾಷೆ. ಅನುಮಾನವಿಲ್ಲ. ಆದರೆ ಆ ಮಾಧ್ಯಮ ಎಷ್ಟರಮಟ್ಟಿಗೆ ಎಲ್ಲಿರಬೇಕು, ಆ ಸ್ಥಾನಕ್ಕೆ ಅದನ್ನು ಕೊಡಬೇಕು. ಆದರೆ ನಮ್ಮ ತಾಯಿಯ ಸ್ಥಾನವನ್ನು ಬೇರೆ ಯಾರಿಗೂ ಪರಕೀಯರಿಗೆ ಕೊಡಬೇಕೆಂದು ಇವತ್ತು ಹೊರಟುಬಿಟ್ಟರೆ ನಮ್ಮ ತಾಯಿಗೆ ಏನು ಮಹತ್ವ ಇರುತ್ತದೆ? ಇದು ದೃಷ್ಟಿಕೋನ ಇರತಕ್ಕಂಥದ್ದು.

ಶ್ರೀ ವಾಟಾಳ್ ನಾಗರಾಜ್ : ತಾಯಿಯೇ ಇಲ್ಲವೆಂದು ಹೇಳತಕ್ಕಂಥವರು ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಇಲ್ಲ. ಇಲ್ಲ. ಹಾಗೆ ಯಾರೂ ಹೇಳುವುದಿಲ್ಲ, ನಾನು ಅದಕ್ಕೆ ಪ್ರಾರಂಭ ಮಾಡುವಾಗಲೇ ಹೇಳಿದೆ.

ಆಂಗ್ಲ ಮಾಧ್ಯಮ ಶಾಲೆ ವಿಚಾರ ಮಾತನಾಡುವರು ಕನ್ನಡದ ವಿಷಯದಲ್ಲಿ ಅಭಿಮಾನಶೂನ್ಯರೆಂದು ನಾನು ಖಂಡಿತವಾಗಿಯೂ ಹೇಳುವುದಿಲ್ಲ.

ಶ್ರೀ ಸಿ. ಬೈರೇಗೌಡ : ಸ್ವಾಮಿ ಲೋಕಅದಾಲತ್ ಎನ್ನುತ್ತಾರೆ. ಕನ್ನಡದಲ್ಲಿ ಎಷ್ಟು ಸ್ವಚ್ಛವಾಗಿರತಕ್ಕಂಥ ಪದಗಳಿವೆ. ಜನತಾ ನ್ಯಾಯಾಲಯ ಅಂತ ಇದೆ ಇದನ್ನು ಏತಕ್ಕೆ ಉಪಯೋಗಿಸಬಾರದು. ಸರ್ಕಾರದಲ್ಲೇ ಉಪಯೋಗವಾಗುವುದಿಲ್ಲ ಈ ಪದಗಳು. ಆದ್ದರಿಂದ ಸಾರ್ವಜನಿಕರು ಹೇಗೆ ಉಪಯೋಗ ಮಾಡುತ್ತಾರೆ? ಅದೇ ರೀತಿಯಲ್ಲಿ ಖಾರಿಫ್ ಅನುತ್ತಾರೆ, ರಬಿ ಅನ್ನುತ್ತಾರೆ. ಖಾರಿಫ್ ಅಂದರೆ, ರಬಿ ಅಂದರೆ ಏನು ಎಂದು ಖಂಡಿತ ನನಗ ಗೊತ್ತಿಲ್ಲ. ಹಿಂಗಾರು, ಮುಂಗಾರು ಎಂದು ಕನ್ನಡದಲ್ಲಿ ಪದಗಳು ಇವೆ. ಖಾರಿಫ್ ಅಂದರೆ ಎಷ್ಟು ಜನ ರೈತರಿಗೆ ಅರ್ಥವಾಗುತ್ತದೆ.

ಅಧ್ಯಕ್ಷರು : ಇದೆಲ್ಲ ಹೇಳಿದ್ದಾರೆ ಹಿಂದೆ, ನೀವು ಇರಲಿಲ್ಲ. ಖಾರಿಫ್ ಒಂದೇ ಅಲ್ಲ, ಬಾಕಿ ವಿಚಾರಗಳು ಎಲ್ಲ ಬಂದಿದ್ದವು.

ಶ್ರೀ ಸಿ. ಬೈರೇಗೌಡ : ವ್ಯವಸಾಯದಲ್ಲಿ ಬರತಕ್ಕ ಪದಗಳಿಲ್ಲ, ಹೇಳಿಕೆಗಳಲ್ಲಿ ಖಾರಿಫ್ ರಬಿ ಎಂದು ಹೇಳುತ್ತಾರೆ. ರಬಿ, ಖಾರಿಫ್ ಎಂಬುದು ಡೆಲ್ಲಿಯಲ್ಲಿ ಬಳಸಿದ ಪದಗಳು.

ಅಧ್ಯಕ್ಷರು : ಚರ್ಚೆಗೆ ವ್ಯವಸಾಯ ಸ್ಪಂದಿಸಿರಲಿಲ್ಲ. ಮಾನ್ಯ ಸದಸ್ಯರು ವ್ಯವಸಾಯವನ್ನು ಸ್ಪಂದಿಸಿದ್ದಾರೆ.

ಶ್ರೀ ಸಿ. ಬೈರೇಗೌಡ : ಕನ್ನಡ ಪದಗಳು ಏನಿದೆ ಅವನ್ನು ನೀವೇ ತನ್ನಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಏಪ್ರಿಲ್ ಒಂದನೇ ತಾರೀಖು ಶ್ರೀ ವಾಟಾಳ್ ನಾಗರಾಜ್ ಅವರು ಏನು ವಿಷಯ ಎತ್ತಿದ್ದಾರೆ ಅದು ಒಳ್ಳೆಯ ರೀತಿಯಲ್ಲಿ ಅಂತ್ಯವಾಗಿದೆ.

ಈಗ ಚಲನಚಿತ್ರ ನಿರ್ಮಾಪಕರ ಶ್ರೀ ಸತ್ಯಜಿತ್‌ರಾಯ್ ಅವರಿಗೆ ಅಭಿನಂದನೆ.

ಮಾನ್ಯ ಸದಸ್ಯರೇ,

ಕಲ್ಕತ್ತದ ಚಿಕಿತ್ಸಾಲಯವೊಂದರಲ್ಲಿ ಸಾವಿನೊಡನೆ ಸೆಣಸಾಡುತ್ತಿರುವ ಅಪ್ರತಿಮ ಸಾಹಸಗಾರ, ಅಸಾಧಾರಣ ಪ್ರತಿಭಾಶಾಲಿ ಶ್ರೀ ಸತ್ಯಜಿತ್‌ರಾಯ್ ಅವರ ಹೆಸರನ್ನು ಕೇಳದ ಭಾರತೀಯರಾರು? ಭಾರತೀಯ ಚಲನಚಿತ್ರ ಜಗತ್ತಿಗೆ ಒಂದು ಹೊಸ ಆಯಾಮವನ್ನೇ ನೀಡಿದ ಮೇರು ಸದೃಶ ವ್ಯಕ್ತಿತ್ವದ ಶ್ರೀ ರಾಯ್ ಅಘಾದ ಕಲ್ಪನಾಶಕ್ತಿಗೆ ಮತ್ತೊಂದು ಹೆಸರು. ತನ್ನ ಕನಸೆಲ್ಲವನ್ನು ನನಸು ಮಾಡಿದ ಅಪರೂಪದ ಈ ಚಿತ್ರಬ್ರಹ್ಮನಿಗ ರಾಷ್ಟ್ರ ತನ್ನ ಅತ್ಯುನ್ನತ ಗೌರವವಾದ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ಇಡೀ ರಾಷ್ಟ್ರಕ್ಕೆ ಅಭಿಮಾನದ ಸಂಗತಿ. ಇದರ ಬೆನ್ನಿಗೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ವಿಶ್ವವಿಖ್ಯಾತ ಹಾಲಿವುಡ್ ತನ್ನ ಪ್ರತಿಷ್ಠಿತ 'ಆಸ್ಕರ್' ಪ್ರಶಸ್ತಿಯನ್ನೂ ನೀಡಿರುವುದು ಭಾರತೀಯರೆಲ್ಲರ ಸಂತೋಷವನ್ನು ಇಮ್ಮಡಿ ಮುಮ್ಮಡಿಗೊಳಿಸಿದೆ. ಈ ಶುಭಸಂದರ್ಭದಲ್ಲಿ ಸತ್ಯಜಿತ್‌ರೇ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸಿ, ಅವರ ಆರೋಗ್ಯ ಶೀಘ್ರವಾಗಿ ಸುಧಾರಿಸಿ, ಮತ್ತೆ ಅವರು ಅಂತರಾಷ್ಟ್ರೀಯ ಕಾರ್ಯರಂಗಕ್ಕೆ ಮರಳಿ ಕಾರ್ಯೋನ್ಮುಖರಾಗಿ, ರಾಷ್ಟ್ರದ ಖ್ಯಾತಿಯನ್ನು ಮತ್ತೂ ಹೆಚ್ಚಿಸುವಂತಾಗಲೆಂದು ಸದನದ ಗೌರವಾದರಗಳಿಂದ ಹಾರೈಸುತ್ತದೆ.

(ಮಾನ್ಯ ಸದಸ್ಯರೆಲ್ಲರೂ ಚಪ್ಪಾಳ ತಟ್ಟಿ ಶುಭ ಹಾರೈಸಿದರು)

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ಐದು ವರ್ಷಗಳಿಗೊಮ್ಮೆ ಅರಾಕ್‌ನ್ನು ಗುತ್ತಿಗೆ ಕೊಡುವ ಬಗ್ಗೆ

ಶ್ರೀ ಆರ್. ವಿ. ದೇಶಪಾಂಡೆ : (ಹಳಿಯಾಳ) ನಿಜವಾಗಿ ಏಪ್ರಿಲ್ ಫೂಲ್ ಆದಹಾಗೆ ಆಯಿತು. ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಅದರ ಬಗ್ಗೆ ತಾವು ನಿರ್ಣಯ ಕೊಡಬೇಕಾಗುತ್ತದೆ. ನಾನು ಕೊನೆಗೆ ಬಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏನು ಬರೀ ಕೈ–ಬಾಯಿ ಸನ್ನೆ ನಡೆಯುತ್ತಿದೆಯಲ್ಲ, ವಿಚಾರ ಏನು ಎಂದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಅದು ಗಹನವಾದ ವಿಚಾರ. ಮಾತಿನ ಜೊತೆಗ ಕೈ, ಬಾಯಿ, ಕಣ್ಣು ಸನ್ನೆಗಳು.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸದನದಲ್ಲಿ ಒಂದು ಪ್ರಿವಿಲೇಜ್ ಪ್ರಶ್ನೆ ಬಂದಿತ್ತು.

ಅಧ್ಯಕ್ಷರು : ನಾನು ಸದನ ಮುಗಿಯುವುದರೊಳಗೆ ಅದರ ಬಗ್ಗೆ ತೀರ್ಮಾನ ಪ್ರಕಟಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಂದು ಅಡ್ಜಸ್ಟ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ಅದಕ್ಕೆ ಶ್ರೀ ಗುರುಪಾದಪ್ಪನವರು, ಶ್ರೀ ಕೌಜಲಗಿಯವರು ಮತ್ತು ಶ್ರೀ ಸಿದ್ದನಗೌಡರು ಸಹಿ ಹಾಕಿದ್ದಾರೆ. ಅದೇನೆಂದರೆ, ಈ ಸರ್ಕಾರ ಪ್ರತಿವರ್ಷ ಏನು ಅರಾಕ್ ದರಾಜು ಹಾಕುತ್ತಿದೆ ಅದನ್ನು 5 ವರ್ಷಗಳಿಗೊಮ್ಮೆ ಗುತ್ತಿಗೆ ಕೊಡುವ ನಿರ್ಣಯ ಮಾಡಿದ್ದಾರೆಂದು ಗೊತ್ತಾಗಿದೆ.

ಅಧ್ಯಕ್ಷರು : ನೀವು ಅಡ್ಜರ್ನ್‌ಮೆಂಟ್ ಮೋಷನ್ ಎಂದು ಹೇಳಿ ಕಳುಹಿಸಿದ್ದೀರಿ. ಅದು ಹೇಗೆ ಅಡ್ಜರ್ನ್‌ಮೆಂಟ್ ಮೋಷನ್ ಆಗುತ್ತದೆ. ಈಗತಾನೇ ಬಜೆಟ್ ಚರ್ಚೆಯಾಗಿ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಗಿ....